ಬೆಲೆ : 4 ರೂ.

ಕಲ್ಯಾಣ ಕಿರಣ

ಫೆಬ್ರುವರಿ
1996



ಕಲ್ಯಾಣ ಕಿರಣ

ಮಾಸಪತ್ರಿಕೆ, ಫೆಬ್ರುವರಿ, 1996 ಬಿಡಿ ಸಂಚಿಕೆ 4-00 ರೂ.

ಸಂಪುಟ : 25 ಸಂಚಿಕೆ : 7 ಬಸವ ಶಕೆ : 862.

ವಾರ್ಷಿಕ ಚಂದಾ : 40 ರೂ. ಆಜೀವ ಸದಸ್ಯತ್ವ : 400 ರೂ.

ಲೇಖನಗಳು ಕಿರಣಗನ್ನಡಿ ಲೇಖಕರು ಪು.ಸಂಖ್ಯೆ

ಮುಖಪುಟ : 1996 ರ ಶರಣ ಮೇಳದಲ್ಲಿ ಸಾಮೂಹಿಕ ಪ್ರಾರ್ಥನೆ.

ಹೊದ್ದಿಕೆಯ 4 ನೇ ಪುಟ : ಶರಣ ಮೇಳದಲ್ಲಿ ಧ್ವಜಾರೋಹಣ.

KALYANA KIRANA–Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore–560074. Ph : 8437234

ಯಾರಿರಬಹುದು ?

ತೊಂಭತ್ತಾರರ ಸಂಕ್ರಮಣ ದಿನದಂದು
"ಸೃಷ್ಟಿಕರ್ತನೊಬ್ಬನೇ ದೇವ,
ಧರ್ಮಕರ್ತೃ ಬಸವಣ್ಣನೆಮ್ಮ ಧರ್ಮಗುರು"
ಎಂಬ ಅತ್ಯಮೋಘ ಘೋಷಣೆಯ ಕೇಳಿ
ಒಮ್ಮೆಲೇ
ಶರೀರದಲ್ಲಾದ ವಿದ್ಯುತ್ ಸಂಚಾರದ ಬೋದ್ಯಕ್ಕೊಳಗಾಗಿ
ನಿರರ್ಗಳ ನುಡಿಯು ಕೇಳುತಲಿ ಬೆಕ್ಕಸ ಬೆರಗಾಗಿ
ಯಾರದೀ ಬಿಮ್ಮನದ ನುಡಿ ಎಂದು ಮಾತು ಮಂಕಾಗಿ
ಯೋಚನೆಯ ಮಾಡಿತ್ತು
ಯಾರಿರಬಹುದು ?
ವೀರ ಶರಣೆ ಅಕ್ಕನಾಗಲಾಂಬಿಕೆಯೆ ?
ಅಲ್ಲಾ,
ವೀರ ರಾಣಿ ಕೆಳದಿಯ ಚೆನ್ನಮ್ಮಾಜಿಯೆ ?
ಅಲ್ಲಾ,
ದೇಶಭಕ್ತೆ ಝಾನ್ಸಿಯ ಲಕ್ಷ್ಮೀ ರಾಣಿಯೆ ?
ಅಲ್ಲಾ,
ಶೂರರಾಣಿ ಬೆಳವಡಿಯ ಮಲ್ಲಮ್ಮಾಜಿಯೆ ?
ಅಲ್ಲಾ,
ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕೆ ಕಿತ್ತೂರು ಚೆನ್ನಮ್ಮಾಜಿಯೆ ?
ಮತ್ತೆ,
ಸಂಚಿಯ ಹೊನ್ನಮ್ಮಾಜಿಯೆ ?
ಹೂ ಮತ್ತೆ,
ಅಧ್ಯಾತ್ಮಿಕ ಲೋಕದಿ ಏಕೈಕ ಧೃವತಾರೆಯೆನಿಸಿದ
ಅಕ್ಕ ಮಹಾದೇವಿಯೆ ?
ಅಲ್ಲಾ, ಇವರಾರೂ ಅಲ್ಲ ?
ಯಾರಿರಬಹುದು ? ಯಾರಿದಿರಬಹುದು ?
ಈ ಕೆಚ್ಚೆದೆಯ ಧೀರ-ನುಡಿ

ಎಂದು ಆಲೋಚನೆಯ ತರಂಗ ಮನದಲ್ಲೇಳುತ್ತಲೆ ?
ತಟ್ಟನೆ ಹೊರಬಂದು ನೋಡಿದೊಡೆ, ಓಹ್, ಇವರೇ ?
ಇವರೆಮ್ಮ ಬಸವ ಧರ್ಮ ಪೀಠದ ಮಹಾಜಗದ್ಗುರುಗಳು,
ಎಮ್ಮನದ "ಮಾತಾಜಿ" ಅದು ಸರಿ,
ಇದುವರೆಗೂ ನಾ ಕೇಳಿದ ವೀರವಾಣಿ, ಇವರದೇ ?
ಕಟುನುಡಿಯ ಪೇಳಲರಿಯದ
ಮಾತಾಜಿಯ ಮಾತಿನಲಿ, ಕಠೋರದ ಕಠಿಣತೆಯೆ ?
ಇಲ್ಲಾ, ನಾನಿದ ನಂಬೊಲ್ಲ, ಆದರೂ,
ಸಂದೇಹವೇತಕೋ ಸುಳಿಯಕೊಡಗಿತು ಮನದಿ
ಮೇಣ್ ಈ ಮಾತು ಮಾತಾಜಿಯದೇ
ಎಂಬ ಶಂಕೆ ಮನಕಾಯ್ತು,
ಮತ್ತೆ, ಮತ್ತೆ ಯೋಚಿಸಿತು, ಅರೇ,
ಈ ಸ್ವರವು ಅಪ್ಪಾಜಿಯದಿದ್ದಂತಿದೆ, ಅಲ್ಲವೇ ಮತ್ತೆ,
ಅವರಲ್ಲದಿನ್ನಾರಿಗೆ ಬಪ್ಪುದೀ ಘನ ನುಡಿಯ ವೈಖರಿ, ಅದಕೆ
ಮಹಾಮನೆಯ ಸುತ್ತಲೂ ಹುಡುಕಾಡಿದೆ
ಮೂಲೆ ಮೂಲೆಗೂ ಕಣ್ಣೋಟ ಹಾಯಿಸಿದೆ
ಕಡೆಗೆ, ಬೇಸತ್ತು ಬರದೆ
ಎಲ್ಲೂ ಅಪ್ಪಾಜಿ ಕಾಣದಾದೆ, ನಂತರದಿ,
ಎಚ್ಚೆತ್ತ ಒಳದನಿಯು ಕೂಗಿ ಹೇಳಿತು.
ಏಯ್, ಅಲ್ನೋಡು, ಅದೇ ಕೇಳು
ಕಿವಿಯ ನಿಟ್ಟಗಿರಿಸಿ ನೀ ಆಲಿಸು, ಅದೇ ಅಪ್ಪಾಜಿಯ ವಾಣಿ
ಮಾತಾಜಿಯ ನುಡಿಯಲಿ ಹೊರಹೊಮ್ಮಿ ಬರುತಿದೆ
ಗುರು ಬಸವ ಸಂಕಲ್ಪವ ಪೂರೈಸಿರೆಂದು, ಕೈಯ್ಯಂತು ಹರಸುತಿದೆ
ಏನು ಸೋಜಿಗವೋ, ಅಪ್ಪಾ ಬಸವಪ್ಪಾ
ಧನ್ಯ, ಧನ್ಯ, ಅತಿಧನ್ಯ, ಮಾತಾಜಿಯ ಪಡೆದ
ನಾವೆಲ್ಲರೂ ಧನ್ಯ
ಬನ್ನಿ ಜೊತೆಗೂಡಿ ನಾವೆಲ್ಲ ಗೈವ
ದಿವ್ಯ ಚರಣಕೆ ಹೃನ್ಮನದ ನಮನ
॥ ಜೈ ಗುರು ಬಸವೇಶ ಹರಹರ ಮಹಾದೇವ ॥

—ಶರಣೆ. ಭಾರತಿ ಕೆಂಪಯ್ಯ, ಬೆಂಗಳೂರು.

ವಚನ ಪಠಣ
ಅತ್ಯಂತ ಪವಿತ್ರವಿಧಿ

—ಬಸವಾತ್ಮಜೆ

ಸಮುದಾಯ ಪ್ರಾರ್ಥನೆ ದಿ. 14-1-1996 ರಂದು ನಡೆದಿತ್ತು. ಮೊದಲು ಪ್ರಾರ್ಥನೆ, ಎಲ್ಲರನ್ನೂ ಆನಂದ ಸರಸಿಯಲ್ಲಿ ತೇಲಿಸುತ್ತಿತ್ತು. ನಂತರ ವಚನ ಪಠಣ. ಇದನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ಶರಣ ಮೇಳದಲ್ಲಿ ಅಳವಡಿಸಲಾಗಿದೆ. ಶರಣ ಮೇಳದ ಮುಖ್ಯ ಆಚರಣೆಯೇ ಈ ಸಮುದಾಯ ಪ್ರಾರ್ಥನೆ ಮತ್ತು 101 ವಚನಗಳ ಪಠಣ. ಆರು ಜನ ಧರ್ಮಾಧಿಕಾರಿಗಳು ಈ ವಚನಗಳನ್ನು ಉಚ್ಚರಿಸಿ, ಸಭಿಕರು ಪುನರುಚ್ಚರಿಸಲು ಸೂಚನೆ ನೀಡಬೇಕು. ಒಬ್ಬೊಬ್ಬ ಧರ್ಮಾಧಿಕಾರಿಗೆ 17 ವಚನ ಬಂದು, ಕಡೆಯ ಪಾಠಕರಿಗೆ 16 ವಚನ ಉಳಿಯುತ್ತವೆ. ಇದು ಸುಮಾರು 45 ನಿಮಿಷ ಹಿಡಿಯುತ್ತದೆ. ಕೆಲವು ಜನರಿಗೆ ಪ್ರಾರ್ಥನೆ ಮಾಡಲು ತಾಳ್ಮೆ ಇರದು, ವಚನ ಪಠಣ ಮಾಡಲು ತಾಳ್ಮೆ-ಆಸಕ್ತಿ ಇರದು. ಆಗ ಓರ್ವರು ಸಭಿಕರು ಎದ್ದು ನಿಂತು "ವಚನ ಪಠಣ ಕಡಿಮೆ ಮಾಡಿರಿ. ನಮಗೆ ಭಾಷಣಗಳು ಹೆಚ್ಚು ಬೇಕು." ಎಂದರು ಇದು ನನ್ನನ್ನು ಬಹುವಾಗಿ ವ್ಯಗ್ರಗೊಳಿಸಿತು. ಯಾವುದೇ ಒಂದು ಶಿಸ್ತು (Discipline) ಏಕರೂಪತೆ (Uniformity) ಇಲ್ಲದೆ ಇರುವ ಲಿಂಗಾಯತ ಸಮಾಜಕ್ಕೆ ಒಂದು ಶಿಸ್ತು-ಏಕರೂಪತೆ ತರಬೇಕೆಂದು ಹಗಲಿರುಳು ಚಿಂತಿಸುತ್ತ ನಾನು ಪ್ರತಿಯೊಂದನ್ನು ಸೂಕ್ಷ್ಮವಾಗಿ, ಎಚ್ಚರಿಕೆ ಮುಂಜಾಗ್ರತೆಯಿಂದ ಅಳವಡಿಸುತ್ತಿರುವಾಗ ಇಂಥ ಪ್ರತಿಕ್ರಿಯೆ ತೋರಿಸಿದ್ದು ಕೋಪಕ್ಕೆ ಒಂದು ಕಾರಣವಾದರೆ, ಇಂಥ ಜನರುಗಳು ಮುಂದೆ ಭಾಷಣಗಳ ಬುಗ್ಗೆಗೆ ಮರುಳಾಗಿ ವಚನ ಪಠಣವನ್ನು ಕಡಿಮೆ ಮಾಡುತ್ತ, ಕಡೆಗೆ ನಿಲ್ಲಿಸಲೂ ಬಹುದು ಎಂಬ ಸಂದೇಹ ಬಂದು ಆ ತಕ್ಷಣವೇ ಬಸವ ಧರ್ಮಪೀಠದ ಪರವಾಗಿ **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು**, ಗಣನಾಯಕ-ಗಣನಾಯಕಿಯರನ್ನು ನಿಲ್ಲಿಸಿ, ಧರ್ಮಪಿತ ಬಸವಣ್ಣನವರ ಭಾವಚಿತ್ರದಲ್ಲಿನ ಪಾದಗಳನ್ನು ಮುಟ್ಟಿಸಿ, ಎಂದೆಂದೂ ನಿರಂತರವಾಗಿ ಶರಣ ಮೇಳವನ್ನು ನಡೆಸಿಕೊಂಡು ಹೋಗುವುದೇ ಅಲ್ಲದೆ ವಚನ ಪಠಣವನ್ನು ತಪ್ಪದೆ ನಡೆಸುವುದಾಗಿ ಪ್ರತಿಜ್ಞೆ ಮಾಡಿಸಿಕೊಳ್ಳಲಾಯಿತು ಮತ್ತು ವಚನ ಸಂಗಮ ಎಂಬ ಪುಸ್ತಕದಲ್ಲಿ ಇರುವ 101 ವಚನಗಳನ್ನೇ ಪಠಣ ಮಾಡುವುದಾಗಿ ಪ್ರತಿಜ್ಞೆ ಮಾಡಿಸಲಾಯಿತು.

ಈ ಅನಿರೀಕ್ಷಿತ ಘಟನೆಯನ್ನು ನಂತರ ಸ್ವಾವಲೋಕನ ಮಾಡಿದಾಗ ಇದು "ಬಸವ ಪ್ರೇರಿತ" ಎನ್ನಿಸಿತು. ನಾನು ಕೋಪಗೊಂಡು, ತಟ್ಟನೆ ಪ್ರತಿಜ್ಞೆ ಮಾಡಿ-

ಸುವಂತಹ ನಿರ್ಧಾರ ತೆಗೆದುಕೊಳ್ಳಲು ಪ್ರೇರಣೆ ನೀಡಿದ ದೇವನಿಗೆ, ಧರ್ಮ ಗುರುವಿಗೆ ಅನಂತ ಶರಣು.

ಒಮ್ಮೆ ನಮ್ಮೊರ್ವ ಆತ್ಮೀಯ ಭಕ್ತೆ ಶರಣೆ. ನಿರ್ಮಲಾ ಜಯದೇವ ಹೇಳಿದ್ದರು, "ಹೇಗಿದ್ದರೂ ಪ್ರತಿವರ್ಷ ವಚನ ಪಠಣ ಮಾಡಲಾಗುವುದು. ಪ್ರತಿ-ವರ್ಷವೂ 101 ವಚನ ಆಯ್ದು ಮುದ್ರಿಸಿದರೆ ಹೆಚ್ಚು ವಚನಗಳು ಲಭ್ಯವಾಗುತ್ತವೆ" ಎಂದು ಸೂಚಿಸಿದರು. ನಾನು ಒಪ್ಪಲಿಲ್ಲ. ವಚನಗಳನ್ನು ಯಾಂತ್ರಿಕವಾಗಿ ಓದುವುದಲ್ಲ ಅವುಗಳ ಒಂದೊಂದು ಪದವನ್ನೂ ಮನನ ಮಾಡುತ್ತ ಒಳಗೆ ಇಳಿಸಿಕೊಳ್ಳಲು, ಅರ್ಥಮಾಡಿಕೊಳ್ಳಲು, ನಂತರ ಅಂಗವಿಸಿ (ಆಚರಣೆಗೆ ತಂದು)ಕೊಳ್ಳಲು ಯತ್ನಿಸಬೇಕು. ಆದ್ದರಿಂದ ಸಮುದಾಯ ಪ್ರಾರ್ಥನೆಯ ವಚನ ಪಠಣದಲ್ಲಿ ಈ 101 ವಚನಗಳೇ ಪಠಿಸಲ್ಪಡಬೇಕು. ಇದಕ್ಕೆ ಕಾರಣ ನನ್ನ ಹಠಮಾರಿತನವೆ ?

1. ಇಲ್ಲ, 101 ವಚನಗಳನ್ನು ಎಚ್ಚರಿಕೆಯಿಂದ ಆಯ್ದು ಮಾಲೆ ಮಾಡಲಾಗಿದೆ. ಧರ್ಮಕರ್ತ ಬಸವಣ್ಣನವರೇ ಧರ್ಮಗುರು, ವಚನ ಸಾಹಿತ್ಯವೇ ಧರ್ಮ ಸಂಹಿತೆ ಮುಂತಾದುವನ್ನು ಬಿಂಬಿಸುವ ವಚನಗಳನ್ನು ಪೋಣಿಸಿಡಲಾಗಿದೆ. ಆದಿ ಪ್ರಮಥರು ಮತ್ತು ಅವರ ಸಮಕಾಲೀನರ ಮಾನವತಾವಾದ, ಸಮತಾವಾದದ ಸಂದೇಶವನ್ನು ಸಾರುವ ವಚನಗಳನ್ನು ಸಂಗ್ರಹಿಸಲಾಗಿದೆ. ವರ್ಷಕ್ಕೊಮ್ಮೆ ಬೇರೆ ಬೇರೆ ವಚನ ಆಯ್ದು ಪಠಣ ಮಾಡತೊಡಗಿದರೆ ಶಿಥಿಲತೆ ಪ್ರಾಪ್ತವಾಗಿ ಮುಖ್ಯ ವಿಚಾರಗಳನ್ನು ಪ್ರತಿಪಾದಿಸುವ ವಚನ-ಗಳನ್ನು ಬದಿಗಿಟ್ಟು, ಬರೀ ಮತಾಚರಣೆಯ ವಚನಗಳನ್ನೇ ಸೇರಿಸಬಹುದು. ಬಸವ ಪ್ರಣೀತ ಲಿಂಗಾಯತ ಧರ್ಮದ ಸಾರವನ್ನು ಸಂಕ್ಷಿಪ್ತವಾಗಿ ಆದರೆ ಸಮಗ್ರವಾಗಿ ಈ 101 ವಚನಗಳ ಸಂಗ್ರಹ ಮುಂದಿಡುವ ಕಾರಣ, ಇವನ್ನು ಬದಲಿಸಕೂಡದು.

2. ಅನೇಕರು ತಿಳಿದಿರುವುದೇನೆಂದರೆ ವಚನ ಪಠಣಕ್ಕಿಂತ ಹಲವರ ಭಾಷಣ ಮುಖ್ಯ ಎಂದು, ನಮ್ಮ, ಮತ್ತಿತರ ಭಾಷಣಗಳಿಗಿಂತ ಆದಿ ಶರಣರ ಭಾಷಣ ಮುಖ್ಯ. ಅವರ ಭಾಷಣ ವಚನಗಳ ರೂಪದಲ್ಲಿ ಹರಿದಿದೆ. ಅಲ್ಲಿ ಸತ್ಯ ವಿಶ್ವಾಸವಿದೆ. ಸಮತೆಯಿದೆ, ಸಮ್ಯಕ್ ದರ್ಶನವಿದೆ. ಆದ್ದರಿಂದ ವಚನಗಳನ್ನು ಪಠಣ ಮಾಡುವಾಗ ಆದಿ ಶರಣರು ನಮಗೆ ಸಂದೇಶ, ಆದೇಶ ನೀಡುತ್ತಿದ್ದಾರೆ ಎಂದು ಭಾವಿಸಬೇಕು.

ಅನೇಕರು ನಡೆಸುವ ಸಭೆ-ಸಮ್ಮೇಳನಗಳು ಹಿಡಿಸಲಾರದಷ್ಟು ಜನರ ಭಾಷಣಗಳಿಂದ ತುಂಬಿ, ಒಬ್ಬೊಬ್ಬರು ಒಂದೊಂದು ತರಹ ಮಾತನಾಡಿ ಕೇಳುಗರನ್ನು ಗೊಂದಲಕ್ಕೆ ಕೆಡವಿ ಮನೆಗೆ ಕಳಿಸುವರು. ತಮಗೆ ನಂಬಿಕೆ-ಶ್ರದ್ಧೆ ಇಲ್ಲದ್ದರ ಬಗ್ಗೆಯೇ

ಗಂಟೆ ಗಟ್ಟಳೆ ಮಾತನಾಡುವರು. ವೇದಿಕೆಯ ಮೇಲೆ ರಾಗ-ದ್ವೇಷಗಳನ್ನು ಹೊರ ಚೆಲ್ಲುವರು. ತಮಗೆ ಪ್ರಿಯವಾದವರನ್ನು ಅಟ್ಟಕ್ಕೇರಿಸುವರು, ಬೇಡವಾದವರ ಬಗ್ಗೆ ದ್ವೇಷ ಕಾರುವರು. ಕೆಲವರಂತೂ ಬರೀ ಹೊಗಳುವುದರಲ್ಲೇ ಜನಪ್ರಿಯತೆ ಗಳಿಸಿಕೊಳ್ಳುವರು. ಇದು ನಿಲ್ಲಬೇಕು. ಶರಣ ಮೇಳದ ವೇದಿಕೆ ಕೇವಲ ಗುರು [ಬಸವಣ್ಣ] -ಲಿಂಗ [ಸೃಷ್ಟಿಕರ್ತ]-ಜಂಗಮ [ಶರಣರು- ಶಿವಯೋಗಿಗಳು] ಇವನ್ನು ಕೊಂಡಾಡ-ಲಿಕ್ಕೆ ಮೀಸಲಾಗಬೇಕೇ ವಿನಾ ಲೌಕಿಕರನ್ನಲ್ಲ. ಇದನ್ನು ಅಂತರ್ಯದಲ್ಲಿ ಇಟ್ಟುಕೊಂಡೇ ಈ ಸಲದ ಶರಣ ಮೇಳದ ರೂಪುರೇಷೆ ಹಾಕಿದ್ದೆ. ಆದರೆ ಕಡೆಗೂ ಅನಿರೀಕ್ಷಿತವಾಗಿ ಒಬ್ಬರ ಬಾಯಿಂದ ನಮ್ಮ ಪವಿತ್ರ ಶರಣ ಮೇಳದ ವೇದಿಕೆಯ ಮೇಲೆ ಉಪಸ್ಥಿತ-ರಿಠದ ಯಾರ್‍ಯಾರೋ ಮಠಾಧೀಶರ ಟೀಕೆ ನಡೆದು ಮನಸ್ಸಿಗೆ ವ್ಯಥೆ ಎನಿಸಿತು.

ವಚನಗಳ ಪಠಣ. ವಚನಗಳ ಆಧಾರದ ಮೇಲೆಯೇ ಉಪನ್ಯಾಸ ಮಾಡಿದರೆ ವಿಷಯಾಂತರವಾಗದು. ಇಸ್ಲಾಂ ದಲ್ಲಿ ಒಂದು ಕಡೆ ಗಮನಿಸಿದೆ. 'ಜುಮ್ಮಾ ನಮಾಜ್ [ಸಾಮೂಹಿಕ ಪ್ರಾರ್ಥನೆಯ] ಅವಧಿಯನ್ನು ದಾಟಿ ಪ್ರವಚನ ನಡೆಯಬಾರದು'. ಹಿಂದೂ ಸಂಸ್ಕೃತಿಯಲ್ಲಿ ಜನಪ್ರಿಯತೆ ಗಳಿಸಲು ಜನ ರಂಜನೆಗಾಗಿ ಪರಸ್ಪರ ಕೀಳು ಹಾಸ್ಯ, ಕಥೆ ಮುಂತಾದುವಕ್ಕೆ ಇಳಿಯುತ್ತಾರೆ. ಪ್ರಗತಿಪರ ಲಿಂಗಾಯತ ಧರ್ಮ, ವಚನ ಸಾಹಿತ್ಯ ಕಳೆಗುಂದಿದ್ದೇ ಕೀರ್ತನ-ಪುರಾಣಗಳಿಂದ, ಪುರಾಣ-ಕೀರ್ತನ ಬರೆದವರೂ, ಮಾಡುವವರು ವಚನ ಸಾಹಿತ್ಯದ ಪ್ರವಚನ ಕೇಳುವ ಅಭಿರುಚಿ ಕೆಡಿಸಿ, ಧಾರ್ಮಿಕ ಶ್ರವಣದ ಪಾವಿತ್ರ್ಯ ಗಾಂಭೀರ್ಯ ಕಳೆಯುತ್ತಾರೆಂದರೆ ಸುಳ್ಳಲ್ಲ.

ಶರಣ ಮೇಳದ ವೇದಿಕೆಯಿಂದ ವೈಚಾರಿಕ ಮತ್ತು ಸತ್ವಯುತ ಉಪನ್ಯಾಸ ಮಾಡಲು ವಿಚಾರಶೀಲರು ಸಂತೋಷ ಪಡುತ್ತಾರೆ. ಏಕೆಂದರೆ ಆಳ ಮತ್ತು ಗಹನ ವಿಚಾರ ಆಲಿಸಲು ಇಲ್ಲಿ ಶರಣ ಬಂಧುಗಳು ಊಟ-ನಿದ್ರೆ ಮರೆಯುತ್ತಾರೆ.

3. ವಚನಗಳು ಮಂತ್ರಗಳಿಗಿಂತ ಮಿಗಿಲು. ಅವನ್ನು ನುಡಿಯುವಾಗ ಭಯ-ಭಕ್ತಿ-ನಿಷ್ಠೆ ಇರಬೇಕು. ಏನೋ ಮುದ್ರಣಗೊಂಡ ಶಬ್ದಗಳು ಎಂಬ ಲಘು ಭಾವ ಇರಬಾರದು. ಸಾಮೂಹಿಕ ಪ್ರಾರ್ಥನೆ, ವಚನ ಪಠಣ ಮಾಡುವಾಗ [ಅನ್ಯರ ಭಾಷಣ ನಡೆಯುವಾಗ] ಪರಸ್ಪರ ಮಾತನಾಡಿಕೊಳ್ಳುವುದು ಜೊತೆಗೆ ಇರು-ವವರೊಡನೆ ಗುಸುಗುಸು ಮಾತನಾಡುವುದು ; ಶಿಷ್ಟಾಚಾರವೂ ಅಲ್ಲ, ಶ್ರದ್ಧೆಯೂ ಅಲ್ಲ. ಇದು ಅನ್ಯರ ಏಕಾಗ್ರತೆಗೆ ಭಂಗ ತರುವುದು. ಅಂಥ ನಡಾವಳಿ ಕಂಡಾಗ ಅನ್ಯರಿಗೆ ಜಿಗುಪ್ಸೆ ಎನ್ನಿಸುವುದು. ಸೃಷ್ಟಿಕರ್ತ, ಧರ್ಮ ಕರ್ತರ ನಾಮಸ್ಮರಣೆ ಮಾಡುವಾಗ ಅವರ ಸಂದೇಶ ಕುರಿತು ಚಿಂತಿಸುವಾಗ ಭಯ ಭಕ್ತಿ ಇರಬೇಕು.

[ನನಗಂತೂ ಪ್ರಾರ್ಥನೆ ಮಾಡುವಾಗ ಯಾರಾದರೂ ಮಾತನಾಡಿದರೆ, ಓಡಾಡುತ್ತಿದ್ದರೆ ವಿಪರೀತ ಕೋಪ ಬರುತ್ತದೆ. ಅನ್ಯರು ಉಪನ್ಯಾಸ ಮಾಡುವಾಗ ಇತರರು ಮಾತಾಡುತ್ತಿದ್ದರೆ, ನನ್ನನ್ನು ಮಾತನಾಡಿಸಬಂದರೆ ಮನಸ್ಸು ವ್ಯಗ್ರ-ಗೊಳ್ಳುತ್ತದೆ. ತೀರಾ ಅನಿವಾರ್ಯವಿದ್ದರೆ ಪ್ರತಿಕ್ರಿಯೆ ನೀಡುತ್ತೇನೆ. ಇಲ್ಲದಿದ್ದರೆ ಸಿಟ್ಟಿಗೇಳುತ್ತೇನೆ. ಓರ್ವ ವ್ಯಕ್ತಿ ಎಷ್ಟೇ ಸಣ್ಣವನಿರಲಿ, ಆತನ ಮಾತಿನಲ್ಲೇ ನಮಗೆ ಒಂದು ಹೊಸ ಅಂಶ, ಸತ್ಯ ಏಕೆ ಸಿಗಬಾರದು ? ಒಮ್ಮೆ ಓರ್ವ ಹುಚ್ಚ ಭಿಕ್ಷೆ ಬೇಡುತ್ತಾ ಬಂದ. ಹೊಟ್ಟೆ ತುಂಬಾ ಊಟಕ್ಕಿಡಿಸಿ, ಹಣ ಕೊಟ್ಟೆ, ಅವನಿಗೆ ನಾವು ಯಾರು ಎಂಬ ಕಲ್ಪನೆಯೂ ಇರಲಿಲ್ಲ. ಅವನು ಅಂದ, "ಜಗತ್ತಿನಲ್ಲಿ ಲಕ್ಷ್ಮೀಪತಿಗಳು ಬಹಳಷ್ಟು ಜನ ಇರುತ್ತಾರೆ ; ಲಕ್ಷ್ಮೀ ಪುತ್ರರು ಕಮ್ಮಿ" ಅದರ ಅರ್ಥ ಕೇಳಿದೆ. "ಲಕ್ಷ್ಮೀಯನ್ನು ಪತ್ನಿ ಎಂಬಂತೆ ಅಡಿಯಾಳು, ಸೇವಕಿ ಎಂಬಂತೆ ಇಟ್ಟುಕೊಂಡು ಟ್ರೆಜರಿಯಲ್ಲಿ ಆಕೆಯನ್ನು ಕೂಡಿಹಾಕುವವನು ಲಕ್ಷ್ಮೀ ಪತಿ. 'ತಾಯಿ, ನೀನು ನನಗೂ ತಾಯಿ ಜಗತ್ತಿಗೂ ತಾಯಿ. ನನ್ನ ಬಳಿ ಬಂದಿದ್ದೀ ನಾಲ್ಕಾರು ಜನರಿಗೆ ಉಪಯೋಗ ವಾಗು' ಎಂದು ದಾನಧರ್ಮ ಮಾಡುವವನು ಲಕ್ಷ್ಮೀಪುತ್ರ" ಎಂಥಾ ಸತ್ಯವಾದ ಮಾತು, ಓರ್ವ ಹುಚ್ಚನ ಬಾಯಿಯಲ್ಲಿ ! ಆದ್ದರಿಂದ ಎಲ್ಲರ ಮಾತುಗಳನ್ನು ಆಲಿ-ಸುವ ಸದಭ್ಯಾಸ ಕೇಳುಗರಲ್ಲಿ ಬೆಳೆಯಬೇಕು.

4. ಆದಿ ಶರಣರು ವಚನ ಸಾಹಿತ್ಯದ ಬಗ್ಗೆ ತುಂಬುಗೌರವ ಉಳ್ಳವರು. ತಾವು ಆಡಿದ ಮಾತು ಹೃದಯಾಂತರಾಳದಿಂದ ಬಂದ ಅಂತರಾತ್ಮದ ನುಡಿ, ಸತ್ಯದ ಕಿಡಿ ಎಂಬುದನ್ನವರು ಅರಿತಿದ್ದರು, ಅಂದಿನವರೆಗೂ ವಂಚಿಸುತ್ತಾ ಬಂದಿದ್ದ ಧಾರ್ಮಿಕ ಸಂಹಿತೆಗಳನ್ನು ನಿರಾಕರಿಸಿ, ನಿವಾರಿಸಿ ವಂಚನೆಯ ಸಂಕೇತವೇನೋ ಎಂಬಂತೆ ೦ ತೆಗೆದು 'ವಚನ'ಗಳನ್ನು ನುಡಿದರು, ಅದಕ್ಕಾಗಿ ವಚನಗಳ ಬಗ್ಗೆ ಹೀಗೆ ಬಣ್ಣಿಸಿದರು.

ಆದ್ಯರ ವಚನ ಪರುಷ ಕಂಡಯ್ಯ ! ಸದಾಶಿವನೆಂಬ ಲಿಂಗವ
ನಂಬುವುದು. ನಂಬಲೊಡನೆ ನೀ ವಿಜಯಿ ಕಂಡಯ್ಯ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ
ಹಾಲತೊರೆಗೆ ಬೆಲ್ಲದ ಕೆಸರು ; ಸಕ್ಕರೆಯಂತಹ
ಮಳಲು, ತವರಾಜದಂತಹ ನೊರೆತೆರೆಗಳು. ಇಂತಪ್ಪ
ಆದ್ಯರ ವಚನವಿರಲು ಬೇರೆ ಭಾವಿಯ ತೋಡಿ
ಉಪ್ಪ ನೀರ ಸವಿದಂತಾಯಿತ್ತಯ್ಯ ಎನ್ನ ಯುಕ್ತಿ,
ನಿಮ್ಮ ವಚನಂಗಳ ಕೇಳದೆ ಅನ್ಯ ಪುರಾಣಂಗಳ ಕೇಳಿ
ಕೆಟ್ಟೆನಯ್ಯ ಕೂಡಲ ಸಂಗಮ ದೇವ.

ಪಾತಾಳದಗ್ಘವಣೆಯ ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ
ತೆಗೆಯಬಹುದೆ ? ಶಬ್ದ ಸೋಪಾನವ ಕಟ್ಟಿ ನಡೆಸಿದವರು ನಮ್ಮ
ಪುರಾತನರು. ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು
ಗೀತ ಮಾತೆಂಬ ಜ್ಯೋತಿಯ
ಬೆಳಗಕೊಟ್ಟರು ಕೂಡಲ ಚನ್ನಸಂಗನ ಶರಣರು.

ಇಂಥ ವಚನಗಳು ವೇದಾಗಮ ಪುರಾಣಗಳನ್ನು ಮೀರಿಸುವ ದೇವ ವಾಕ್ಯ-ಗಳು ಎಂಬ ಭಾವ ಆದಿ ಶರಣರಲ್ಲಿ ತುಂಬಿತ್ತು. ಅದಕ್ಕೆ ಅವರು ನುಡಿದರು :

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ನೊರೇಟರ ಅಧ್ಯಯನಕ್ಕೆ
ಶತರುದ್ರೀಯ (ಯಾಗ) ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ.

ವೇದಂಗಳ ಹಿಂದೆ ಹರಿಯದಿರು, ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು
ಪುರಾಣಂಗಳ ಹಿಂದೆ ಬಳಲದಿರು, ಬಳಲದಿರು
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈಪಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು.

ಅನೇಕರು ತಿಳಿದಿರಬಹುದು ; 'ನಾವೆಲ್ಲ ವಚನಗಳನ್ನು ಓದಿಯೇ ಇರುತ್ತೇವೆ. ಇಲ್ಲಿ ಶರಣ ಮೇಳದಲ್ಲಿ ಓದುವ ಅಗತ್ಯವೇನಿರುತ್ತದೆ.' ಎಂದು ನನಗನ್ನಿಸುವ ಮಟ್ಟಿಗೆ ಕೆಲವು ವಚನಾಭ್ಯಾಸಿಗಳಾದ ಬಸವ ಪಥಿಕರನ್ನು ಬಿಟ್ಟರೆ ಬಹುಪಾಲು ಸ್ವಾಮಿಗಳು ಸಹ ವಚನಗಳನ್ನು ಓದಲಿಕ್ಕಿಲ್ಲ ಎಂದು. ಯಾರೇ ಆಗಲಿ ವಚನಗಳನ್ನು ಓದುವವರು ಧರ್ಮಕರ್ತ ಬಸವಣ್ಣನವರನ್ನು ಧರ್ಮಗುರು ಎನ್ನದಿರಲು ಹೇಗೆ ಸಾಧ್ಯ ? ಮೇಲ್ಕಂಡ ವಚನ ಓದಿದವರು ಆಗಮಗಳೇ ನಮ್ಮ ಧರ್ಮಸಂಹಿತೆ ಎಂದು ಹೇಗೆ ಅನ್ನಲು ಸಾಧ್ಯ ? ಹಾಗೆ ಅನ್ನುತ್ತಾರೆ ಎಂದ ಮೇಲೆ ಅವರು ವಚನಗಳನ್ನು ಓದುತ್ತಿಲ್ಲ ಎಂದರ್ಥ. ಇಂಥ ಗುರುಗಳು, ಇಂಥ ಭಕ್ತರಿಗಾದರೂ ಕಡ್ಡಾಯ ವಚನ ಪಠಣದ ಮೂಲಕ ಸತ್ಯವು ದೃಗ್ಗೋಚರವಾಗಬಹುದು,

ಜಾತಿ ವಾದಿಗಳಿಂದ ವಚನ ಸಾಹಿತ್ಯಕ್ಕೆ ಸಂಕಷ್ಟ ಎರದಿದಾಗ ತಮ್ಮ-ತನು-ಮನ-ಪ್ರಾಣಗಳನ್ನು ಸಮರ್ಪಿಸಿ ಶರಣರು ಹೋರಾಡಿದರು. ವಚನ ಸಾಹಿತ್ಯದ

ಮೌಲ್ಯವೇನು, ಅದು ಮುಂದೆ ಹೇಗೆ ವಿಶ್ವಕ್ಕೆ ದಾರಿದೀಪವಾಗ ಬಲ್ಲದು ಎಂಬುದನ್ನು ಅರಿತಿದ್ದರು. ವಚನ ವಾಙ್ಮಯದ ರಕ್ಷಣೆಯ ನೇತೃತ್ವ ವಹಿಸಿದ ಮಡಿವಾಳ ಮಾಚಿದೇವರು ಇದರ ಬಗ್ಗೆ ಆಡಿರುವ ಮಾತುಗಳು, ಬಳಸಿರುವ ವಿಶೇಷಣ ನೋಡಿದರೆ ಆಶ್ಚರ್ಯ ಎನಿಸುತ್ತದೆ.

[ಬಸವ-ಕಿರಣ ವಿಶೇಷ ಸಂಚಿಕೆಯಿಂದ ಆಯ್ದುಕೊಳ್ಳಲಾಗಿದೆ]

❈ ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

❈ ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ, ನರಕ ತಪ್ಪದು

❈ ಪ್ರಮಥರುದಯದ ಮುಂದೆ ಆಕರಿಸಿ ಬಂತು.
ಅಷ್ಟದಿಕ್ಕುಗಳೊಳಗೆ ವಿವೇಕಗಳ ಮಾಡಿ
ರತ್ನ ಪೂಜಿತವೆಂದು ಈ ಶರಣ ಕಲಿದೇವ
ವಿವೇಕದಲ್ಲಿ ಇಟ್ಟ ವಚನ ಭಾಂಡಾರಗಳ
ಜೋಕೆಯಲ್ಲಿ ಓದಿ ಶಿವನ ಡಂಗುರವೆಂದು.


❈ **ನಿಮ್ಮ ವಚನ ಭಂಡಾರಗಳು** ಪ್ರೀತಿಯಲ್ಲಿ ನೀವು ಓದಿ
ಅಮೃತವೆಂದು ಸಾರವುಳ್ಳ ಶಿವಶರಣರಾಲಿಪುದು ನೀ ಕರಿಸಬೇಡೆ.


❈ ಆ ಶರಣ ಮಡಿವಾಳ ಮಾಚಯ್ಯ ಬಿಚ್ಚಿಟ್ಟ ನೀತಿ ಸಾಗರ ಲಿಪಿಯು
ಗೂಢ ಲಿಪಿಗಳು ಎಂದು ಮಾತಾಡಿ ಮನುಜರ ನುಡಿಯಲ್ಲ,
ಅಸಂಖ್ಯಾತರ ಕಟ್ಟಳೆಯ **ಪರುಷ ಭಾಂಡಾರಗಳು**
ಆ ಶರಣರುದಯ ಆನಂದವೇ ಕಡೆಯಾಗಿ ಲೋಕವರಿವಂತೆ
ಕಲಿಯುಗವು ಮುಂದಿನ್ನು ಆದರಿಸಿತೆಂದೋ.

❈ ಆ ಅನುಭಾವದ ಆಟದ ವಚನಂಗಳು
ಸೋಜಿಗದ ಗುಣಿತವ ಮಾ ೀನೆಂಬ
ಕರಣದ ಶಬ್ದ ಕರು ಮುಳುಗುವರು
ಅರವತ್ತು ಕೋಟಿ ತಾರೆಗಳ ಬಲ್ಲ, ಸಪ್ತಗ್ರಹಗಳ ಬಲ್ಲ
ಸೂರ್ಯ ಮಂಡಲ ಚಂದ್ರ ಮಂಡಲವೆಂದು
ಜೋತಿಷ್ಯವ ಮಾಡುವ ಪಂಡಿತರು ಮುಳಿಗ್ಯಾರು,

ಈ ವಚನದನುಭಾವಗಳ ಜೋಕಿಲಿ ತಿಳಿದು ಓದುವರು, ವಚನ ಶಾಸ್ತ್ರದ ಬಗ್ಗೆ ಶರಣರಿಗಿದ್ದ ಗೌರವ, ಅಭಿಮಾನ, ಪ್ರತಿ ಮಾತಿನಲ್ಲೂ ತುಂಬಿ ತುಳುಕುತ್ತಿದೆ. ಇವು ಮನುಷ್ಯರ ನುಡಿಯಲ್ಲ, ಕಟ್ಟಳೆಯ ಮಾತು, ಪರುಷ ಭಂಡಾರ, ಮುಂದಿನವರು ಜೋಕೆಯಲ್ಲಿ ತಿಳಿದು ಓದುವರು ಎಂದು ಕೊಂಡಾಡಿದ್ದಾರೆ.

[46 ನೇ ಪುಟಕ್ಕೆ ಮುಂದುವರಿದಿದೆ]






ಕೂಡಲ ಸಂಗಮ, ಬಸವ ಧರ್ಮ ಪೀಠದ ಮಹಾಮನೆ ಮಹಾಮಠದ ಬಸವಾಲಯದಲ್ಲಿರುವ ಅಭಯ ಮೂರ್ತಿ ಬಸವಣ್ಣ



ಪೀಠಾರೋಹಣಕ್ಕೆ ಧಾವಿಸುವ ಮೊದಲು ಧರ್ಮಪಿತರಿಗೆ
ನಮನ - ಅನುಗ್ರಹ ಯಾಚನೆ




ಮಹಾಮನೆಯಲ್ಲಿರುವ ಅಭಯ ಮುದ್ರೆಯ ಮಂತ್ರ ಪುರುಷ ಬಸವಣ್ಣ




ಪೀಠಾರೋಹಣ ಮಂಟಪಕ್ಕೆ ಆಗಮಿಸುತ್ತಿರುವ ಪೂಜ್ಯ ಮಾತಾಜಿಯವರಿಗೆ
ಗಂಗಾ ಮಾತಾಜಿಯವರಿಂದ ಸ್ವಾಗತ




ಪೀಠಾರೋಹಣಕ್ಕೆ ಮೊದಲು ಸತ್ ಸಂಕಲ್ಪದೊಡನೆ ಪೂಜ್ಯ ಮಾತಾಜಿಯವರಿಂದ ಬಸವ ಧ್ವಜಾರೋಹಣ



ಪೀಠಾರೋಹಣಕ್ಕೆ ಮೊದಲು ಪೂಜ್ಯ ಮಾತಾಜಿಯವರಿಂದ ಗಣ ಸಭೆಗೆ ಶರಣು



ಧ್ವಜಾರೋಹಣದ ಸಮಯದಲ್ಲಿ ಪೂಜ್ಯ ಶ್ರೀಗಳವರಿಂದ ಧರ್ಮಗುರುವಂದನ.
ಎಡದಿಂದ ಬಲಕ್ಕೆ-ಶ್ರೀ ಸಿದ್ಧರಾಮ ಸ್ವಾಮಿಗಳು, ತೋಂಟದ ಜಗದ್ಗುರುಗಳು,
ಜಯ ಬಸವಾನಂದ ಸ್ವಾಮಿಗಳು, ಹುಲ್ಲೂರು ಶಿವಾನಂದ ಸ್ವಾಮಿಗಳು, ಭಾಲ್ಕಿ ಬಸವಲಿಂಗ
ಪಟ್ಟದ್ದೇವರು, ಯರಗಟ್ಟಿ ಮಹಾಂತ ಸ್ವಾಮಿಗಳು.



ಶರಣೆ. ಸಂಗಮ್ಮ ಕರವೀರಶೆಟ್ಟರು ಮತ್ತು ಗಣನಾಯಕ - ನಾಯಕಿಯರಿಂದ ಕಿರೀಟ ಧಾರಣೆ




ಪೀಠಾರೋಹಣಕ್ಕೆ ಮೊದಲು ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
ಅವರಿಂದ ಪ್ರಾಸ್ತಾವಿಕ ಭಾಷಣ




ಶರಣೆ. ರಾಣಿ ಸತೀಶ್, ವಿಧಾನ ಪರಿಷತ್ ಉಪಸಭಾಪತಿ, ಅವರಿಂದ ನುಡಿ ಕಾಣಿಕೆ




ಬಸವ ಧರ್ಮದ ಮಹಾಜಗದ್ಗುರು ಪೀಠದ ಎರಡನೆಯ ಅಧಿಕಾರಿಯಾಗಿ ಪೀಠಾರೋಹಣ
ಮಾಡಿದ ಪೂಜ್ಯ ಮಾತಾಜಿ




ಪೀಠಾರೋಹಣದ ನಂತರ ಕಾರ್ಯಕ್ರಮದ ಉದ್ಘಾಟನೆ ಮಾಡಿದ
ಡಾ|| ಮ್ಯಾಗೆ ಬರ್ಜಿತ್ ಹೆಲ್ಲರ್, ವಿಯನ್ನ, ಆಸ್ಟ್ರಿಯಾ



ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿ, ಎಡದಿಂದ ಬಲಕ್ಕೆ ರಾಣಿ ಸತೀಶ್,
ಸಂಗಮ್ಮ ಕರವೀರಶೆಟ್ಟರು, ಡಾ|| ಮ್ಯಾಗೆ ಹೆಲ್ಲರ್




ಮಹಾಜಗದ್ಗುರು ಮಾತಾಜಿಯವರೊಡನೆ ಅಕ್ಕಮಹಾದೇವಿ ಪೀಠದ ನಿಯೋಜಿತ ಜಗದ್ಗುರು ಮಾತೆ ಗಂಗಾದೇವಿ, ಹಿಂಬದಿಯಲ್ಲಿ ಪೂಜ್ಯ ಮಾತಾಜಿಯವರಿಗೆ ಜನ್ಮ ನೀಡಿದ ತಾಯಿ ಗಂಗಮ್ಮನವರು




ಪೀಠಾರೋಹಣದ ನಂತರ ಉಪನ್ಯಾಸ ಪೂಜ್ಯ ಶ್ರೀ ಮಹಾಂತಪ್ಪ ಅವರಿಂದ, ಸನ್ನಿಧಿ - ತೋಂಟದ ಜಗದ್ಗುರುಗಳು, ಬಲಬದಿಗೆ ಪೂಜ್ಯ ಶಿವರುದ್ರಸ್ವಾಮಿಗಳು




ಪೂಜ್ಯ ಶ್ರೀ ನಿ ಪ್ರ. ಮಹಾಂತ ಸ್ವಾಮಿಗಳಿಂದ ಶರಣ ಮೇಳ ಉದ್ಘಾಟನೆಗೆ ಮೊದಲು ಧ್ವಜಾರೋಹಣ. ದಿ. 13.1.1996



ಶರಣ ಮೇಳ ಉದ್ಘಾಟನೆ ಪೂಜ್ಯ ಶ್ರೀಕುಮಾರ ಮಹಾಸ್ವಾಮಿಗಳು ಹಾನಗಲ್ ಇವರಿಂದ




ನಿಡುಸೋಸಿ ಜಗದ್ಗುರುಗಳಿಂದ ಸಮುದಾಯ ಪ್ರಾರ್ಥನೆ ಉದ್ಘಾಟನೆ, ಎಡದಿಂದ ಬಲಕ್ಕೆ-
ಬೆಳಗಾಂವಿ ಸಿದ್ಧರಾಮ ಸ್ವಾಮಿಗಳು, ಬೇಲೀಮಠದ ಶ್ರೀಗಳು, ಇಳಕಲ್ ಶ್ರೀಗಳು



ಬೆಳಗಾವಿ ನಾಗನೂರು ಮಠದ ಸಿದ್ಧರಾಮ ಸ್ವಾಮಿಗಳಿಂದ ವಿಶ್ವಗುರು ಬಸವಣ್ಣ
ಪುಸ್ತಕ ಬಿಡುಗಡೆ. ಪಕ್ಕದಲ್ಲಿ ನಿಡುಸೋಸಿ ಜಗದ್ಗುರುಗಳು.



ಧರ್ಮಚಿಂತನ ಗೋಷ್ಠಿ, ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ವಿಜಯ ಮಹಾಂತ ಸ್ವಾಮಿಗಳು,
ಬೇಲೀಮಠದ ಶ್ರೀಗಳು, ಎನ್ ಪುಟ್ಟರುದ್ರಪ್ಪ, ಬಸವಕುಮಾರ್ ಪಾಟೀಲ



ಗಣ ನಾಯಕರು : ಎಡದಿಂದ ಬಲಕ್ಕೆ ಆಶೋಕ ಗುಡ್ಡೋಡಗಿ, ಬಸವರಾಜೇಂದ್ರಪ್ಪ, ಸುಭಾಷ್ ಪಾಟೀಲ, ವಿಜಯಾನಂದರು, ಆರ್.ಜಿ. ಶೆಟಗಾರ, ಬಸವಕುಮಾರ್ ಪಾಟೀಲ



ಗಣನಾಯಕಿಯರು : ಅನ್ನಪೂರ್ಣ ಹಂಗರಗಿ, ದೇವಿಕಾ ಶರಣಪ್ಪ, ಸರೋಜಮ್ಮ ನಾಗರಾಜು, ಶಾರದಾ ತಾಯಿ, ಮಾಲೂ ತಾಯಿ, ಜಯಮ್ಮ ಚಂದ್ರಪ್ಪ



ಗಣಲಿಂಗ ಸ್ಥಾಪನೆಯ ದಿನ (ದಿ. 14.1.1996) ಪ್ರಪ್ರಥಮವಾಗಿ ಪೂಜ್ಯ ಗಂಗಾ ಮಾತಾಜಿಯವರಿಗೆ "ಓಂ ಲಿಂಗಾಯ ನಮಃ " ಮಂತ್ರೋಪದೇಶ





ಶರಣಮೇಳದ ಗಣಸಭೆ ಚಿತ್ತವಿಟ್ಟು ಉಪನ್ಯಾಸ ಆಲಿಸುತ್ತಿರುವುದು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಅಭೂತ ಪೂರ್ವ ಪೀಠಾರೋಹಣದೊಡನೆ

ಅದ್ಭುತ ಯಶಸ್ಸಿನ ಒಂಭತ್ತನೆಯ 'ಶರಣ ಮೇಳ'

—ದಯಾನಂದ ಸ್ವಾಮೀಜಿ, ಸಂಚಾಲಕರು.

" ಇದೊಂದು ಚಾರಿತ್ರಿಕ ಪ್ರಸಂಗ. ಮಹಿಳಾ ಗುರು ಪೀಠವನ್ನು ಸ್ಥಾಪಿಸಿ, ಪೀಠಾರೋಹಣ ಮಾಡಿ ಧಾರ್ಮಿಕ ಜಗತ್ತಿನಲ್ಲಿ ಒಂದು ವಿನೂತನ ಕ್ರಾಂತಿಯನ್ನು ಮಾಡಿದ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರು **"ಬಸವ ಧರ್ಮದ ಮಹಾಜಗದ್ಗುರು ಪೀಠ"** ವನ್ನು ಏರಿದುದು ಮುಂದಿನ ಇತಿಹಾಸದಲ್ಲಿ ದಾಖಲೆಯಾಗುವ ಸಂಗತಿ. ಇದು ಅತ್ಯಂತ ಹೃದಯಸ್ಪರ್ಶಿ ಸನ್ನಿವೇಶ. "ಇಂತಹ ಚಾರಿತ್ರಿಕ ಸನ್ನಿವೇಶದಲ್ಲಿ ಭಾಗಿಯಾಗುವ ಸದವಕಾಶ ಸಿಕ್ಕಿದುದು ನನ್ನ ಪುಣ್ಯ ವಿಶೇಷವೆಂದು ಭಾವಿಸುತ್ತೇನೆ" ಎಂದು ಉದ್ಗರಿಸಿದವರು ಆಸ್ಟ್ರಿಯಾ ದೇಶದ ವಿಯೆನ್ನಾ ವಿಶ್ವವಿದ್ಯಾಲಯದಲ್ಲಿ ಸಂಶೋಧಕ ಪ್ರಾಧ್ಯಾಪಕಿಯಾಗಿರುವ ಶ್ರೀಮತಿ ಡಾ॥ ಬರ್ಜಿತ್ ಹೆಲ್ಲರ್. ಪೀಠಾರೋಹಣ ಕಾರ್ಯಕ್ರಮವನ್ನು ಜ್ಯೋತಿ ಹೊತ್ತಿಸಿ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಶರಣ ಮೇಳದಲ್ಲಿ ಭಾಗಿಯಾದ ಜನಸ್ತೋಮವನ್ನು, ಜನರಲ್ಲಿದ್ದ ಶಿಸ್ತನ್ನು, ಭಕ್ತಿಯನ್ನು, ಸೌಜನ್ಯವನ್ನು ಕಂಡು ಸಂಭ್ರಾಂತರಾಗಿದ್ದರು ಸುಮಾರು ನಾಲ್ಕು ಲಕ್ಷ ಜನ ಶರಣರ ಸಮುದಾಯವು ಸೇರಿದ್ದು ಎಲ್ಲರ ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತಿತ್ತು.

ಪ್ರಥಮ ಮಹಿಳಾ ಜಗದ್ಗುರುವಾಗಿ ಅಪೂರ್ವವಾಗ್ಮಿತ್ವ, ಸಂಘಟನಾ ಶಕ್ತಿಗಳಿಂದ ಸಮಾಜವನ್ನು ಜಾಗೃತಿಸುತ್ತ, ಇದೀಗ ಮಹಾಜಗದ್ಗುರು ಪೀಠವನ್ನು ಏರುವ ಮೂಲಕ ಜಗತ್ತಿನ ಜನರ ಗಮನ ಸೆಳೆಯುತ್ತಿರುವ **ಪೂಜ್ಯ ಶ್ರೀ ಮಾತೆ ಮಹಾದೇವಿ** ಯವರ ಪೀಠಾರೋಹಣವನ್ನು ಮುಖ್ಯ ಅಂಶವನ್ನಾಗಿ ಹೊಂದಿದ ಒಂಭತ್ತನೆಯ ಶರಣ ಮೇಳವು ಅದ್ಭುತ ಯಶಸ್ಸನ್ನು ಹೊಂದಿತು. ದೂರದೂರದ ಪ್ರದೇಶಗಳಿಂದ, ಕರ್ನಾಟಕದ ಮೂಲೆ ಮೂಲೆಗಳಿಂದ, ಹೊರ ರಾಜ್ಯಗಳಿಂದ ಆಗಮಿಸುತ್ತಿದ್ದ ಶ್ವೇತ ಸಮವಸ್ತ್ರ-ಕಾವಿ ಮೇಲ್ವಸ್ತ್ರ ಧಾರಿಗಳು ಭಕ್ತಿ ನಿರ್ಭರತೆಯಿಂದ ಕೂಡುತ್ತ ಆಡುತ್ತ ಮಂತ್ರಪಠಣ ಮಾಡುವ ದೃಶ್ಯವು ಚೇತೋಹಾರಿಯಾಗಿತ್ತು. ಜನವರಿ 12 ರಿಂದ 15 ರ ವರೆಗೆ ನಡೆದ ಶರಣ ಮೇಳವು ಬಸವ ಧರ್ಮ

ಸಂಸತ್ ಸಭೆಯೊಡನೆ ದಿ. 12 ರಂದು ಬೆಳಿಗ್ಗೆ 10 ಗಂಟೆಗೆ ಆರಂಭವಾಯಿತು. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ನಿಯೋಜಿತ ಜಗದ್ಗುರುಗಳಾದ **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ** ಯವರು ಧ್ವಜಾರೋಹಣ ಮಾಡಿದರು. **ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮಿಗಳು** ಸಮಾವೇಶವನ್ನು ಉದ್ಘಾಟಿಸಿದರು. 'ಬಸವ ಧರ್ಮ ಸಂಸತ್' ಒಂದು ಚಿಂತನಶೀಲರ ಪ್ರಾತಿನಿಧಿಕ ಒಕ್ಕೂಟ. ಪ್ರತಿವರ್ಷದಲ್ಲಿ ಹಲವಾರು ಬಾರಿ ಸೇರುವ ಈ ಸಮಿತಿಯ ಸದಸ್ಯರು ಧಾರ್ಮಿಕ, ಸಾಮಾಜಿಕ, ರಾಷ್ಟ್ರೀಯ ಮುಂತಾದ ಅನೇಕ ಮಹತ್ವಪೂರ್ಣ ವಿಷಯಗಳನ್ನು ಕುರಿತು ಮಾತನಾಡಿದರು, ಸಾಮೂಹಿಕವಾಗಿ ಚಿಂತನೆ ಮಾಡಿದರು. ಬಸವ ಧರ್ಮ ಪೀಠದ ಪ್ರಥಮ ಪೀಠಾಧೀಶರಾದ **ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳಿಗೆ** ಸಭೆಯ ಆರಂಭದಲ್ಲಿ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಲಿಂಗೈಕ್ಯ ಗುರುಗಳನ್ನು ಕುರಿತು ಹಲವಾರು ವಿದ್ವಾಂಸರು, ಶಿಷ್ಯರು ನುಡಿ ಕಾಣಿಕೆ ಸಲ್ಲಿಸಿದರು. ಪೂಜ್ಯ ಶ್ರೀ ನಿಜಗುಣಾನಂದಸ್ವಾಮಿ, ಪೂಜ್ಯ ಶ್ರೀ ಧಯಾನಂದ ಸ್ವಾಮಿ, ಡಾ॥ ನಿತೀನಚಂದ್ರ ಹತ್ತೀಕಾಳ, ಬಸವಕುಮಾರ್ ಪಾಟೀಲ ಮುಂತಾದವರು ಮಾತನಾಡಿದರು. ಡಾ॥ ಹತ್ತೀಕಾಳರು ಬರೆದ ಕವನ ಸಂಕಲನ, "ಹದಿಮೂರು ಕವನಗಳು" ಇದೇ ಸಂದರ್ಭದಲ್ಲಿ ಬಿಡುಗಡೆಯಾಯಿತು. ದಿ. 12. ರಂದು ಸಂಜೆ ನಡೆದ ಎರಡನಯ ಸಮಾವೇಶದಲ್ಲಿ ಮಹಾರಾಷ್ಟ್ರ ರಾಜ್ಯ ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯನ್ನು, ಬೆಳಗಾಂವ, ಬಿಜಾಪುರ, ರಾಯಚೂರು, ಧಾರವಾಡ ಜಿಲ್ಲಾ ಸಮಿತಿಗಳನ್ನು ರಚಿಸಲಾಯಿತು. ರಾಷ್ಟ್ರೀಯ ಬಸವ ದಳದ ಅಂಗಸಂಸ್ಥೆಗಳನ್ನಾಗಿ ಕ್ರಾಂತಿ ಗಂಗೋತ್ರಿ ಮಹಿಳಾ ಗಣವನ್ನು, ರಾಷ್ಟ್ರ ಕಲ್ಯಾಣ ವಿದ್ಯಾರ್ಥಿ ಗಣವನ್ನು, ಐದು ವರ್ಷಗಳಿಂದ 16 ವರ್ಷಗಳವರೆಗಿನ ಮಕ್ಕಳಿಗಾಗಿ "ಬಸವಾಂಕುರ"ವನ್ನು ರಚಿಸಲಾಯಿತು. ಕ್ರಾಂತಿ ಗಂಗೋತ್ರಿ ಮಹಿಳಾ ಗಣದ ಉದ್ಘಾಟನೆಯನ್ನು ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ಎಸ್. ಜಿ. ಸುಶೀಲಮ್ಮ, ರಾಷ್ಟ್ರ ಕಲ್ಯಾಣ ವಿದ್ಯಾರ್ಥಿ ಗಣದ ಉದ್ಘಾಟನೆಯನ್ನು ಶಿವಕುಮಾರ ಡಾಕುಳಗಿ, ಬಸವಾಂಕುರ-ಮಕ್ಕಳ ಸಂಘಟನೆಯ ಉದ್ಘಾಟನೆಯನ್ನು ಬಾಲಕ ಚಿಂತನ್ ಹತ್ತೀಕಾಳ ನೆರವೇರಿಸಿದರು.

ಪೀಠಾರೋಹಣ

ದಿ. 13 ರಂದು ಪೀಠಾರೋಹಣ ಕಾರ್ಯಕ್ರಮವು ಅಪೂರ್ವವಾಗಿ ನಡೆಯಿತು. ಗದಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ನಿ. ಪ್ರ. ಡಾ॥ ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ನಡೆದ ಈ ಪೀಠಾರೋಹಣದಲ್ಲಿ ಹಲವಾರು ಹರ ಗುರುಚರ ಮೂರ್ತಿಗಳು ಭಾಗವಹಿಸಿದ್ದರು. ಇಳಕಲ್ ಚಿತ್ತರಗಿ ಪೀಠದ ಪೂಜ್ಯ

ಶ್ರೀ ನಿ. ಪ್ರ. ಮಹಾಂತ ಸ್ವಾಮಿಗಳು, ಬೇಲೀಮಠದ ಪೂಜ್ಯ ಶ್ರೀ ನಿ.ಪ್ರ. ಶಿವರುದ್ರ ಸ್ವಾಮಿಗಳು, ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಯರಗಟ್ಟಿ ದುರದುಂಡೀಶ್ವರ ಮಠದ ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು, ಕೆ. ಆರ್. ಪೇಟೆಯ ಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರಿನ ಜಯಬಸವಾನಂದ ಸ್ವಾಮಿಗಳು, ಬಿದರಕುಂದಿಯ ಶ್ರೀ ಶಿವಕುಮಾರ ಸ್ವಾಮಿಗಳು ಭಾಗವಹಿಸಿದ್ದರು. ಪೂಜ್ಯ ಶ್ರೀ ಮಾತೆಯವರುಗಳಾದ ಅಕ್ಕಮಹಾದೇವಿ, ಬಸವರತ್ನಾದೇವಿ, ದಾನೇಶ್ವರಿ, ಮಹಾನಂದಾತಾಯಿ, ಮೈತ್ರಾದೇವಿ, ನೀಲಾಂಬಿಕೆ, ಬಸವ್ಮಾತಾಯಿ, ಶರಣೆ. ಚಂದ್ರಮ್ಮ ಮುಂತಾದವರು ಭಾಗವಹಿಸಿದ್ದರು.

ಆದಿ ಪ್ರಮಥ ಬಸವಣ್ಣನವರ ಭಾವಚಿತ್ರವನ್ನು ಪೀಠದ ಮೇಲೆ ಇರಿಸಿ ಪೂಜೆಯನ್ನು ನೆರವೇರಿಸಲಾಯಿತು. ನಂತರ ಪ್ರಥಮ ಪೀಠಾಧೀಶರ ಭಾವಚಿತ್ರವನ್ನಿರಿಸಿ ಪುಷ್ಪವೃಷ್ಟಿ-ಆರತಿಯನ್ನು ಮಾಡಲಾಯಿತು. **ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು** ಗಣನಾಯಕ-ಗಣನಾಯಕಿಯರು ಕೈ ಹಿಡಿದು ಪೀಠದ ಮೇಲೆ ಆರೋಹಿಸಿದರು. ಹುಬ್ಬಳ್ಳಿಯ ಶ್ರೀ ಗುರು ಬಸವ ಮಂಟಪದ ಸಂಗಮ್ಮತಾಯಿ ಕರವೀರಶೆಟ್ಟರ ನೇತೃತ್ವದಲ್ಲಿ **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ** ಯವರು ವಿಧಿವಿಧಾನಗಳನ್ನು ನೆರವೇರಿಸಿದರು. ರುದ್ರಾಕ್ಷಿಯಿಂದ ಮಾಡಲಾಗಿರುವ ಷಟ್‌ಸೂತ್ರ ಲಾಂಛನವುಳ್ಳ ಕೀರಿಟವನ್ನು ಎಲ್ಲ ಪೂಜ್ಯ ಮಠಾಧೀಶರು ವಿಭೂತಿಯಿಂದ ದೈವೀಕರಿಸಿದರು. ಗಣನಾಯಕ-ನಾಯಕಿಯರು ಸಂಗಮ್ಮ ತಾಯಿಯವರು ಮುಂತಾದ ಎಲ್ಲರೂ ಸಾಮೂಹಿಕ ಜಯಘೋಷದ ನಡುವೆ ಪೂಜ್ಯ ಮಾತೆಯವರಿಗೆ ಕೀರಿಟಧಾರಣೆ ಮಾಡಿದರು. ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಗದಗ-ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು, ಇಳಕಲ್ ಇವರ ನೇತೃತ್ವದಲ್ಲಿ ಎಲ್ಲ ಪೂಜನೀಯ ಮಠಾಧೀಶರು, ಮಾತೆಯರು ಪುಷ್ಪವೃಷ್ಟಿಯನ್ನು ಮಾಡಿ, ಶುಭವನ್ನು ಹಾರೈಸಿದರು. ನೆರೆದ ಸಹಸ್ರಾರು ಭಕ್ತರು ಮಾಲಾರ್ಪಣೆ ಮಾಡಿ, ಗುರು ಕಾಣಿಕೆಯನ್ನು ಸಲ್ಲಿಸಿದರು. ಪೂಜ್ಯ ಮಾತೆಯವರು ಬಸವ ತತ್ತ್ವ ಪ್ರಚಾರಕ್ಕಾಗಿ, ಸಮಾಜ-ರಾಷ್ಟ್ರಗಳ ಏಳ್ಗೆಗಾಗಿ ತಮ್ಮ ತನು-ಮನ-ಧನ-ಸಮಯ-ಅಭಿಮಾನ-ಪ್ರಾಣಗಳನ್ನು ಮೀಸಲಿಡುವುದಾಗಿಯೂ, ಬಸವ ಪಥದಲ್ಲಿ ಪ್ರಾಮಾಣಿಕವಾಗಿ ನಡೆಯುವುದಾಗಿಯೂ ಪ್ರತಿಜ್ಞೆ ಸ್ವೀಕಾರ ಮಾಡಿ ಆಶೀರ್ವಚನ ನೀಡಿದರು.

ಕ್ರಾಂತಿಕಾರಿ ಘೋಷಣೆ

ಪಾದಪೂಜೆ-ಪಾದ ನಮಸ್ಕಾರಗಳಲ್ಲಿ ಯೋಗಿಕ ಮತ್ತು ವೈಜ್ಞಾನಿಕವಾದ ಅರ್ಥವಂತಿಕೆಯಿದ್ದರೂ, ಬದಲಾದ ಇಂದಿನ ಪರಿಸರದಲ್ಲಿ ಮತ್ತು ಹಿಂದೂಯೇತರ

ಧರ್ಮಗಳ ವೈಚಾರಿಕ ಸ್ಪರ್ಧೆಯನ್ನು ಎದುರಿಸಲು, ಯುವ ಜನಾಂಗವನ್ನು ಧರ್ಮದಲ್ಲಿ ನಿರಾಸಕ್ತಿ ಹೊಂದದೆ ಆಸಕ್ತಿ ಬೆಳೆಸುವಂತೆ ಮಾಡಲು ಪಾದ ನಮಸ್ಕಾರವನ್ನು, ಪಾದಪೂಜೆಯನ್ನು ನಿಷೇಧಿಸುವುದಾಗಿ ಪೀಠಾರೋಹಣ ಮಾಡಿದ ಬಳಿಕ ಘೋಷಿಸಿದ ಮಾತೆಯವರು, ಇನ್ನು ಮುಂದೆ ಪಾದನಮಸ್ಕಾರವನ್ನು ಕೇವಲ ಗುರು-ಶಿಷ್ಯರ ಮಧ್ಯದ ವೈಯಕ್ತಿಕ ಆಚರಣೆಯನ್ನಾಗಿ ಇಡಲು, ಸಾರ್ವತ್ರಿಕವಾಗಿ ಆಚರಿಸದಿರಲು ಕರೆ ನೀಡಿದರು. ಈ ಕ್ರಾಂತಿಕಾರಿ ನಿರ್ಧಾರದಿಂದ ಸಭೆಯು ಆಶ್ಚರ್ಯ ಚಕಿತ-ವಾಯಿತಲ್ಲದೆ, ಬಹುಸಂಖ್ಯೆಯಲ್ಲಿ ಜನರು ಜಯಘೋಷ ಮಾಡಿ ಸ್ವಾಗತಿಸಿದರು.

"ಶರಣ ಮೇಳ"ವು ಅತ್ಯಂತ ಪವಿತ್ರವಾದ ಧಾರ್ಮಿಕ ಸಮಾವೇಶವೆಂದು ಧರ್ಮಪಿತ ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ರೂಢಿಗೊಳಿಸಿದ್ದ ಗಣ ಸಮಾವೇಶ, ಗಣಪರ್ವಗಳ ಪ್ರತಿರೂಪವೆಂದು ; 800 ವರ್ಷಗಳ ಬಳಿಕ ಆರಂಭ-ವಾಗಿರುವ ಈ ಶರಣ ಮೇಳವು ಮುಸ್ಲೀಮರಿಗೆ ಹಜ್ ಪವಿತ್ರಯಾತ್ರೆಯಿದ್ದಂತೆ, ಸಿಖ್ಖರಿಗೆ ಖಾಲ್ಸಾದಂತೆ. ಪ್ರತಿಯೊಬ್ಬ ಬಸವ ತತ್ತ್ವಾನುಯಾಯಿಯೂ, ಲಿಂಗಾ-ಯತನು ಭಾಗಿಯಾಗಬೇಕಾದ ಸಮಾವೇಶ. ಆದ್ದರಿಂದ ಎಂಥದೇ ಪ್ರಸಂಗದಲ್ಲಿಯೂ ಶರಣ ಮೇಳವನ್ನು ತಪ್ಪದೇ ನಡೆಸಬೇಕೆಂದು ಪೂಜ್ಯ ಶ್ರೀ ಮಾತೆಯವರು ಆದೇಶಿಸಿ-ದರಲ್ಲದೆ, ಗಣನಾಯಕ-ನಾಯಕಿಯರಿಂದ ಈ ಮಾತನ್ನು ನಡೆಸಿಕೊಡುವುದಾಗಿ ಮಾತು ತೆಗೆದುಕೊಂಡರು. ಹನ್ನೆರಡು ಜನ ಗಣನಾಯಕ-ನಾಯಕಿಯರು ಬಸವ-ಸಂದೇಶ ಧ್ವಜ ವಾಹಕರಾಗಿ ಕೆಲಸ ಮಾಡಬೇಕೆಂದು ಸೂಚಿಸಿದರು.

ಸನ್ನಿಧಿಯನ್ನು ವಹಿಸಿದ್ದ ಗದಗಿನ ತೋಂಟದಾರ್ಯ ಮಠದ ಡಾ॥ ಜಗದ್ಗುರು ಸಿದ್ಧಲಿಂಗ ಸ್ವಾಮಿಗಳು ಪೂಜ್ಯ ಮಾತೆಯವರ ಪೀಠಾರೋಹಣ ಪ್ರಸಂಗವನ್ನು ಮುಕ್ತಕಂಠದಿಂದ ಕೊಂಡಾಡಿದರು. ಇದು ಓರ್ವ ವ್ಯಕ್ತಿಗೆ ಪಟ್ಟ ಕಟ್ಟಿದಂತೆ ಅಲ್ಲ, ಬಸವ ತತ್ತ್ವಕ್ಕೇ ಪಟ್ಟಕಟ್ಟಿದಂತೆ ಎಂದು ಉದ್ಗರಿಸಿದರು. ಯಾರಾದರೂ ಪ್ರಗತಿ ಪರಚಿಂತಕರು "ಬಸವ ತತ್ತ್ವದಲ್ಲಿ ಸಮಾನತೆಯಿದೆ ಎಂದು ಪ್ರಶಂಸಿಸುತ್ತೀರಿ. ಇದಕ್ಕೆ ಉದಾಹರಣೆ ಏನು ಎನ್ನುವವರಿಗೆ ಈಗ ಉತ್ತರ ಕೊಡಲು, ಹೆಮ್ಮೆ ಪಡಲು ನಮಗೆ ಸುವರ್ಣಾವಕಾಶವು ಒದಗಿದೆ. ಪೂಜ್ಯ ಮಾತೆಯವರು ತಮ್ಮ ಸ್ವಯಂ ಪ್ರತಿಭೆ, ಕರ್ತೃತ್ವ ಶಕ್ತಿಯಿಂದ ಮುಂದೆ ಬಂದವರು. ಅವರ ಸಂಘಟನಾ ಸಾಮರ್ಥ್ಯ, ವಾಗ್ಮಿತ್ವ, ಶಿಸ್ತು, ಅಚ್ಚುಕಟ್ಟುತನ ನೋಡಿದರೆ ಆಶ್ಚರ್ಯವಾಗು-ತ್ತದೆ. ಅವರದ್ದು "ದೈತ್ಯ ಪ್ರತಿಭೆ" ಎಂದು ಹೊಗಳುವುದು ಅನಿವಾರ್ಯ-ವಾಗುತ್ತದೆ. ಶರಣ ಮೇಳ, ಬಸವ ಧರ್ಮ ಸಂಸತ್, ರಾಷ್ಟ್ರೀಯ ಬಸವ ದಳ ಮುಂತಾದುವೆಲ್ಲ ಅವರ ಪರಿಕಲ್ಪನೆಯ ಕೂಸುಗಳು. ಇಂಥವರು ಬಸವ ಧರ್ಮದ

ಮಹಾಜಗದ್ಗುರು ಪೀಠಕ್ಕೆ ಎರಡನೆಯ ಅಧಿಕಾರಿಗಳಾದುದು ಅಪೂರ್ವ ಸಂಗತಿ. ಹೇಗೆ ವನರಾಜನಿಗೆ ಯಾರೂ ಪಟ್ಟಕಟ್ಟದಿದ್ದರೂ ಅದು ಸ್ವಯಂಕೃತ ವನರಾಜನೋ ಹಾಗೆ ಪೂಜ್ಯ ಮಾತೆಯವರು ಸ್ವಯಂಕೃತರು. ಅಂಥ ಪ್ರತಿಭಾನ್ವಿತ ಚೇತನರು ಪೀಠಾಧಿಕಾರಿಗಳಾದುದು ಬಹಳ ಅಭಿನಂದನಾರ್ಹ. ನಾವೆಲ್ಲರೂ ಅವರು ಕೈಗೊಂಡ ಕಾರ್ಯದಲ್ಲಿ ಸಹಕರಿಸೋಣ ಎಂದು ನುಡಿದರು.

ಪೂಜ್ಯ ಶ್ರೀ ಇಳಕಲ್ ಮಹಾಂತಪ್ಪನವರು ಮಾತನಾಡುತ್ತಾ, "ಈ ಪೀಠಾರೋಹಣವು ಬಸವ ತತ್ತ್ವದ ಪುನರ್ ಪ್ರತಿಷ್ಠಾಪನೆ; ವಿರಕ್ತ ಸಂಪ್ರದಾಯವು ಅಲ್ಲಮ ಪ್ರಭುದೇವರಿಂದ ಬಂದಿದ್ದು" ಇದರ ಆದಿಗುರು ಬಸವಣ್ಣನವರೇ ಆದರೂ ಕಾಲಾನಂತರದಲ್ಲಿ ಈ ನಂಬಿಕೆಯಲ್ಲಿ ಚ್ಯುತಿಯುಂಟಾಗಿತ್ತು. ಬಸವಣ್ಣನವರೇ ಧರ್ಮಗುರು, ಆದಿ ಪ್ರಮಥರು, ಇಷ್ಟಲಿಂಗ ಕೊಟ್ಟವರು. ಅವರಿಗೂ ಪೂರ್ವದಲ್ಲಿ ಇದ್ದವು ಶಿವನ ಪ್ರತೀಕವಾದ ಸ್ಥಾವರಲಿಂಗ, ಚರಲಿಂಗಗಳೇ ವಿನಾ ಇಷ್ಟಲಿಂಗವಲ್ಲ ಎಂಬುದನ್ನು ಸಾಧಾರಪೂರ್ವಕವಾಗಿ ಸಾರಿ, ನಾವುಗಳು ಈ ನಂಬಿಗೆಗೆ ಬರುವಂತೆ ಮಾಡಿದವರು ಲಿಂಗೈಕ್ಯ **ಪೂಜ್ಯ ಲಿಂಗಾನಂದ ಜಗದ್ಗುರುಗಳು** ಮತ್ತು **ಪೂಜ್ಯ ಮಾತಾಜಿ**ಯವರು. ಈ ಸತ್ಯವನ್ನು ಪ್ರಾಂಜಲ ಮನಸ್ಸಿನಿಂದ ನಾವು ಒಪ್ಪಿ-ಕೊಳ್ಳಲೇಬೇಕು. ಇಂದು ಬಸವಣ್ಣನವರನ್ನೇ ಆದಿ ಗುರುವನ್ನಾಗಿ, ವಚನ ಸಾಹಿತ್ಯವನ್ನು ಧಾರ್ಮಿಕ ಸಂವಿಧಾನವನ್ನಾಗಿ ಒಪ್ಪುವ ಸಮಾನ ಮನಸ್ಕರೆಲ್ಲ ಒಟ್ಟುಗೂಡಿ ಕೆಲಸ ಮಾಡಬೇಕಾಗಿದೆ. ಶರಣ ಮೇಳ ಸಮಾನ ವಿಚಾರ ಧಾರೆ-ಯುವರನ್ನೆಲ್ಲ ಬೆಸೆಯುವ, ತರಬೇತಿ ಗೊಳಿಸುವ ಸೂತ್ರವಾಗಿದೆ" ಂದು ನುಡಿದರು. ವಿಧಾನ ಪರಿಷತ್ತು ಉಪಸಭಾಪತಿ ರಾಣಿ ಸತೀಶ್‌ರವರು "ಈ ಪೀಠಾರೋಹಣವು ನಮ್ಮ ಕಾಲದಲ್ಲಿ ನಡೆಯುತ್ತಿರುವುದು. ನಾವು ಕಣ್ಣಾರೆ ನೋಡುತ್ತಿರುವುದು ಒಂದು ಅಪೂರ್ವಭಾಗ್ಯವೆನಿಸುತ್ತಿದೆ. ಮಹಿಳೆಯು ಮನಸ್ಸು ಮಾಡಿದರೆ, ಅವಳಿಗೂ ಅವಕಾಶ ದೊರೆತರೆ ಎಂಥ ಉನ್ನತ ಸ್ಥಾನಕ್ಕೂ ಏರಬಲ್ಲಳೆಂಬುದು **ಪೂಜ್ಯ ಶ್ರೀ ಮಾತೆ**ಯವರ ಸಾಧನೆಯಿಂದ ಸಾಬೀತಾಗುತ್ತದೆ. ಇವರನ್ನು ಪಡೆದ ನಾಡು-ನುಡಿಗಳು ಧನ್ಯ" ಎಂದು ನುಡಿದರಲ್ಲದೆ ತಮ್ಮ ವೈಯಕ್ತಿಕ ಕಾಣಿಕೆಯಾಗಿ ಐದು ಸಾವಿರ ರೂಗಳನ್ನು ಸಮರ್ಪಿಸಿದರು. ಹಲವಾರು ಹರಗುರು ಚರಮೂರ್ತಿಗಳು ಮಾತನಾಡಿದರು. **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ**ಯವರು ಪ್ರಾಸ್ತಾ-ವಿಕ ಭಾಷಣ ಮಾಡಿ, ಪೀಠದ ಧ್ಯೇಯೋದ್ದೇಶವನ್ನು ವಿವರಿಸಿದರು. ಸುಮಂಗಲೀ ಸೇವಾಶ್ರಮದ ಸಾಧಕ ವೃಂದದವರು ಅಧ್ಯಕ್ಷೆ ಸುಶೀಲಮ್ಮನವರ ನೇತೃತ್ವದಲ್ಲಿ ವಿಶೇಷ ವಾದ್ಯ ಗೀತೆಗಳೊಡನೆ, ಹೂಗಳನ್ನು ವೃಷ್ಟಿಮಾಡುತ್ತ ಪೂಜ್ಯ ಮಾತೆಯವರನ್ನು ಸ್ವಾಗತಿಸುತ್ತ ವೇದಿಕೆಗೆ ಕರೆದೊಯ್ದರು. ಮಂಗಳೂರಿನ ಶಂಕರಿ

ಅಮ್ಮನವರು ಬರೆದ "ಶ್ರೀ ಮಾತೆ ಎನ್ನ ಮನ ಮಂದಿರಕೆ ದಯಮಾಡು, ಹರಿವ ಜಲವು ಮಾತೆ ನೀವು ಗಂಗೆ ತೆರದಲಿ" ಎಂಬ ಹಾಡುಗಳು, ಅನ್ನಪೂರ್ಣ ಮನ್ನಾಪುರ-ಧಾರವಾಡ ಇವರು ಬರೆದ "ಜಯ ಮಾತೆ ಜಗದ್ಗುರು" ಎಂಬ ಜಯ ಘೋಷ ಗೀತೆಗಳು ಎಲ್ಲರನ್ನೂ ಪುಳಕಿತಗೊಳಿಸಿದವು. ಈ ಪೀಠಾರೋಹಣ ಸಂದರ್ಭವನ್ನು ಕೈಲಾಸಕ್ಕೆ, ಸಭಿಕರನ್ನು ಶಿವಗಣಂಗಳಿಗೆ ಹೋಲಿಸುವವರು ಕೆಲವರಾದರೆ, ಅನುಭವ ಮಂಟಪಕ್ಕೆ, ಶರಣ ಸಮೂಹಕ್ಕೆ ಹೋಲಿಸುವವರು ಮತ್ತೆ ಕೆಲವರು. ಭಕ್ತಿ-ಜ್ಞಾನ-ಅನುಭವಗಳ ದಿವ್ಯ ಸಂಗಮವದಾಗಿತ್ತು. "ಬಸವ ಧರ್ಮ ಪೀಠ ಜಾತಿ ಪೀಠವಲ್ಲ ಜ್ಯೋತಿ ಪೀಠ; ಎಲ್ಲ ಸೀಮಿತ ಸಂಕೋಲೆಗಳನ್ನು ದಾಟಿ ವಿಶ್ವಮಾನವ ಪ್ರೀತಿಯನ್ನು ಬಸವ ಸಂದೇಶದ ತಳಹದಿಯ ಮೇಲೆ ಬೆಳೆಸುವುದೇ ಇದರ ಗುರಿ" ಎಂಬ ಶ್ರೀ ಮಾತಾ ಜಗದ್ಗುರುಗಳ ಅಮೃತವಾಣಿ ಎಲ್ಲರ ಕಿವಿಯಲ್ಲಿ ಮೊಳಗುತ್ತಿತ್ತು.

ದಿ. 13 ರಂದು ಸಂಜೆ ಶರಣ ಮೇಳವನ್ನು ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಹಾನಗಲ್ ವಿರಕ್ತಮಠದ ಪೂಜ್ಯ ಕುಮಾರ ಮಹಾಸ್ವಾಮಿಗಳು ಉದ್ಘಾಟಿಸಿದರು. ಆನಂದಪುರಂ ಮುರುಘಾಮಠದ ಮಲ್ಲಿಕಾರ್ಜುನ ಶ್ರೀಗಳು ಬಸವ ಧ್ವಜಾರೋಹಣವನ್ನು ಮಾಡಿದರು.

ಗಣಲಿಂಗ ಸ್ಥಾಪನೆ

ಒಂಭತ್ತನೆಯ ಶರಣ ಮೇಳದ ಮತ್ತೊಂದು ಐತಿಹಾಸಿಕ ಘಟನೆ ಎಂದರೆ ಗಣಲಿಂಗ ಸ್ಥಾಪನೆ. ಬಸವ ಧರ್ಮ ಪೀಠದ ಮಹಾಮನೆ ಮಹಾಮಠದಲ್ಲಿ ಲಿಂಗದೇವ ಮಂಟಪದಲ್ಲಿ ಬೃಹತ್ ಗಣಲಿಂಗವು ದಿ. 14 ರಂದು ಬೆಳಿಗ್ಗೆ 10 ಗಂಟೆಗೆ ಪ್ರತಿಷ್ಠಾಪನೆಗೊಂಡಿತು. 844 ವರ್ಷಗಳ ಹಿಂದೆ ಶ್ರೀಮುಖ ಸಂವತ್ಸರದಲ್ಲಿ ಮಕರ ಸಂಕ್ರಮಣದಂದು ಧರ್ಮಗುರು ಬಸವಣ್ಣನವರ ಹೃದಯದಲ್ಲಿ ಇಷ್ಟಲಿಂಗದ ಪರಿಕಲ್ಪನೆ ರೂಪುಗೊಂಡಿತು. ಅದರ ಪ್ರತೀಕವಾಗಿ ಯುವನಾಮ ಸಂವತ್ಸರದ ಪುಷ್ಯ ಮಾಸದ ಈ ಮಕರ ಸಂಕ್ರಮಣದಂದು 6 ಅಡಿ ಎತ್ತರದ ಐದೂವರೆ ಅಡಿ ಅಗಲದ ಗೋಳಾಕಾರದ ಗಣಲಿಂಗವು ಸ್ಥಾಪನೆಯಾಯಿತು. ಇದು ಬಸವ ತತ್ತ್ವಾನುಯಾಯಿಗಳನ್ನು ಬೆಸೆಯುವ ಏಕೈಕ ಸಾಕ್ಷಿ. ಲಿಂಗಾಯತ ಧರ್ಮೀಯರಾಗಿ ಹುಟ್ಟಿದವರೇ ಇರಲಿ, ದೀಕ್ಷೆಯ ಮೂಲಕ ಸ್ವೀಕರಿಸಿದವರೇ ಇರಲಿ ತಮ್ಮ ಜೀವಮಾನದಲ್ಲಿ ಒಮ್ಮೆಯಾದರೂ ಬಂದು ಗಣಲಿಂಗ ದರ್ಶನ ಮಾಡಿ ತಮ್ಮ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕು. ಹೀಗೆ ಈ ಗಣಲಿಂಗವು ಚಿರಸಾಕ್ಷಿಯಾಗಿ ಎಲ್ಲ ಬಸವ ತತ್ತ್ವಾನುಯಾಯಿಗಳನ್ನು ಬೆಸೆಯುತ್ತದೆ. ದಿ. 14 ರಂದು ಅತ್ಯಂತ ಸುಂದರವಾದ ಪಥ ಸಂಚಲನೆ ಜರುಗಿತು. ಕಿಕ್ಕಿರಿದು ಸೇರಿ, ಬೃಹತ್ ಸಭಾಂಗಣವನ್ನು

ತುಂಬಿದ ಶರಣ ಸಮುದಾಯ ಸಾಮೂಹಿಕ ಪ್ರಾರ್ಥನೆ-ವಚನ ಪಠಣ ಮಾಡಿತು. ಪೂಜ್ಯ ಮಾತೆ ಮಹಾದೇವಿಯವರು, ಪೂಜ್ಯ ಸಿದ್ಧಲಿಂಗ ಸ್ವಾಮಿಗಳು, ಪೂಜ್ಯ ಮಹಾಂತ ಸ್ವಾಮಿಗಳು, ಪೂಜ್ಯ ಬೇಲೀಮಠದ ಸ್ವಾಮಿಗಳು, ಪೂಜ್ಯ ಮಾತೆ ಗಂಗಾದೇವಿ, ಪೂಜ್ಯ ಭಾಲ್ಕಿ ಪಟ್ಟದ್ದೇವರು ಕ್ರಮವಾಗಿ ವಚನ ಪಠಣ ಮಾಡಿಸಿದರು. ಸಂಜೆ 6 ರಿಂದ 9 ರ ವರೆಗೆ ಧರ್ಮ ಚಿಂತನಗೋಷ್ಠಿ, ರಾತ್ರಿ 9 ರಿಂದ 11 ರವರೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಜರುಗಿದವು. ದಿ. 15 ರಂದು ಬೆಳಿಗ್ಗೆ 10 ರಿಂದ ನಡೆದ ಸಮಾರೋಪ ಸಮಾರಂಭವನ್ನು, ರಾಷ್ಟ್ರೀಯ ಬಸವ ದಳಗಳ ಸಮಾವೇಶವನ್ನು ಪಾಟೀಲ ಪುಟ್ಟಪ್ಪನವರು ಉದ್ಘಾಟಿಸಿದರು; ಇಂದುಮತಿ ಪಾಟೀಲ ಪುಟ್ಟಪ್ಪ ಧ್ವಜಾರೋಹಣವನ್ನು ನೆರವೇರಿಸಿದರು.

ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತ, ಜನ ಪ್ರವಾಹವು ದೂರ ದೂರದಿಂದೆಲ್ಲ ಹರಿದು ಬರುತ್ತ ದಾಂಗುಡಿಯಿಟ್ಟು ಬೆಳೆಯುತ್ತಿರುವ ಶರಣ ಮೇಳ ಒಂದು ರೋಮಾಂಚಕಾರಿಯಾದ ಧಾರ್ಮಿಕ ಸಮಾವೇಶ. ವಿಶಾಲವಾದ ನೀಲಾಂಬಿಕಾ ಪ್ರಸಾದ ಮಂಟಪದಲ್ಲಿ ಇರುವೆಗಳಂತೆ ಸಾಲಿಟ್ಟು ಬರುವ ಜನರಿಗೆ, ಜೇನ್ನೊಣಗಳಂತೆ ಚಟುವಟಿಕೆಯಿಂದ ಕಾರ್ಯಮಗ್ನರಾಗಿ ಪ್ರಸಾದ ದಾಸೋಹ ಮಾಡುವ ಶರಣ ಕಾರ್ಯಕರ್ತರ ಸಡಗರ ಅನುಭವ ಮಂಟಪ, ಮಹಾಮನೆಯ ಕಾರ್ಯ ವಿಸ್ತಾರವನ್ನು ನೆನಪಿಗೆ ತರುತ್ತದೆ. ಇಂಥ ಶರಣ ಮೇಳವನ್ನು ಕಂಡ ಕಣ್ಣುಗಳೇ ಧನ್ಯ, ಶರಣ ವಾಣಿಯನ್ನು ಕೇಳಿದ ಕಿವಿಗಳು ಮಾನ್ಯ. ನೀವೂ ಮುಂದಿನ ಶರಣ ಮೇಳಕ್ಕೆ ತಪ್ಪದೇ ಬನ್ನಿ !

★

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಮರು ನಾಮಕರಣ ಮಾಡಲು ಹೋರಾಟಕ್ಕೆ ಕರೆ

ಶರಣ ಬಂಧುಗಳೇ,

ಕಲ್ಯಾಣ ಕರ್ನಾಟಕ ಎಂಬ ವಿಶೇಷ ಹೆಸರು ಪಡೆದ ಗುಲಬರ್ಗಾ ವಲಯದ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಡಲು ನಿರಂತರವಾಗಿ ಮನವಿಯನ್ನು ಮಾಡುತ್ತಲೇ ಇದ್ದೇವೆ. ಬೇಡಿಕೆ ಬಹು ಹಿಂದಿನದು. ಮೊದಲ ಶರಣ ಮೇಳದಿಂದಲೂ ಶರಣರ ಸಮ್ಮುಖದಲ್ಲಿ ನಿರ್ಣಯ ತೆಗೆದುಕೊಳ್ಳಲಾಗುತ್ತಿದೆ. ಸರ್ಕಾರವು ಯಾವುದಕ್ಕೂ ಕಿವಿಗೊಡುತ್ತಿಲ್ಲ. ವಿಶ್ವಗುರು ಬಸವಣ್ಣನವರಂಥ ಮಹಾ–

ಪುರುಷರ ಹೆಸರುಗಳನ್ನು ವಿಶ್ವವಿದ್ಯಾಲಯ, ಆಣೆಕಟ್ಟು, ಬಡಾವಣೆ ಮುಂತಾದವಕ್ಕೆ ಇಡುತ್ತ ಕೃತಜ್ಞತೆ ಸಲ್ಲಿಸುವುದು ಶಿಷ್ಟಾಚಾರ, ಸರ್ಕಾರಗಳ ಕರ್ತವ್ಯ. ಮೂರೂವರೆ ಕೋಟಿ ಧರ್ಮಾನುಯಾಯಿಗಳನ್ನು ಅಸಂಖ್ಯಾತ ತತ್ವಾಭಿಮಾನಿಗಳನ್ನೂ ಹೊಂದಿರುವ ಜಗತ್ತಿನ ಪ್ರಥಮ ಸಮತಾವಾದಿ ಬಸವಣ್ಣನವರ ಹೆಸರಿಡಲು ಸರ್ಕಾರವು ಮೀನ–ಮೇಷ ಎಣಿಸುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರಿಗೆ ಸಮಾಜದ ಹಿರಿಯರು ಮನವಿಯನ್ನು ಸಲ್ಲಿಸಿದ್ದಾರೆ. ಈ ಮನವಿಯ ಪ್ರತಿಯನ್ನು ನಿಮಗೀಗ ಕಳಿಸಲಾಗಿದೆ. ನೀವು ಸಹ ವೈಯಕ್ತಿಕವಾಗಿ/ರಾಷ್ಟ್ರೀಯ ಬಸವ ದಳಗಳ ಪರವಾಗಿ/ನೀವು ಇನ್ನಿತರ ಸಂಘ–ಸಂಸ್ಥೆ ಹೊಂದಿದ್ದರೆ ಅವುಗಳ ಪರವಾಗಿ ಲೆಟರ್ ಹೆಡ್‌ಗಳಲ್ಲಿ ಟೈಪ್ ಮಾಡಿಸಿರಿ.

1. ಒಂದು ಪ್ರತಿಯನ್ನು ನೇರವಾಗಿ ಮುಖ್ಯ ಮಂತ್ರಿಗಳಿಗೆ ಅಂಚೆಯಲ್ಲಿ ಕಳಿಸಿರಿ.
2, ಶರಣ ಮೇಳದಲ್ಲಿ ತೆಗೆದುಕೊಂಡ ನಿರ್ಣಯದಂತೆ ಫೆಬ್ರುವರಿ 12 ರಿಂದ ಚಳುವಳಿಯನ್ನು ಅಹಿಂಸಾತ್ಮಕವಾಗಿ ಆರಂಭಿಸಬೇಕು. ಫೆಬ್ರುವರಿ 12 ರಂದು ಸರ್ಕಾರದ ಸ್ಥಳೀಯ ಪ್ರತಿನಿಧಿಗಳಾದ ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ್ ಅವರಿಗೆ ಹಲವಾರು ಜನ ಪ್ರತಿನಿಧಿಗಳೊಡನೆ ಹೋಗಿ ಕಂಡು ಮನವಿ ಸಲ್ಲಿಸಿರಿ.

ನಂತರ ಹಂತಹಂತವಾಗಿ ವಿವಿಧ ರೂಪದಲ್ಲಿ ಚಳುವಳಿಯನ್ನು ವಿಸ್ತರಿಸಲು ತಿಳುವಳಿಕೆ ನೀಡಲಾಗುವುದು. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಡಬೇಕಾದುದು ಸರ್ಕಾರದ ಕರ್ತವ್ಯ. ಈ ಕರ್ತವ್ಯದಲ್ಲಿ ಮೈಮರೆತಿರುವ ಸರ್ಕಾರವನ್ನು ಎಚ್ಚರಿಸುವುದು ಅಗತ್ಯ. ಆದ್ದರಿಂದ ಪ್ರತಿಯೊಬ್ಬರೂ ಈ ದಿಶೆಯಲ್ಲಿ ಕಾರ್ಯತತ್ಪರರಾಗಬೇಕೆಂದು ಕೋರುತ್ತೇವೆ.

ವಿ. ಸೂ. : ಗುಲಬರ್ಗಾದಲ್ಲಿ ಒಂದು ಕ್ರಿಯಾ ಸಮಿತಿಯು ರಚನೆಯಾಗಿದ್ದು, ಅವರ ವಿಚಾರಗಳಿಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಆದ್ದರಿಂದ ಸ್ಥಳೀಯವಾಗಿ, ವಲಯ ಮಟ್ಟದಲ್ಲಿ ಅವರು ಚಳುವಳಿ ರೂಪಿಸಿದಾಗ ಬಸವ ತತ್ವಾನುಯಾಯಿಗಳು ಅದಕ್ಕೆ ಸ್ಪಂದಿಸಬೇಕಾಗಿ ಸೂಚಿಸುತ್ತೇವೆ.

ಬೆಂಗಳೂರು ವಿಳಾಸ :
ರಾಷ್ಟ್ರೀಯ ಬಸವ ದಳ
ಬಸವ ಮಂಟಪ. 2035,
20 ನೆಯ ಮೇಯಿನ್,
2 ನೇ ಬ್ಲಾಕು, ರಾಜಾಜಿನಗರ
ಬೆಂಗಳೂರು–560010
ದೂರವಾಣಿ : 3325335

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಮಹಾಮನೆ ಮಹಾಮಠ
ಕೂಡಲ ಸಂಗಮ–587115
ತಾ–ಹುನಗುಂದ, ಜಿಲ್ಲೆ–ಬಿಜಾಪುರ
ದೂರವಾಣಿ : 08351–74–838

ಮುಖ್ಯಮಂತ್ರಿಗಳಿಗೆ ಒಂದು ಮನವಿ ಪತ್ರ

ದಿನಾಂಕ : 22–1–1996

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು
ಇವರಲ್ಲಿ ವಿಜ್ಞಾಪನೆಗಳು,

ಮಾನ್ಯರೇ,

ವಿಷಯ : ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ
"ಬಸವೇಶ್ವರ ವಿಶ್ವವಿದ್ಯಾಲಯ"
ಎಂದು ನಾಮಕರಣ ಮಾಡಲು ಮನವಿ.

ಗುಲಬರ್ಗಾ ವಿಶ್ವವಿದ್ಯಾಲಯವು ಕರ್ನಾಟಕದ ಪ್ರಮುಖ ವಿಶ್ವವಿದ್ಯಾಲಯಗಳಲ್ಲೊಂದು. ಹನ್ನೆರಡನೆಯ ಶತಮಾನದ ಸಮತಾವಾದಿ, ಕ್ರಾಂತಿಯೋಗಿ ಬಸವಣ್ಣನವರ ಕಾರ್ಯಕ್ಷೇತ್ರವಾದ ಬಸವ ಕಲ್ಯಾಣವನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿ ಕಲ್ಯಾಣ ಕರ್ನಾಟಕ ಎಂಬ ವಿಶೇಷ ಹೆಸರನ್ನು ಪಡೆದಿರುವ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ "ಬಸವೇಶ್ವರ ವಿಶ್ವವಿದ್ಯಾಲಯ" ಎಂದು ನಾಮಕರಣ ಮಾಡಬೇಕೆಂದು ಬಹುಜನರ ಅಪೇಕ್ಷೆ. ನಾವು ಸುಮಾರು ಹತ್ತು ವರ್ಷಗಳಿಂದಲೂ ಮನವಿಯನ್ನು ಸಲ್ಲಿಸುತ್ತಲಿದ್ದೇವೆ. ಬೆಂಗಳೂರಿನಲ್ಲಿ ಬಸವ ಧರ್ಮ ಸಮ್ಮೇಳನವು 1995 ರ ಮೇ 13, 14 ರಂದು ನಡೆದಾಗಲೂ ಈ ಬಗ್ಗೆ ಮನವಿಯನ್ನು ಮಾಡಿಕೊಳ್ಳಲಾಯಿತು. ನಮ್ಮ ಮನವಿ ಸ್ವೀಕರಿಸಿದ ಗೃಹ ಮಂತ್ರಿಗಳಾದ ಶ್ರೀ ಪಿ. ಜಿ. ಆರ್. ಸಿಂಧ್ಯರವರು "ನಿಮ್ಮ ಮನವಿಯನ್ನು ಗಮನಿಸುತ್ತೇವೆ. ಇದಕ್ಕೆ ವ್ಯಾಪಕ ಪ್ರಚಾರ ನೀಡಿ, ವಿವಾದಾಸ್ಪದ, ಚರ್ಚಾಸ್ಪದ ವಿಷಯವನ್ನಾಗಿ ಮಾಡಬೇಡಿರಿ" ಎಂದರು. ಇಲ್ಲಿಗಾಗಲೇ ಆ ಭರವಸೆ ಕೊಟ್ಟು ಎಂಟು ತಿಂಗಳು ಸರಿದು ಹೋದವು. ಸರ್ಕಾರವು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇದನ್ನು ಗಮನಿಸಿ ಕೂಡಲ ಸಂಗಮ ಸುಕ್ಷೇತ್ರದಲ್ಲಿ ಇದೇ ಜನವರಿ 12 ರಿಂದ 15 ರ ವರೆಗೆ ನಡೆದ ಒಂಭತ್ತನೆಯ ಶರಣ ಮೇಳದಲ್ಲಿ ಬೃಹತ್ ಸಂಖ್ಯೆಯಲ್ಲಿ ಸಮಾವೇಶವಾದ ಶರಣರು ಮತ್ತು ರಾಷ್ಟ್ರೀಯ ಬಸವ ದಳಗಳ ಸದಸ್ಯರ ಸಮ್ಮುಖದಲ್ಲಿ ದಿ. 14–1–1996 ರಂದು ಈ ಕೆಳಕಂಡ ನಿರ್ಣಯವನ್ನು ಕೈಗೊಳ್ಳಲಾಯಿತು. ಈ ನಿರ್ಣಯದ ವಿವರ ಹೀಗಿದೆ:

"ವಿಶ್ವಗುರು ಬಸವಣ್ಣನವರು ಶ್ರೇಷ್ಠ ಸಮತಾವಾದಿ ; ನವ ಧರ್ಮ ದ್ರಷ್ಟಾರರು, ಅಸ್ಪೃಶ್ಯೋದ್ಧಾರಿ, ದೀನ ದಲಿತರ ಸರ್ವಾಂಗೀಣ ಉತ್ಥಾನಕ್ಕಾಗಿಯೇ ತಮ್ಮ ಜೀವನವನ್ನು ಮುಡಿಪಿಟ್ಟ ಮಾನವತಾವಾದಿ. ಜಗತ್ತು ಕಂಡರಿಯದ ಕೆಳಗಿನಿಂದ ಪರಿವರ್ತನೆ ತಂದ ಕ್ರಾಂತಿ ಪುರುಷ. ಇಂಥ ಮಹಾನುಭಾವರ ಹೆಸರನ್ನು ಕಲ್ಯಾಣ ಕರ್ನಾಟಕದ ಪ್ರಮುಖ ನಗರ ಗುಲಬರ್ಗಾದಲ್ಲಿ ರೂಪುಗೊಂಡಿರುವ ವಿಶ್ವ ವಿದ್ಯಾಲಯಕ್ಕೆ ಇಡಬೇಕಾದುದು ಸರ್ಕಾರದ ಕರ್ತವ್ಯ.

ಕರ್ನಾಟಕ ಸರ್ಕಾರಕ್ಕೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಅದು ಏನೊಂದೂ ಕ್ರಮವನ್ನು ನಾಮಕರಣಕ್ಕಾಗಿ ತೆಗೆದುಕೊಂಡಿಲ್ಲ.

ಗುಲಬರ್ಗಾದಲ್ಲಿ ರಚನೆಯಾಗಿರುವ "ಬಸವೇಶ್ವರ ವಿಶ್ವವಿದ್ಯಾಲಯ" ನಾಮಕರಣ ಕ್ರಿಯಾ ಸಮಿತಿಯ ಸದಸ್ಯರು ಶ್ರೀ ರಾಮಚಂದ್ರ ವೀರಪ್ಪ, ಲೋಕಸಭಾ ಸದಸ್ಯರು, ಬೀದರ ಇವರ ನೇತೃತ್ವದಲ್ಲಿ ಪ್ರಮುಖರಾದ ಬಸವರೆಡ್ಡಿ ಇಟಗಿ, ಬಸವರಾಜ ಭೀಮಳ್ಳಿ, ಕರ್ನಾಟಕ ರಾಜ್ಯ, ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಬಸವಕುಮಾರ್ ಪಾಟೀಲ, ನಗರ ಪಾಲಿಕಾ ಸದಸ್ಯ, ಡಿ. ವ್ಹಿ. ಪಾಟೀಲ ಇವರುಗಳು 1995 ರ ನವೆಂಬರ್ ತಿಂಗಳಲ್ಲಿ ತಮ್ಮನ್ನು ಪ್ರತ್ಯಕ್ಷವಾಗಿ ಕಂಡು ಮನವಿ ಸಲ್ಲಿಸಿದ್ದಾರೆ. ಇಷ್ಟಾದರೂ ಸರ್ಕಾರದ ವತಿಯಿಂದ ಏನೊಂದು ಪ್ರತಿಕ್ರಿಯೆ ಬಂದಿಲ್ಲ.

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರು ಇಡಲು ಈಗ ಯಾವುದೇ ಆಕ್ಷೇಪವು ಯಾರಿಂದಲೂ ಇಲ್ಲ. ಆದ್ದರಿಂದ ಸರ್ಕಾರವನ್ನು ಈ ದಿಶೆಯಲ್ಲಿ ಒತ್ತಾಯಿಸಬೇಕು. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಡಲು 1996 ರ ಫೆಬ್ರುವರಿ 10 ನೆಯ ತಾರೀಖಿನ ವರೆಗೆ ಗಡುವು ಕೊಡಬೇಕು. ಅಷ್ಟರೊಳಗೆ ಸರಕಾರವು ಕ್ರಮ ತೆಗೆದುಕೊಳ್ಳದಿದ್ದರೆ ಫೆಬ್ರುವರಿ 12 ರಿಂದ ರಾಷ್ಟ್ರೀಯ ಬಸವ ದಳವು ಶರಣ ಬಂಧುಗಳಿಗೆ ಸಾತ್ವಿಕ ಹೋರಾಟವನ್ನು ಆರಂಭಿಸಲು ಪ್ರೇರಣೆ ನೀಡಬೇಕು. ಹಂತ ಹಂತವಾಗಿ ಚಳುವಳಿಯನ್ನು ತೀವ್ರಗೊಳಿಸುತ್ತ, ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ "ಬಸವೇಶ್ವರ ವಿಶ್ವವಿದ್ಯಾಲಯ" ಎಂದು ನಾಮಕರಣ ಮಾಡುವವರೆಗೆ ರಾಜ್ಯಾದ್ಯಂತ ಚಳುವಳಿಯನ್ನು ಮುಂದುವರಿಸಬೇಕು."

ನಾಡು–ನುಡಿ, ಸಂಸ್ಕೃತಿ–ಸಾಹಿತ್ಯ ಕ್ಷೇತ್ರಗಳಿಗೆ ಅಪ್ರತಿಮ ಕೊಡುಗೆ ನೀಡಿದ ವಿಶ್ವಗುರು ಬಸವಣ್ಣನವರಂಥ ಮಹಾಪುರುಷರ ಹೆಸರುಗಳನ್ನು ವಿಶ್ವವಿದ್ಯಾಲಯದಂತಹ ಸಂಸ್ಥೆಗಳಿಗೆ ಸ್ವಯಂ ಪ್ರೇರಣೆಯಿಂದ ಇಡಬೇಕಾದುದು ಸರ್ಕಾರದ ಕರ್ತವ್ಯವಾಗಿದ್ದರೂ ಸಹ ಈ ಬಗ್ಗೆ ಉದಾಸೀನ ಮಾಡುತ್ತಿರುವುದರಿಂದ ಸರ್ಕಾರದ ಗಮನ ಸೆಳೆಯಲು ಚಳುವಳಿಯನ್ನು ಆರಂಭಿಸುವುದು ಅನಿವಾರ್ಯವಾಗುತ್ತಿದೆ.

ಆದ್ದರಿಂದ ದೂರದೃಷ್ಟಿಯುಳ್ಳವರೂ, ಕರ್ನಾಟಕ ರಾಜ್ಯದ ಬಗ್ಗೆ, ಇದರ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಅಪಾರ ಅಭಿಮಾನ ಇರುವವರೂ ಆದ ತಾವು ತೀವ್ರವಾಗಿ ನಿರ್ಧಾರಗೊಂಡು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರಿಡಲು ತ್ವರಿತ ಕ್ರಮ ಕೈಗೊಳ್ಳಬೇಕೆಂದೂ, ಜನರನ್ನು ಚಳುವಳಿ ಮಾಡಲು ಪ್ರಚೋದಿಸಬಾರದಾಗಿಯೂ ಕೋರಿ ಈ ಮನವಿಯನ್ನು ಸಲ್ಲಿಸಲಾಗುತ್ತಿದೆ.

ಶುಭಹಾರೈಕೆಗಳೊಡನೆ,

ಪೂಜ್ಯ ಶ್ರೀ

ಶರಣ. ಎಸ್. ಪುಟ್ಟರುದ್ರಪ್ಪ ಕಾರ್ಯಾಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ	**ಮಹಾಜಗದ್ಗುರು ಮಾತೆ ಮಹಾದೇವಿ** ಪೀಠಾಧೀಶರು, ಬಸವ ಧರ್ಮದ ಮಹಾಜಗದ್ಗುರು ಪೀಠ
ಪೂಜ್ಯ ಶ್ರೀ ದಯಾನಂದ ಸ್ವಾಮೀಜಿ ಸಂಚಾಲಕರು, ರಾಷ್ಟ್ರೀಯ ಬಸವ ದಳ ಕೇಂದ್ರ ಸಮಿತಿ	**ಶರಣ. ಬಸವಕುಮಾರ್ ಪಾಟೀಲ** ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ
ಶರಣ. ಕೊಂಡಜ್ಜಿ ಜಿ. ಬಸಪ್ಪ ಸಂಚಾಲಕರು, ಶರಣ ಮೇಳ ಉತ್ಸವ ಸಮಿತಿ	**ಶರಣೆ. ದೇವಿಕಾ ಶರಣಪ್ಪ** ಪ್ರಧಾನ ಕಾರ್ಯದರ್ಶಿ, ಬಸವ ಧರ್ಮ ಸಂಸತ್
ಶರಣ. ಶಿವಕುಮಾರ್ ಢಾಕುಳಗೆ ರಾಷ್ಟ್ರೀಯ ಕಲ್ಯಾಣ ವಿದ್ಯಾರ್ಥಿ ಗಣ ರಾಜ್ಯ ಸಮಿತಿ ಸಂಚಾಲಕರು	**ಶರಣ. ವಿಜಯಾನಂದರು** ಗಣ ನಾಯಕರು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಧಾರವಾಡ ನಗರದ ಕಡಪಾ ಮೈದಾನದಲ್ಲಿ

[ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದ ಮುಂದೆ]

ವಿಶ್ವಧರ್ಮ ಪ್ರವಚನ



ಕರ್ನಾಟಕ ರಾಜ್ಯಾದ್ಯಂತ ಅಭೂತ ಪೂರ್ವ ಪ್ರವಚನಗಳನ್ನು ನಡೆಸಿ, ಅಪೂರ್ವ ಜಾಗೃತಿಯನ್ನುಂಟು ಮಾಡಿ, ಇಂಗ್ಲೆಂಡ್–ಅಮೆರಿಕಾಗಳಲ್ಲಿಯೂ ಸಂಚರಿಸಿ, ಭಾರತೀಯ ಸಂಸ್ಕೃತಿಯ ಹಿರಿಮೆ–ಗರಿಮೆಗಳನ್ನು, ಬಸವ ತತ್ತ್ವದ ವೈಶಿಷ್ಟ್ಯವನ್ನು ಸಾರಿ ಬಂದಿರುವ ಪ್ರಪ್ರಥಮ ಮಹಿಳಾ–

ಜಗದ್ಗುರು, ಅಪೂರ್ವವಾಗ್ಮಿ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ, ಬಸವ ಧರ್ಮದ ಪರಮೋಚ್ಚ ಪೀಠವಾದ ಕೂಡಲ ಸಂಗಮ ಸಂಕ್ಷೇತ್ರದ ಮಹಾಮನೆ ಮಹಾಮಠದಲ್ಲಿರುವ ಬಸವ ಧರ್ಮದ ಮಹಾಜಗದ್ಗುರು ಪೀಠದ ಎರಡನೆಯ ಅಧಿಕಾರಿಣಿಯಾಗಿರುವ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ** ಅವರು, ಸೋಮವಾರ ದಿ, 12–2–1996 ರಿಂದ ಎಂಟು ವಾರಗಳ ಕಾಲ ಅಖಂಡವಾಗಿ ಅವ್ಯಾಹತವಾಗಿ, ಪ್ರತಿನಿತ್ಯ ಸಂಜೆ 6–30 ರಿಂದ 8–30 ರ ವರೆಗೆ "ವಿಶ್ವಧರ್ಮ ಪ್ರವಚನ" ವನ್ನು ಮಾಡಲಿದ್ದಾರೆ.

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಯವರು ತಮ್ಮ ಅಸ್ಖಲಿತವಾಣಿಯಿಂದ ಧರ್ಮ, ದೇವರು, ಆತ್ಮ-ಪರಮಾತ್ಮ, ಪೂರ್ವಜನ್ಮ-ಪುನರ್ಜನ್ಮ ಸಿದ್ಧಾಂತ, ಶ್ರೀ ಗುರು ಬಸವಣ್ಣನವರ ಜೀವನ–ಸಾಧನೆ–ಸಂದೇಶ, ಅವರ ಸರ್ವಾಂಗ ಪರಿಪೂರ್ಣ ನಿಲುವು, ಕಾಯಕ ತತ್ತ್ವ ಮುಂತಾದ ಹಲವು ವಿಷಯಗಳನ್ನು ಪ್ರಸ್ತಾಪಿಸಲಿರುವರು. ಪೂಜ್ಯ ಮಾತೆಯವರ ಅಮೋಘ ಪ್ರವಚನವನ್ನು ಎಲ್ಲ ಜಾತಿಮತ ಪಂಥ ಧರ್ಮಗಳವರೂ ಕೇಳಿ ಪುನೀತರಾಗಬೇಕೆಂದು ಹಾರೈಸುತ್ತೇವೆ.

— ಸರ್ವರಿಗೂ ಹೃತ್ಪೂರ್ವಕ ಸ್ವಾಗತ —

4–2–1996
ಚನ್ನಹುಣ್ಣಿಮೆ

ವಿಶ್ವಧರ್ಮ ಪ್ರವಚನ ಸಮಿತಿ,
ಧಾರವಾಡ.

ಪ್ರವಚನ ನಡೆಯುವ ಕಾಲದಲ್ಲಿ ಪೂಜ್ಯರು ಬರೆದ ಹಲವಾರು ಗ್ರಂಥಗಳು, ಆಡಿಯೋ–ವೀಡಿಯೋ ಕೆಸೆಟ್ಟು, ಭಿತ್ತಿ ಪಟಗಳು, ಮುಂತಾದವು ಪುಸ್ತಕ ಮಳಿಗೆಯಲ್ಲಿ ಮಾರಾಟಕ್ಕೆ ದೊರೆಯುತ್ತವೆ.

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ ಮತ್ತು ವಿಶೇಷ ಕಾರ್ಯಕ್ರಮಗಳು

ಧಾರವಾಡ ನಗರದ ಕಡಪಾ ಮೈದಾನದಲ್ಲಿ ಪ್ರತಿನಿತ್ಯ ಸಂಜೆ 6–30 ರಿಂದ 8–30 ರ ವರೆಗೆ ದಿ, 12–2–1996 ರಿಂದ 8 ವಾರಗಳ ಕಾಲ ನಡೆಯುವ ಪ್ರವಚನದ ಅವಧಿಯಲ್ಲಿ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ.

1. ಪ್ರತಿವಾರ ಸಾಮೂಹಿಕ ಪ್ರಾರ್ಥನೆ 'ಶರಣ ಸಂಗಮ ; ಭಾನುವಾರ ಬೆಳಿಗ್ಗೆ 11 ಗಂಟೆಗೆ, ಲಿಂಗಾಯತ ಟೌನ್ ಹಾಲ್‌ದಲ್ಲಿ
2. ಗಣ ಮೇಳ-ವಾರ್ಷಿಕ ಗಣ ಸಮಾವೇಶ, ಶಿವರಾತ್ರಿಯಂದು(ದಿ.17-2-1996) ಬೆಳಿಗ್ಗೆ 10 ಗಂಟೆಗೆ ಕಡಪಾ ಮೈದಾನ (ಅಥವಾ ಶ್ರೀ ಆರ್. ಎನ್. ಶೆಟ್ಟಿ ಕ್ರೀಡಾಂಗಣ) ದಲ್ಲಿ

3. ಕಲ್ಯಾಣ ಕ್ರಾಂತಿ ಸ್ಮರಣೋತ್ಸವ : ಮಾರ್ಚ 2 ರಿಂದ 6 ರ ವರೆಗೆ ಧರ್ಮ–ಪಿತ ಬಸವಣ್ಣನವರ ಗಡಿಪಾರು, ಶರಣರ ಬಂಧನ, ಎಳೆಹೂಟೆ, ಬಿಜ್ಜಳನ ವಧೆ-ಈ ಘಟನೆಗಳ ನೆನಪಿಗಾಗಿ ಸಂಜೆಯ ಪ್ರವಚನದಲ್ಲಿ ವಿಶೇಷ ಕಾರ್ಯಕ್ರಮ
4. ಪೂಜ್ಯ ಶ್ರೀ ಮಾತಾಜಿಯವರ 51 ನೆಯ ಹುಟ್ಟುಹಬ್ಬ ದಿ. 13–3–1996 ರಂದು ಸರಳವಾಗಿ ಮತ್ತು ಸ್ಥಳೀಯವಾಗಿ ಆಚರಿಸಲಾಗುವುದು.
5. ಅಲ್ಲಮಪ್ರಭು ದೇವರ ಜಯಂತಿ, ದಿ. 20-3–1996 ರಂದು
6. ಅಕ್ಕಮಹಾದೇವಿಯ ಜಯಂತಿ, ದಿ. 3–4–1996 ರಂದು

ಪೀಠಾರೋಹಣ ಮತ್ತು ಬಸವ ಧರ್ಮದ ನಾಲ್ಕನೆಯ ಸಮ್ಮೇಳನ

ವಿಶ್ವಗುರು ಬಸವಣ್ಣನವರ ವಿಚಾರಧಾರೆ, ಧಾರ್ಮಿಕ, ಸಂವಿಧಾನದ ಪ್ರಕಾರ ಸ್ತ್ರೀಯು ಸಮಾನವಾದ ಧಾರ್ಮಿಕ ಹಕ್ಕುಗಳನ್ನು ಹೊಂದಿದ್ದರೂ, ಪುರುಷರ ಗುರು ಪೀಠಗಳು ಸಾಗಿಬಂದಂತೆ ಸ್ತ್ರೀಯ ಗುರು ಪೀಠಗಳು ಸಾಗಿಬರಲಿಲ್ಲ. ಈ ಕೊರತೆ ತುಂಬಲು 1970 ರಲ್ಲಿ ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠವನ್ನು **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು,** ಸ್ಥಾಪಿಸಿ, ಪ್ರಥಮ ಅಧಿಕಾರಿಯನ್ನಾಗಿ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು** ಗದ್ದುಗೆಗೆ ಏರಿಸಿದರು. ಪೂಜ್ಯ ಸ್ವಾಮೀಜಿಯವರು ದಿನಾಂಕ 30–6–1995 ರಂದು ಲಿಂಗೈಕ್ಯರಾದುದರಿಂದ ಅವರ ಸದಿಚ್ಛೆಯಂತೆ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು** ದಿ, 13–1–1996 ರಂದು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನೇರಿದರು. ಇದರಿಂದ ತೆರವಾದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು** ಎರಡನೆಯ ಅಧಿಕಾರಿಯಾಗಿ ಆಯ್ಕೆಯಾಗಿದ್ದು ಪೀಠಾರೋಹಣವು ಸೋಮವಾರ ದಿ. 15–4–1996 ರಂದು ಬೆಳಿಗ್ಗೆ 10 ಗಂಟೆಗೆ ಧಾರವಾಡದ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ ನಡೆಯಲಿದೆ. ಈ ವಿಶೇಷ ಕಾರ್ಯಕ್ರಮದ ನಿಮಿತ್ತ ಬಸವ ಧರ್ಮದ ನಾಲ್ಕನೆಯ ಸಮ್ಮೇಳನವು ದಿ. 14 ಮತ್ತು 15 ರಂದು ನಡೆಯಲಿದೆ.

ಈ ಎಲ್ಲ ಕಾರ್ಯಕ್ರಮಗಳಲ್ಲೂ ಶರಣ ಬಂಧುಗಳು ತನು–ಮನ–ಧನಗಳಿಂದ ಭಾಗಿಗಳಾಗಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇವೆ. ವಿವರ–ಗಳಿಗಾಗಿ ಸಂಪರ್ಕಿಸುವ ವಿಳಾಸ :

ವಿಶ್ವಧರ್ಮ ಪ್ರವಚನ ಸಮಿತಿ ದೂ : 41005
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆಗೇಟ್ ಬಳಿ, ಧಾರವಾಡ–580003

ಶೀಘ್ರವೇ ವೀರಶೈವ ಮಠಗಳ ಒಕ್ಕೂಟ ಅಸ್ತಿತ್ವಕ್ಕೆ

(ಸಂಯುಕ್ತ ಕರ್ನಾಟಕ, ಶನಿವಾರ ದಿ. 20-1-1996)

ಸುತ್ತೂರು (ನಂಜನಗೂಡು) ಜ. 19. ರಾಜ್ಯದ ಮಠಾಧೀಶ್ವರರಲ್ಲಿ ಒಮ್ಮತ ಮೂಡಿಸುವ ಉದ್ದೇಶದಿಂದ ಸದ್ಯದಲ್ಲೇ ವೀರಶೈವ ಮಠಗಳ ಒಕ್ಕೂಟ ಅಸ್ತಿತ್ವಕ್ಕೆ ಬರಲಿದೆ ಎಂದು ಸಿರಿಗೆರೆ ತರಳಬಾಳು ಬೃಹನ್ಮಠದ ಜಗದ್ಗುರು ಡಾ॥ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ತಿಳಿಸಿದರು. ಗುರುವಾರ ಇಲ್ಲಿನ ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು ಈ ಬಗ್ಗೆ ಈಗಾಗಲೇ ಮಠಾಧೀಶ್ವರರೆಲ್ಲರೂ ಒಂದೆಡೆ ಸೇರಿ ರಹಸ್ಯ ಮಾತುಕತೆ ನಡೆಸಲಾಗಿದೆ. ಇಂದು ಇಲ್ಲಿ ಮತ್ತೊಂದು ಸಭೆ ನಡೆಸಲಾಗುವುದೆಂದರು.

ಸಮಾಜಕ್ಕೆ ಸಂಬಂಧಿಸಿದ ಯಾವುದೇ ವಿಚಾರದಲ್ಲಿ ಒಬ್ಬೊಬ್ಬ ಗುರುಗಳು ಒಂದೊಂದು ರೀತಿ ಮಾತನಾಡಬಾರದು ಹಾಗೂ ವೇದಿಕೆಯ ತೀರ್ಮಾನ ಅಂತಿಮವಾಗಬೇಕು ಎಂಬ ಉದ್ದೇಶದಿಂದ ಒಕ್ಕೂಟ ಸ್ಥಾಪಿಸಲಾಯಿತು ಎಂದರು. ನಮ್ಮ ನಾಡಿನಲ್ಲಿ ಭಕ್ತಿಗೆ ಬರವಿಲ್ಲದಿರುವುದರಿಂದಲೇ ಅರಮನೆಗಳು ನಶಿಸಿ ಹೋದವು ಗುರುಮನೆಗಳಿನ್ನೂ ಇವೆ. ಈ ಗುರುಮನೆಗಳಿಂದ ಆತ್ಮಶಾಂತಿ ಸಿಗುತ್ತದೆ. ನಾವು ಶರೀರ ಸೌಂದರ್ಯಕ್ಕಿಂತ ಅಂತರಿಕ ಸೌಂದರ್ಯಕ್ಕೆ ಕಾಳಜಿ ವಹಿಸಬೇಕು. ಅಧ್ಯಾತ್ಮಿಕ ಜ್ಞಾನ ವಯಸ್ಸಾದವರಿಗೆ ಮಾತ್ರ ಎನ್ನುವ ಭಾವನೆ ನಮ್ಮಿಂದ ತೊಲಗಬೇಕು ಎಂದರು. ಆಸೆ ಇಲ್ಲದಿದ್ದರೆ ಜೀವನ ದುರ್ಭರವಾಗುತ್ತದೆ. ಆದರೆ ಆಸೆ ಧರ್ಮದ ಚೌಕಟ್ಟಿನಲ್ಲಿರಬೇಕೆಂದು ಕಿವಿಮಾತು ಹೇಳಿದರು.

ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಡಾ. ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳು ಮಾತನಾಡಿ ಇಡೀ ರಾಷ್ಟ್ರದಲ್ಲೇ ಕರ್ನಾಟಕದ ವೀರಶೈವ ಮಠಗಳು ಉಳಿದೆಲ್ಲ ಮಠಗಳಿಗೂ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು. ಮಠಗಳು ವೀರಶೈವ ಸಿದ್ಧಾಂತಕ್ಕೆ ತಕ್ಕಂತೆ ಕಾರ್ಯಕ್ರಮ ನಿರೂಪಿಸುತ್ತಿವೆ ಸಮಾಜದ ರಥವನ್ನೂ ಯಾವ ದಿಕ್ಕಿನಲ್ಲಿ ಎಳೆಯಬೇಕು ಎಂಬುದನ್ನು ಚಿಂತಿಸುತ್ತಿವೆ. ನಾಡಿನಲ್ಲಿ ನವ ಚೈತನ್ಯವನ್ನು ಬೆಳೆಸಲು ಶ್ರಮಿಸುತ್ತಿವೆ ಎಂದು ನುಡಿದರು.

ಸುತ್ತೂರು ಮಠ 10 ನೇ ಶತಮಾನದಲ್ಲೇ ಆರಂಭವಾಗಿದ್ದರಿಂದ ವೀರಶೈವ ಧರ್ಮ ಆಗಲೇ ಇತ್ತು ಎಂಬುದು ಗೊತ್ತಾಗುತ್ತದೆ. ವೀರಶೈವರೊಳಗೆ ಶರಣ ಸಾಹಿತ್ಯ ಇದೆ. ಶರಣ ಸಾಹಿತ್ಯವನ್ನು ಬೆಳೆಸಲು ಯತ್ನಿಸಬೇಕು ಎಂದು ಕರೆನೀಡಿದರು. ನಿಡಸೋಸಿ

ಶ್ರೀ ಸಿದ್ಧಸಂಸ್ಥಾನ ಮಠದ ಜಗದ್ಗುರು ಶ್ರೀ ಪಂಚಮಶಿವಲಿಂಗೇಶ್ವರಸ್ವಾಮಿ ಮಾತನಾಡಿ, ಹಿಂದೆ ಕೇವಲ ಜಪ ತಪ ಪೂಜೆಗಳಿಗೆ ಮೀಸಲಾಗಿದ್ದ ಮಠಗಳು ಇಂದು ಮನೆಬಾಗಿಲಿಗೆ ಹೋಗುತ್ತಿವೆ. ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಶಿಕ್ಷಣ, ಧರ್ಮ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ದುಡಿಯುತ್ತಿವೆ ಎಂದರು.

ಆನಂದಪುರದ ಶ್ರೀ ಮುರುಘರಾಜೇಂದ್ರ ಸಂಸ್ಥಾನ ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ, ನಮ್ಮತನವನ್ನು ನಾವು ಮರೆತರೆ ಕಷ್ಟವಾಗುತ್ತದೆ. ಇಂದು ಬದುಕು ಯಾಂತ್ರಿಕವಾಗುತ್ತಿದೆ ವಿಶ್ವಾಸ, ನಂಬಿಕೆಗಳು ಕಡಿಮೆಯಾಗುತ್ತಿವೆ. ಭಾವನಾತ್ಮಕ ಸಂಬಂಧ ಹೋಗಿ ಕೃತ್ರಿಮ ಸಮಾಜವಾಗುತ್ತಿದೆ. ಅದನ್ನು ತಪ್ಪಿಸಲು ನಾವೆಲ್ಲ ಯತ್ನಿಸಬೇಕಾಗಿದೆ ಎಂದರು.

ಸಿದ್ಧಗಂಗಾ ಮಠದ ಜಗದ್ಗುರು ಡಾ. ಶ್ರೀ ಶಿವಕುಮಾರ ಸ್ವಾಮಿಗಳು ಮಾತನಾಡಿ ಬಸವ ತತ್ತ್ವ ಕೇವಲ ಒಂದು ಸಮಾಜಕ್ಕೆ ಸೀಮಿತವಾಗಿಲ್ಲ ಎಂದು ಹೇಳಿದರು. ಭ್ರಷ್ಟಾಚಾರ ಇಂದು ಸಮಾಜದಲ್ಲಿ ತಾಂಡವವಾಡುತ್ತಿದ್ದು ಅದನ್ನು ತಪ್ಪಿಸುವ ಹೊಣೆ ನಮ್ಮಗಳ ಮೇಲಿದೆ ಎಂದು ಹೇಳಿದರು. ಕನಕಪುರ ಶ್ರೀ ದೇಗುಲ ಮಠ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಮದ್ರಾಸ್‌ನ ಉಚ್ಚನ್ಯಾಯಾಲಯದ ನ್ಯಾಯಾಧೀಶ ಶಿವರಾಜ ಪಾಟೀಲ ಉಪಸ್ಥಿತರಿದ್ದರು. ಮಾಜಿ ಶಾಸಕ ಎಚ್. ಗಂಗಾಧರನ್ ಅವರು ಸ್ವಾಗತಿಸಿದರು.

ಲಿಂಗಾಯತ ಮಠಾಧೀಶರಲ್ಲಿ ಒಂದು ಕೋರಿಕೆ

—ಪೂಜ್ಯ ಮಾತಾಜಿಯವರು

ಪೂಜ್ಯ ಶ್ರೀ ನಿ. ಪ್ರ. ಸ್ವಾಮಿಗಳು
ಅವರಲ್ಲಿ ಅನಂತ ಶರಣುಗಳು.

ಧರ್ಮಪಿತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ ; ನಿಮ್ಮ ಕ್ಷೇಮ ಹಾರೈಸುವೆವು. ನಿಮ್ಮೆಲ್ಲರ ಸಹೃದಯತೆ, ಸಹಕಾರಗಳಿಂದ ಶರಣ ಮೇಳವು ಅತ್ಯಂತ ಯಶಸ್ವಿಯಾಯಿತು ; ಧನ್ಯವಾದ.

ಈ ಪತ್ರದ ಉದ್ದೇಶ ಹೀಗಿದೆ.

ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ "ಶೀಘ್ರವೇ ವೀರಶೈವ ಮಠಗಳ ಒಕ್ಕೂಟ ಅಸ್ತಿತ್ವಕ್ಕೆ" ಎಂಬ ಶೀರ್ಷಿಕೆಯ ಅಡಿಯಲ್ಲಿ ಹಲವಾರು ವಿಷಯಗಳು ಪ್ರಕಟ-

ಗೊಂಡಿವೆ. ಮಠಾಧೀಶರು ಒಕ್ಕೂಟ ಮಾಡಿಕೊಳ್ಳುವ ಬಗ್ಗೆ, ಮಾಡಿಕೊಳ್ಳದೆ ಇರುವ ಬಗ್ಗೆ ಯಾರೇನೂ ತಲೆಕೆಡಿಸಿಕೊಳ್ಳುವುದು ಅಗತ್ಯವಿಲ್ಲ. ಧರ್ಮ-ಸಮಾಜ ಕುರಿತು ಎಷ್ಟೆಷ್ಟು ಸ್ಪದಿಸುತ್ತಿದ್ದಾರೆ. ಮೂರುವರೆ ಕೋಟಿಗೂ ಮಿಕ್ಕಿ ಇರುವ ಒಂದು ಸಮಾಜವು ಅನಾಮಿಕವಾಗಿ, ದುರ್ಬಲವಾಗಿ ಆಗಿರಲು ಕಾರಣವೇನು ಎಂಬ ಬಗ್ಗೆ ಎಷ್ಟರಮಟ್ಟಿಗೆ ಮಠಾಧೀಶರು ಚಿಂತನೆ ಮಾಡುತ್ತಿದ್ದಾರೆ ಎಂಬುದನ್ನು ಸಮಾಜ ಬಾಂಧವರು ಈಗಾಗಲೇ ಅರಿತುಕೊಳ್ಳತೊಡಗಿದ್ದಾರೆ. ಜಾಗತಿಕ ವ್ಯಾಪ್ತಿ ಹೊಂದಿರುವ ಕ್ರೈಸ್ತ, ಇಸ್ಲಾಂಗಳ ವಿಷಯ ಬಿಟ್ಟುಬಿಡೋಣ; ಕೇವಲ ನಾಲ್ಕುನೂರು ವರ್ಷಗಳ ಇತಿಹಾಸವಿರುವ ಲಿಂಗಾಯತರ ಸಂಖ್ಯೆಯ ಅರ್ಧದಷ್ಟು ಇಲ್ಲದ ಸಿಖ್ ಧರ್ಮೀಯರ ಸಂಘಟನೆ ನೋಡಿದರೆ, ಈ ವೀರ-ಶವರು (ಇವರಿಗೆ 'ವೀರ' ಬೇರೆ ಸೇರಿಕೊಂಡಿದೆ) ನಾಚಿ ತಲೆ ತಗ್ಗಿಸಬೇಕು. ತಮ್ಮನ್ನು ನಂಬಿ ಹಿಂಬಾಲಿಸಿರುವ ಈ ಸಮಾಜ ಏಕಿಷ್ಟು ದುರ್ಬಲವಾಗಿದೆ ? ಎಂಬ ಬಗ್ಗೆ ಕಾರಣ ಹುಡುಕುವಷ್ಟು ಸೌಜನ್ಯ, ಕರ್ತವ್ಯ ಪ್ರಜ್ಞೆ ಅನೇಕ ಮಠಾಧಿಪತಿಗಳಲ್ಲಿ ಇಲ್ಲ.

ಈ ಕೆಲವು ಮಠಾಧಿಪತಿಗಳಲ್ಲಿರುವ ಅಪ್ರಾಮಾಣಿಕತನ ನೋಡಿದರೆ ಎಂಥವರೂ ನಿಬ್ಬೆರಗಾಗಬೇಕು. ಜಗತ್ತಿನಲ್ಲಿ ಯಾವ ಪಾದ್ರಿಯೂ ತನ್ನ ಧರ್ಮ ಗುರು ಏಸುವಿಗೆ ದ್ರೋಹ ಬಗೆಯುವುದನ್ನು ಕಾಣೆವು. ಯಾವ ಮುಸ್ಲಿಮ್ ಇಮಾಮ್, ಮೌಲ್ವಿಯು ತನ್ನ ಅಲ್ಲಾಹನಿಗಾಗಲಿ, ಪ್ರವಾದಿ ಮೊಹಮ್ಮದರಿಗಾಗಲಿ ದ್ರೋಹ ಬಗೆಯುವುದನ್ನು ಕಾಣೆವು. ವೀರಶೈವ ಮಠಾಧೀಶರು ಇಷ್ಟಲಿಂಗ ನಿಷ್ಠೆ-ಏಕದೇವೋಪಾಸನೆ ಹೊಂದಿರದೆ ದೇವರಿಗೂ ಎರಡು ಬಗೆಯುತ್ತಾರೆ. ಧರ್ಮಗುರು ಬಸವಣ್ಣನವರನ್ನು ಧರ್ಮಗುರು ಎಂದೊಪ್ಪಿ ಮನ್ನಿಸದೆ ಧರ್ಮ ಗುರುವಿಗೂ ದ್ರೋಹ ಬಗೆಯುತ್ತಾರೆ. ದೇವರು-ಧರ್ಮ ಗುರುವಿಗೇ ಎರಡು ಬಗೆಯುವವರು ಅವರ ದೃಷ್ಟಿಯಲ್ಲಿ ಯಃಕಶ್ಚಿತ್ ಆದ ಸಮಾಜವನ್ನು ಅದೆಷ್ಟು ಕಳಕಳಿಯಿಂದ ನೋಡಿಕೊಂಡಾರು. ರಹಸ್ಯ ಸಭೆ ಕರೆದುಕೊಂಡು ಇವರು ಮಾಡುವುದಾದರೂ ಏನು ? ಧರ್ಮಪಿತ ಬಸವಣ್ಣನವರನ್ನು ಧರ್ಮಗುರು, ಲಿಂಗಾಯತ ಧರ್ಮ ಸಂಸ್ಥಾಪಕ ಎಂದು ಒಪ್ಪಬಾರದು, ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಮನ್ನಿಸದೆ, ಆಗಮಗಳನ್ನು ಧರ್ಮ ಶಾಸ್ತ್ರ ಎನ್ನಬೇಕು ಎಂಬುದು ತಾನೆ ? ಈ ವಿಷಯದಲ್ಲಾದರೂ ಅವರು ಪ್ರಾಮಾಣಿಕರಾಗಿದ್ದರೆ, ಎಷ್ಟೋ ಉಪಕಾರವಾಗುವುದು. ಇವರು ಕೆಲವರು ತಮ್ಮ ತಮ್ಮ ಮಠಗಳು ಧರ್ಮಪಿತ ಬಸವಣ್ಣನವರಿಗೂ ಪೂರ್ವದಲ್ಲಿ ಇದ್ದವು ಎಂದು ಹೇಳುವುದರಲ್ಲಿ, ಕೃತ್ರಿಮ ಸಾಹಿತ್ಯ ಸೃಷ್ಟಿಸುವುದರಲ್ಲಿ ಪೈಪೋಟಿ ನಡೆಸಿದ್ದಾರೆ. ವಿದ್ಯಾವಂತರಾದ ಅಧಿಕಾರಿಗಳು ಮಠಗಳ ಗದ್ದುಗೆಗೆ ಬಂದರೆ ಪ್ರಗತಿಪರ ಚಿಂತನೆ ನೆಲೆ-

ಗೊಳ್ಳುವುದು ಎಂದು ಭಾವಿಸಿದ್ದವರಿಗೆ ಭ್ರಮನಿರಸನ ಆಗುತ್ತಲಿದೆ. ಹಿಂದಿನ ಅನೇಕ ಮಠಾಧೀಶರುಗಳಲ್ಲಿ ಕಾಣಬರುತ್ತಿದ್ದ ಬಸವ ಭಕ್ತಿ, ಪ್ರಾಮಾಣಿಕತೆ ಸಹ ಈಗಿನ ಅನೇಕರಿಗೆ ಇಲ್ಲವಾಗಿದೆ. ಧರ್ಮಗುರು ಬಸವಣ್ಣನವರ ನೇತೃತ್ವದಲ್ಲಿ ಲಿಂಗಾಯತ ಧರ್ಮದ ನೂತನ ಪ್ರವಾಹ ಹರಿಯಲು ಹೊರಟಾಗ ಅನೇಕ ಪಾಶುಪತ, ಲಾಕುಲೀಶ, ಕಾಳಾಮುಖ, ಸಿದ್ಧ, ನಾಥ ಪಂಥಗಳವರು, ಮಠಗಳವರು, ವೈದಿಕರು ಸಹ ಈ ಧರ್ಮವನ್ನು ಸ್ವೀಕರಿಸಿದರು. ಜಗತ್ತಿನಲ್ಲಿ ಯಾವುದೇ ಮಿಶನರಿ ಧರ್ಮ ಅಂದರೆ ಯಾರಿಗೆ ಬೇಕಾದರೂ ದೀಕ್ಷೆ ಕೊಡಬಲ್ಲ ಧರ್ಮಗಳಿಗೆ ಹಿಂದಿನ ಮತ ಪಂಥ ಬಣಗಳವರು ಬಂದು ಸೇರುವುದು ಸಹಜ. (ಈ ಅಂಶವನ್ನು ಶ್ರೀ ಹೆಚ್. ಎಸ್. ಶಿವಪ್ರಕಾಶ್‌ರವರು ಮಹಾಚೈತ್ರದಲ್ಲಿ ಚಿತ್ರಿಸಿರುವುದನ್ನು ಗಮನಿಸಬಹುದು. ಇದೊಂದು ಅಂಶ ಸತ್ಯವೇ ಇದ್ದರೂ ಬಳಸಿರುವ ಭಾಷೆ, ಚಿತ್ರಿಸಿರುವ ರೀತಿ ಸರಿಯಿಲ್ಲ ಮತ್ತು ಉಳಿದೆಲ್ಲ ಸುಳ್ಳು ಸಂಗತಿಗಳು ಸೇರಿರುವ ಕಾರಣ ಮಹಾಚೈತ್ರವನು ಬಹಿಷ್ಕರಿಸಬೇಕಾಗಿದೆ.) ಶ್ರೀ ಡಾ॥ ಎಂ. ಎಂ. ಕಲಬುರ್ಗಿಯವರು 'ಕೆಟ್ಟಿತ್ತು ಕಲ್ಯಾಣ' ಎಂಬ ಇತ್ತೀಚಿನ ನಾಟಕ ಕೃತಿಯಲ್ಲಿ ಈ ಅಂಶವನ್ನು ಒತ್ತಿ ಒತ್ತಿ ಹೇಳಿದ್ದಾರೆ. ಅಗ್ರಹಾರದ (ವೈದಿಕ) ಪುರೋಹಿತಶಾಹಿ, ಶೈವ ಮಠಗಳು, ರಾಜಶಾಹಿ ಕ್ರಾಂತಿಪುರುಷ ಬಸವಣ್ಣನವರನ್ನು ಹಿಂದೆ, ಇಂದು ತೆಗಳಿದರೆ ನಮಗೆ ಈಗ ಯಾವ ವಿಷಾದವೂ ಎನ್ನಿಸದು. ಇದವರ ಸಹಜ ನಡೆ. ಜಾತಿವಾದದ ಚೌಕಟ್ಟಿನಿಂದ ಹೊರಬರದವರಿಗೆ, ಬಹುದೇವತೋಪಾಸಕರಿಗೆ, ಅಹಂಭಾವಿಗಳಿಗೆ, ಒಡೆದು ಆಳುವ ನೀತಿ ಉಳ್ಳವರಿಗೆ ಧರ್ಮಗುರು ಬಸವಣ್ಣನವರು ದುಃಸ್ವಪ್ನವಾಗಿ ಕಾಡಿದರೆ ಆಶ್ಚರ್ಯವೇನಲ್ಲ. ಕರ್ನಾಟಕದಲ್ಲಿ ಕಾಳಾಮುಖ ಪರಂಪರೆಯ ಪ್ರಮುಖ ಮಠವಾಗಿದ್ದ ಸುತ್ತೂರು ಮಠ ಲಿಂಗವಂತ ಧರ್ಮವನ್ನು ಸ್ವೀಕರಿಸಿದ ನಂತರ ಲಿಂಗಾಯತ ಮಠವಾಗಿರುವುದು ದಾಖಲೆಗಳಲ್ಲಿ ನಿಚ್ಚಳವಾಗಿರುವಾಗ ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಳ್ಳುವ ಸಾಹಸವೇಕೆ ? ಕೃತ್ರಿಮ ಸಾಹಿತ್ಯ ಸೃಷ್ಟಿಸುವವರ ತಲೆಯ ಮೇಲೆ ಅಪ್ಪಳಿಸುವಂತೆ ಶ್ರೀ ಘನಲಿಂಗದೇವರ ವಚನಗಳು ಸಾಕ್ಷಿ ನುಡಿಯುತ್ತವೆ. ಒಂದು ಹುಡುಗಿಗೆ ವಿಶಿಷ್ಟದಿನ ಮದುವೆಯಾಗುತ್ತದೆ. "ಆ ಹುಡುಗಿಗೆ ಇಂಥ ದಿನ ಲಗ್ನವಾಯಿತು ; ಇಂಥವನ ಹೆಂಡತಿಯಾದಳು. ಆದರೆ ಆ ಹುಡುಗಿಗೆ ಮೊದಲೇ ಅಸ್ತಿತ್ವವಿತ್ತು" ಎಂದು ವಾದಿಸಿದರೆ ಎಷ್ಟು ಹಾಸ್ಯಾಸ್ಪದವೋ ಅಷ್ಟು ಹಾಸ್ಯಾಸ್ಪದವಾಗಿದೆ. ಇವರುಗಳ ವಾದ ಅನೇಕ ಶೈವ ಮಠಗಳವರು ಇಷ್ಟಲಿಂಗ ಸ್ವೀಕರಿಸಿ, ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದಾರೆ, ಆ ಧರ್ಮ ಸ್ವೀಕಾರಕ್ಕೆ ಮೊದಲು ಅಸ್ತಿತ್ವ ಇದ್ದಿರಬಹುದು. ಅದರಲ್ಲೇನು ವಿಶೇಷ ?!.

ಇನ್ನು ನಾವಾರೂ ಈ ಮಹಾವಿದ್ವಾಂಸರುಗಳ ಜೊತೆಗೆ ವಾದಕ್ಕೆ ಇಳಿಯುವ ಅಗತ್ಯವಿಲ್ಲ. ಏಕೆಂದರೆ ಅವರಾರಿಗೂ ನಿದ್ರೆ ಬಂದಿಲ್ಲ, ನಿದ್ರೆ ಬಂದಂತೆ ನಟಿಸುತ್ತಿದ್ದಾರೆ. ಅವರಿಗೀಗ ಒಂದೇ ಒಂದು ಪಂಥಾಹ್ವಾನ (Challenge) ನೀಡಬೇಕಾಗಿದೆ. ಯಾವುದೇ ಒಂದು ಧರ್ಮ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸಬೇಕಾದರೆ ಅದಕ್ಕೆ ಬೇಕಾಗುವ ಮುಖ್ಯ ಅಂಶ ತನ್ನದೇ ಆದ ಸಾಹಿತ್ಯ. ಈ ವೀರಶೈವರಿಗೆ ಇರುವ ಸಾಹಿತ್ಯ ಯಾವುದು ? ನಮ್ಮ ಆದಿ ಶರಣರು ವೇದಾಗಮಗಳು ನಮ್ಮ ಪ್ರಮಾಣ ಗ್ರಂಥಗಳಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ವೇದಂಗಳ ಹಿಂದೆ ಹರಿಯದಿರು, ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು
ಪುರಾಣಂಗಳ ಹಿಂದೆ ಬಳಲದಿರು, ಬಳಲದಿರು
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈಪಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು

ಪಾತಾಳದಗ್ಘವಣಿಯು ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ,
ತೆಗೆಯಬಹುದೇ ? ಶಬ್ದ ಸೋಪಾನವ ಕಟ್ಟಿ ನಡೆಸಿದವರು ನಮ್ಮ
ಪುರಾತನರು. ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು
ಗೀತ ಮಾತೆಂಬ ಜ್ಯೋತಿಯ
ಬೆಳಗಕೊಟ್ಟರು ಕೂಡಲ ಚನ್ನಸಂಗನ ಶರಣರು.

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ,
ಎಮ್ಮ ವಚನದ ನೂರೆಂಟರ ಅಧ್ಯಯನಕ್ಕೆ
ಶತರುದ್ರೀಯ (ಯಾಗ) ಸಮಬಾರದಯ್ಯ,
ಎಮ್ಮ ವಚನದ ಸಾಸಿರಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಹಾಲತೊರೆಗೆ ಬೆಲ್ಲದ ಕೆಸರು ; ಸಕ್ಕರೆಯುಂತಹ
ಮಳಲು, ತವರಾಜದಂತಹ ನೊರೆತೆರೆಗಳು, ಇಂತಪ್ಪ
ಆದ್ಯರ ವಚನವಿರಲು ಬೇರೆ ಭಾವಿಯ ತೋಡಿ

ಉಪ್ಪ ನೀರ ಸವಿದಂತಾಯಿತ್ತಯ್ಯ ಎನ್ನ ಯುಕ್ತಿ,
ನಿಮ್ಮ ವಚನಂಗಳ ಕೇಳದೆ ಅನ್ಯ ಪುರಾಣಂಗಳ ಕೇಳಿ ಕೆಟ್ಟೆನಯ್ಯ
ಕೂಡಲಸಂಗಮ ದೇವ.

ಆದ್ಯರ ವಚನ ಪರುಷ ಕಂಡಯ್ಯ ! ಸದಾಶಿವನೆಂಬ ಲಿಂಗವ
ನಂಬುವುದು. ನಂಬಲೊಡನೆ ನೀ ವಿಜಯಿ ಕಂಡಯ್ಯ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ.

"ಆದ್ಯರ ವಚನ" ಎಂಬುದನ್ನು ಧೂರ್ತರು ಬಸವಾದಿ ಪ್ರಮಥರಿಗೆ ಮೊದಲು ಇದ್ದವರು ಎಂದು ಬಿಂಬಿಸಲು ಯತ್ನಿಸುತ್ತಾರೆ. ಆದ್ಯರು ಎಂದರೆ ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಎಂದರ್ಥ. ಇದು ನನ್ನ ವ್ಯಾಖ್ಯಾನವಷ್ಟೇ ಅಲ್ಲ. ಬಸವಣ್ಣನವರ ವಚನಗಳಿಗೆ ಅರ್ಥ ಬರೆದ ಟೀಕಿನ ವಚನಗಳಲ್ಲೂ ಇದನ್ನು ಸ್ಪಷ್ಟೀಕರಿಸಲಾಗಿದೆ.

ಶರಣರು ವಚನಗಳೇ ನಮ್ಮ ಪ್ರಮಾಣ ಶಾಸ್ತ್ರ ಎಂದಿದ್ದಾರೆ. ಒಕ್ಕೂಟ ಕಟ್ಟಬಯಸಿರುವ ಅನೇಕ ಪೀಠಾಧೀಶರು ಆಗಮಗಳೇ ತಮ್ಮ ಪ್ರಮಾಣ ಗ್ರಂಥ ಎನ್ನುತ್ತಾರೆ. ಅಂದಾಗ ನಮ್ಮ ವಚನ ಶಾಸ್ತ್ರ ಆಧಾರಿತ ಮಾರ್ಗ ಅವರ ಮಾರ್ಗ ಬೇರೆ ಬೇರೆ ಎಂಬುದು ಸ್ಪಷ್ಟವಾಗುತ್ತದೆ.

ಈ ಇಷ್ಟಲಿಂಗಧಾರಿ ಮಠಾಧೀಶರು ಅನುಸರಿಸುವ ಧರ್ಮ ಬಸವ ಪೂರ್ವದ್ದು ಎಂದು ಸಾಧಿಸುವ ಛಲವಿದ್ದರೆ, ಇವರಿಗೆ ಏನಾದರೂ ಸ್ವಾಭಿಮಾನ ಪ್ರಾಮಾಣಿಕತೆ ಇದ್ದರೆ ವಚನ ಸಾಹಿತ್ಯವನ್ನು ಬಿಟ್ಟು ಅದನ್ನು ಉಲ್ಲೇಖಿಸದೆ ಆಗಮಗಳನ್ನು ಉಲ್ಲೇಖಿಸಿ ತಮ್ಮ ಧಾರ್ಮಿಕ ವಿಚಾರಗಳನ್ನು ಮಂಡಿಸಬೇಕು. ಇಸ್ಲಾಮನ್ನು ಪ್ರತಿಪಾದಿಸುವವರು ಕುರ್-ಆನ್ ಅನ್ನು, ಕ್ರೈಸ್ತ ಧರ್ಮವನ್ನು ಪ್ರತಿಪಾದಿಸುವವರು ಬೈಬಲ್ಲನ್ನು ಉಲ್ಲೇಖಿಸಿ ಮಾತನಾಡುತ್ತಾರೆ. ವೀರಶೈವ ಮಠಾಧಿಪತಿಗಳು ವಚನಗಳನ್ನು ಉಲ್ಲೇಖಿಸಿ ತಮ್ಮ ಧರ್ಮವನ್ನು ಪ್ರತಿಪಾದಿಸುವುದು ಅತಾರ್ಕಿಕತೆ ಮತ್ತು ಅಪ್ರಾಮಾಣಿಕತೆಯಾಗುತ್ತದೆ. ತಮ್ಮ ಧರ್ಮವು ಆಗಮಗಳಲ್ಲಿ ಇದ್ದರೆ, ವೇದಗಳಲ್ಲಿ ಇದ್ದರೆ ಅದನ್ನೇ ಉಲ್ಲೇಖಿಸಲಿ. ವೀರಶೈವಕ್ಕೆ ಹೊರತಾದ ಲಿಂಗಾಯತ ಧರ್ಮವನ್ನು ಹಿಗ್ಗಾಮುಗ್ಗಾ ಎಳೆದಾಡಿ ಬಣ್ಣಗೆಡಿಸುವ ಅಪ್ರಾಮಾಣಿಕ ವರ್ತನೆ ಬಿಟ್ಟುಕೊಡಲಿ.

ವಿರಕ್ತಮಠಾಧೀಶರಾದ ತಾವು ಕೆಲವರಾದರೂ ಈ ನಯವಂಚನೆಯಿಂದ ಅಂಥವರನ್ನು ಹೊರತನ್ನಿರಿ. ಧರ್ಮಪಿತ ಬಸವಣ್ಣನವರನ್ನು ಧರ್ಮ ಗುರುವೆಂದು, ಸಂಸ್ಥಾಪಕರೆಂದು ಒಪ್ಪುವ ವಿರಕ್ತಮಠಾಧೀಶರನ್ನು ಒಂದುಗೂಡಿಸಿರಿ. ಇಂದು

ಸಮಾನ ವಿಚಾರಧಾರೆಯವರು ಒಂದುಗೂಡಬೇಕಾಗಿದೆ ; ಧ್ರುವೀಕರಣಗೊಳ್ಳಬೇಕಾಗಿದೆ. ಫಿಶನ್ (ಒಡೆಯುವಿಕೆ) ಮತ್ತು ಫ್ಯೂಶನ್ (ಒಂದುಗೂಡುವಿಕೆ) ಜೀವ ವಿಜ್ಞಾನದ ಸಹಜ ಕ್ರಿಯೆ. ಭಿನ್ನ ಭಿನ್ನ ವಿಚಾರದವರು ಬೇರೆ ಬೇರೆಯಾಗಿ, ಸಮಾನ ವಿಚಾರದವರು ಒಂದು ಗೂಡಬೇಕಾಗಿದೆ. ಧರ್ಮ ಗುರುವನ್ನಾಗಿ ಬಸವಣ್ಣನವರನ್ನು ಒಪ್ಪಿಕೊಳ್ಳದವರು (ಆದರೆ ಅವರು ಕೊಟ್ಟ ವಚನ ಸಾಹಿತ್ಯ ಬೇಕು ಎಂದು ಬಡಬಡಿಸುವವರು) ಹೇಗೆ ಒಂದುಗೂಡಿ ರಹಸ್ಯ ಸಭೆ ಸೇರಿ ಒಕ್ಕೂಟವನ್ನು ಮಾಡುವ ತರಾತುರಿಯಲ್ಲಿರುವರೋ ಹಾಗೆ ತಾವು ಧರ್ಮಗುರು ಬಸವಣ್ಣನವರನ್ನು ಮೇಟಿಗೂಟವನ್ನಾಗಿ, ಶ್ರದ್ಧಾಕೇಂದ್ರವನ್ನಾಗಿ ಹೊಂದಿದವರು (ಅವರಂತೆ ರಹಸ್ಯ ಸಭೆ ಸೇರುವ ಅಗತ್ಯವೇನಿಲ್ಲ) ದೃಢ ನಿರ್ಧಾರವನ್ನು ಘೋಷಿಸಿರಿ. ಮುಸುಕಿನೊಳಗಣ ಗುದ್ದಾಟ ನಿಲ್ಲಲಿ, ಧರ್ಮಾಧಿಕಾರಿಗಳನ್ನು ನಂಬಿದ ಜನತೆ ನೆಮ್ಮದಿಯಿಂದ ಧರ್ಮಮಾರ್ಗದಲ್ಲಿ ಸಾಗಲು ಅವಕಾಶ ಮಾಡಿಕೊಡುವುದು ಅಗತ್ಯವಿದೆ. ಸ್ಪಷ್ಟವಾಗಿ ಉಭಯ ವಿಚಾರದವರು ಬೇರೆ ಬೇರೆಯಾಗಿ ತಮ್ಮ ದಾರಿಯನ್ನು ನಿಚ್ಚಳ ಪಡಿಸಿಕೊಳ್ಳುವುದಕ್ಕೆ ಈಗ ಕಾಲವು ಮಾಗಿದೆ.

ಅತ್ಯಂತ ನಮ್ರವಾಗಿ ತಮ್ಮ ಮುಂದೆ ಈ ಮಾತುಗಳನ್ನು ಇಡುತ್ತೇನೆ. "ಮನೆಯ ತೊತ್ತಲಸಿದರೆ ಮನೆಯೊಡತಿ ಮೂಡಿಕೊಂಬಂತೆ" ಶರಣ ಚೇತನಗಳೇ ಇಂದು ಪುಟಿದೆದ್ದು ನಿಲ್ಲುತ್ತಿವೆ. ಬಸವ ತತ್ತ್ವದ ತೇರು ಹೊರಟಿದೆ. ಯಾರೂ ಯಾವ ಮಠಾಧೀಶರು, ಅವರ ಒಕ್ಕೂಟವು ಇದನ್ನು ನಿಲ್ಲಿಸಲಾರದು. ನಿಜ ಶರಣರ ಪಯತ್ನದಲ್ಲಿ ಶ್ರದ್ಧೆಯಿದೆ, ಕಳಕಳಿ ಇದೆ: ಸಮರ್ಪಣೆಯಿದೆ. ಆದಿ ಶರಣರು ಮಾಡಿದ ತ್ಯಾಗ ಬಲಿದಾನಗಳ ಪ್ರೇರಣೆ ಇದೆ. ಸಾಗಿರುವ ತತ್ತ್ವದ ತೇರಿಗೆ ಕೈ ಹಚ್ಚಿದವರು ಸಾರ್ಥಕ್ಯತೆ ಸಾಧಿಸುವರು : ವಿರೋಧಿಸಿದವರು ಸೃಷ್ಟಿಕರ್ತನ ಸಂಕಲ್ಪಕ್ಕೆ ವಿರುದ್ಧ ನಿಂತು ಆ ಸರ್ವಶಕ್ತನ ಅವಕೃಪೆಗೆ ಪಾತ್ರರಾಗುವರು. ನೀವು ಕೈ ಹಚ್ಚಿರಿ ; ಬಿಡಿರಿ ; ಸತ್ಯದ ತತ್ತ್ವದ ತೇರು ಸಾಗುವುದು. ನೀವು ಭಾಗಿಗಳಾಗದಿದ್ದರೆ ಒಂದು ಭಾಗ್ಯವನ್ನು ಕಳೆದು ಕೊಂಡವರಾಗುವಿರಿ.

ಇದು ಹೃತ್ಪೂರ್ವಕವಾಗಿ ಮಾಡಿಕೊಂಡ ಮನವಿ.

ವಾಸ್ತವ್ಯ : ಬೆಂಗಳೂರು
ದಿ : 30–1–96

ಪೂಜ್ಯ ಶ್ರೀಮುನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಕೂಡಲಸಂಗಮ.

ಲಿಂಗಾಯತವೋ ? ವೀರಶೈವವೋ ?

—ವಿ. ವೀ. ಸಂಗಮದ, ರಾಣಿಬೆನ್ನೂರ.

ದಿನಾಂಕ : 1–1–1996 ರಂದು ಶ್ರೀ ಮಾತೆ ಮಹಾದೇವಿಯವರು "ಲಿಂಗಾಯತರು ವೀರಶೈವ ಪದವನ್ನು ಕೈಬಿಡಬೇಕು" ಎಂದು ಹೇಳಿದುದಕ್ಕೆ ಮುಂಡರಗಿ ಶ್ರೀಗಳು, ಹಾನಗಲ್ ಶ್ರೀಗಳು, ಶ್ರೀ ಜಿ. ಎಸ್. ಉಮದಿಯವರು, ಡಾ|| ಪಂ. ಹಿರೇಮಠರು ಹಾಗೂ ಶ್ರೀ ಎನ್. ಬಿ. ಘೋಡಕೆ ಇವರುಗಳು ಅಸಂಬದ್ಧ ಪ್ರಲಾಪ, ವೀರಶೈವ ಧರ್ಮಕ್ಕೆ ಆಘಾತ ಹಾಗೂ ವೀರಶೈವರು ಮತ್ತು ಲಿಂಗಾಯತರು ಭಿನ್ನರೇ ಲಿಂಗಾಯತ ಪದ ಸಾರುವಲ್ಲಿ ಎಂದು ಮುಂತಾಗಿ ಪ್ರತಿಕ್ರಿಯಿಸಿದ್ದಾರೆ. ಈ ಪ್ರತಿಕ್ರಿಯೆಗಳು ಸಂಯುಕ್ತ ಕರ್ನಾಟಕ ಹಾಗೂ ನವೋದಯ (ಗದಗ) ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

"ಲಿಂಗಾಯತ" ಧರ್ಮವನ್ನು ವೀರಶೈವವೆಂದೂ, ಅದನ್ನು ಪರಶಿವನೇ ಸ್ಥಾಪಿಸಿದನೆಂದೂ ; ಮುಂಡರಗಿ ಶ್ರೀಗಳವರು ಹಾಗೂ ಮೂರು ಸಾವಿರ ಮಠದ ಶ್ರೀಗಳವರು ಭಾವಿಸಿದ್ದಾರೆ. ಹಾಗೆಯೇ ಈ ಧರ್ಮವು ಅನಾದಿಯೆಂದೂ, ಅತ್ಯಂತ ಪ್ರಾಚೀನವೆಂದೂ ಶ್ರೀ ಜಿ. ಎಸ್. ಉಮದಿಯವರು ಹಾಗೂ ಡಾ|| ಪಂಚಾಕ್ಷರಿ ಹಿರೇಮಠ ಮುಂತಾದವರು ಭಾವಿಸಿದ್ದಾರೆ.

ಹೀಗೆ ವಾದಿಸುವವರು, 'ವೀರಶೈವ' ಪದ ಹಾಗೂ ಧರ್ಮದ ಉಲ್ಲೇಖವು ....ಆಗಮಗಳು, ಭಾಷ್ಯಗಳು, ಪುರಾಣಗಳು, ಬಸವಾದಿ ಶಿವಶರಣೆಯರ ವಚನಗಳು ಮುಂತಾದವುಗಳಲ್ಲಿ ಇವೆಯೆಂದು ಪ್ರತಿಪಾದಿಸುತ್ತಾರೆ. ನಾನೂ ಬಹಳ ಹಿಂದೆ ಹೀಗೆಯೇ ಭಾವಿಸಿದ್ದೆ. ಆದರೆ ನನ್ನ ಮೂರು ದಶಕಗಳ ಕಾಲದಲ್ಲಿ ಸಂಶೋಧನೆ ಮಾಡುತ್ತಾ ಬಂದಲ್ಲಿ ಈ ಆಗಮ ಹಾಗೂ ಬಸವಪೂರ್ವ ಯುಗದ ವೀರಶೈವ ಪರಂಪರೆಯು ಕೃತ್ರಿಮವೆಂದು ಮನವರಿಕೆಯಾಗುತ್ತಾ ಬಂದಿದೆ.

ಆಗಮ ಸಾಹಿತ್ಯದಲ್ಲಿ ಪರಿಣಿತರಾದ ಡಾ|| ಎಸ್. ಸಿ. ನಂದೀಮಠ, ಶ್ರೀ. ಸಿದ್ಧರಾಮಪ್ಪನವರು, ಪಾವಟೆ, ಶ್ರೀ ಎಂ. ಆರ್. ಸಾಖರೆಯವರು ಪ್ರಾರಂಭದಲ್ಲಿ ; ಈ ಪರಂಪರೆಯನ್ನು ನೈಜವೆಂದು ನಂಬಿದರೂ ಅವರ ಸಂಶೋಧನೆ ಮುಂದುವರೆದಾಗ, ಅಂತ್ಯದಲ್ಲಿ ಈ ಬಸವಪೂರ್ವ ಯುಗದ ವೀರಶೈವ ಪರಂಪರೆಯನ್ನು ನೈಜವೆಂದು ನಂಬಲಿಲ್ಲ. ಅದೇ ರೀತಿ ಡಾ|| ಫ. ಗು. ಹಳಕಟ್ಟಿಯವರು, ಶ್ರೀ ಹರ್ಡೇಕರ ಮಂಜಪ್ಪನವರು, ಪ್ರೊ|| ಎಸ್. ಎಸ್. ಬಸವನಾಳರು, ಶ್ರೀ ಜೀರಿಗೆ ಕಟ್ಟಿ ಬಸಪ್ಪನವರು, ಶ್ರೀ ಚನ್ನಮಲ್ಲಿಕಾರ್ಜುನರು, ಡಾ|| ಹಿರೇಮಲ್ಲೂರ್ ಈಶ್ವರನ್‌ರವರು ಮುಂತಾದ ವಿದ್ವಾಂಸರು ಹಾಗೂ ಸಂಶೋಧಕರು ಅಂತಿಮವಾಗಿ ಈ ಪ್ರಾಚೀನ ಪರಂಪರೆಯ

ವಾದವನ್ನು ನೈಜವೆಂದು ನಂಬುತ್ತಿಲ್ಲ. ದಿನಾಂಕ : 9-10-1994 ರಂದು ಕೊಪ್ಪಳದಲ್ಲಿ ಜರುಗಿದ, ವೀರಶೈವ ಅಧ್ಯಯನ ವೇದಿಕೆಯ, ವಿದ್ವಾಂಸರ ಸಭೆಯಲ್ಲಿ; ಡಾ॥ ಎಂ, ಎಂ. ಕಲಬುರ್ಗಿಯವರು ಮಾತನಾಡುತ್ತಾ, ವೀರಶೈವ ಪದಕ್ಕಿಂತ "ಲಿಂಗಾಯತ" ಪದವೇ ಯೋಗ್ಯವೆಂದು ಅಭಿಪ್ರಾಯಪಟ್ಟರು. ವಸ್ತುಸ್ಥಿತಿ ಹೀಗಿರುವಾಗ "ಲಿಂಗಾಯತ" ಧರ್ಮಕ್ಕೆ ವೀರಶೈವವೆಂದು ಪ್ರತಿಪಾದಿಸುವವರ ವಾದವನ್ನು ಒಪ್ಪುವುದಾದರೂ ಹೇಗೆ ? ಹಾಗಾದರೆ ಈ ಪದವು ಯಾವಾಗ ಬಳಕೆಗೆ ಬಂದಿದೆ, ಎಂಬುದು ಪ್ರಶ್ನಾರ್ಹ.

ನನ್ನ ದೀರ್ಘ ಸಂಶೋಧನೆಯ ಪ್ರಕಾರ, ವೀರಶೈವ ಪದವು ಸುಮಾರು 19 ಹಾಗೂ 20ನೇಯ ಶತಮಾನದ ಅವಧಿಯಲ್ಲಿ ಕೃತ್ರಿಮವಾಗಿ ಬಳಕೆಗೆ ಬಂದಿದೆ. ಈ ಅವಧಿಯಲ್ಲಿ, ಈ ಬಳಕೆಗೆ, ಈ ಕೆಳಗಿನ ಘಟನೆಗಳು ಕಾರಣವಾಗಿವೆ.

1. ಧಾರವಾಡ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿ ಜರುಗಿದ ವಿಶೇಷ ವೀರಶೈವ ದೀಕ್ಷಾ ವಿವಾದ ಪ್ರಕರಣ,
2. ಹಳೆಯ ಮೈಸೂರಿನಲ್ಲಿ, ಜನಗಣತಿಯ ಕಾಲಕ್ಕೆ ಲಿಂಗಾಯತರನ್ನು ಶೂದ್ರರೆಂದು ಸಾರಿದ ಪ್ರಕರಣ,
3. ಡಾ॥ ಕಲೆಕ್ಟರ್ ಆಗಿದ್ದ ಲಿಂ॥ ಶ್ರೀ. ಎಸ್. ಕೆ. ಒಡೆಯರರವರನ್ನು ಶೂದ್ರರೆಂದು ಕರೆದು ಮೊಕದ್ದಮೆ ಹಾಕಿದ "ಬನವಾಸಿ ಪ್ರಕರಣ."
4. ಹೈದರಾಬಾದ ಕರ್ನಾಟಕದಲ್ಲಿ ಲಿಂಗಾಯತರನ್ನು ಶೂದ್ರರೆಂದು ಕರೆದು ಹಾಕಿದ "ಪರಳೀ ವ್ಯಾಜ್ಯ ಪ್ರಕರಣ."

ಮೇಲಿನ ಈ ಪ್ರಕರಣಗಳಲ್ಲಿ ಆಗಿನ ಲಿಂಗಾಯತ ಪುರೋಹಿತಶಾಹಿಗಳು, ಇತ್ತ ಲಿಂಗಾಯತರೊಂದಿಗೆ ತಾವು 'ವೀರಶೈವ ಬ್ರಾಹ್ಮಣರೆಂದೂ' ಅತ್ತ ಹಿಂದೂ ಬ್ರಾಹ್ಮಣರೊಂದಿಗೆ ತಾವು 'ಲಿಂಗೀ ಬ್ರಾಹ್ಮಣ'ರೆಂದೂ ಪ್ರತಿಪಾದಿಸಹತ್ತಿದರು. ತಮ್ಮ ಈ ಪ್ರತಿಪಾದನೆಗಾಗಿ, ಕೃತ್ರಿಮ ವೀರಶೈವ ಪ್ರಾಚೀನ ಪರವಾದ-ಆಗಮಗಳು, ಭಾಷ್ಯಗಳು, ಶಿಖಾಮಣಿಗಳು, ಚಂದ್ರಿಕೆಗಳು, ಸಂಹಿತೆಗಳು-ಮುಂತಾದವುಗಳನ್ನು ಸಂಸ್ಕೃತದಲ್ಲಿ ಕೃತ್ರಿಮವಾಗಿ ರಚಿಸಿದರು. ಈ ಸಂಸ್ಕೃತ ಸಾಹಿತ್ಯದ ಶ್ಲೋಕಗಳನ್ನು, ಅಂಶಗಳನ್ನು ಹಾಗೂ "ವೀರಶೈವ" ಪದವನ್ನು ; ಕನ್ನಡದಲ್ಲಿ ಬಸವ-ಚನ್ನಬಸವ, ಮುಂತಾದ ಶಿವಶರಣರ ವಚನಗಳಲ್ಲಿ, ಪುರಾಣಗಳಲ್ಲಿ, ಇನ್ನಿತರ ಭಾಷೆಗಳ ಸಾಹಿತ್ಯದಲ್ಲಿ ಪ್ರಕ್ಷಿಪ್ತಗೊಳಿಸಿ ಸೇರಿಸಿದರು. ಪ್ರಾಚೀನ ವೀರಶೈವ ಪರವಾಗಿ ವಾದಿಸುವವರು ಈ ಕೃತ್ರಿಮ ಹಾಗೂ ಪ್ರಕ್ಷಿಪ್ತ ವಚನಗಳನ್ನೇ ಹಾಗೂ ಅಂಶಗಳನ್ನೇ ಎತ್ತಿತೋರಿಸಿ, ತಾವು ಹಿಡಿದ ಮೊಲಕ್ಕೆ ಎರಡು ಕೋಡುಗಳೆಂಬಂತೆ ವಾದಿಸುತ್ತಿದ್ದಾರೆ. ಇವರ ವಾದ ನಿಜವಲ್ಲವೆಂದು ಈ ಕೆಳಗಿನ ಅಂಶಗಳಿಂದಲೂ ಸಿದ್ಧವಾಗುತ್ತಿದೆ,

1. ಸಿದ್ಧಾಂತ ಶಿಖಾಮಣಿಯಲ್ಲಿ 'ವೀರಶೈವವನ್ನು' ಶೈವದ ಶಾಖೆಯೆಂದು ವ್ಯಾಖ್ಯಾನಿಸಲಾಗಿದೆ. ಹೀಗಾದಾಗ ವೀರಶೈವವು ಕೆಲವರು ಭಾವಿಸಿದಂತೆ, ಅನಾದಿ ಧರ್ಮವಾಗುವುದಿಲ್ಲ, ಶೈವ ಧರ್ಮದ ಶಾಖೆಯಾಗುವುದು. ಶೈವ ಧರ್ಮವು ಯಜ್ಞಮೂಲವಾದ್ದರಿಂದ ಬಲಿ ಹಾಗೂ ಹಿಂಸೆ ಇದೆ. ಈ ಧರ್ಮದಲ್ಲಿ ವರ್ಣಾಶ್ರಮ, ಜಾತಿ ಭೇಧ, ಸ್ಥಾವರಪೂಜೆ, ಅನೇಕ ದೈವೋಪಾಸನೆ, ಧಾರ್ಮಿಕ ಶೋಷಣೆ, ಮುಂತಾದವುಗಳು ಒಳಗೊಂಡಿರುವುದರಿಂದ, ಶೈವದ ಶಾಖೆಯಾಗಿ, ವೀರಶೈವವೆಂದು ಒಪ್ಪುವುದು ಯೋಗ್ಯವಲ್ಲ.
2. ಇನ್ನು ಕೆಲವರು 'ವೀರಶೈವವು' ಪರಶಿವನಿಂದ ಸ್ಥಾಪಿತವಾಗಿದೆಯೆಂದು ವಾದಿಸುತ್ತಾರೆ. ಪರಶಿವನಿಂದ ನೇರವಾಗಿ ಅವನ ಹೆಸರಿನಲ್ಲಿಯೇ, ಈ ಭೂಮಿಯ ಮೇಲೆ ಐತಿಹಾಸಿಕವಾಗಿ ಈ ಧರ್ಮವು ಸ್ಥಾಪಿತವಾಗಿದ್ದರೆ ; ಶಿವನಿಂದ ಶೈವ ಧರ್ಮವಾದಂತೆ, ವಿಷ್ಣುವಿನಿಂದ ವೈಷ್ಣವ ಧರ್ಮವಾದಂತೆ, ಜಿನನಿಂದ-ಜೈನ ಧರ್ಮವಾದಂತೆ, ಬುದ್ಧನಿಂದ-ಬೌದ್ಧಧರ್ಮವಾದಂತೆ, ಪರಶಿವನಿಂದ "ಪಾರಶೈವ" ಎಂಬ ಹೆಸರು ಈ ಧರ್ಮಕ್ಕೆ ಪ್ರಾಪ್ತವಾಗುತ್ತಿತ್ತು. ಭಾರತೀಯ ಸಾಹಿತ್ಯದಲ್ಲಿ "ಪಾರಶೈವ" ಎಂಬ ಹೆಸರೇ ಇಲ್ಲ. ಹೀಗಾಗಿ ವೀರಶೈವವು ಪ್ರಾಚೀನವೂ ಅಲ್ಲ ಹಾಗೂ ತಾತ್ವಿಕವೂ ಅಲ್ಲ. ಆದ್ದರಿಂದ ಈ ಪದವನ್ನು ಅಧೀಕೃತವೆಂದು ಒಪ್ಪಲಿಕ್ಕಾಗುವುದಿಲ್ಲ,
3. ಜಗತ್ತಿನ ಎಲ್ಲ ಧರ್ಮ ಹಾಗೂ ಸಾಹಿತ್ಯಗಳಲ್ಲಿ ಕೃತ್ರಿಮ ಹಾಗೂ ಪ್ರಕ್ಷಿಪ್ತ ಪರಂಪರೆಯಿರುವಂತೆ, ಈ ಲಿಂಗಾಯತ ಧರ್ಮದಲ್ಲಿಯೂ ಪುರೋಹಿತಶಾಹಿಗಳಿಂದ ಈ ಕೃತ್ರಿಮ ಪರಂಪರೆ ಜರುಗಿದೆ, ಆದ್ದರಿಂದ ನಾವು ಬಸವಪೂರ್ವಯುಗದ ವೀರಶೈವವನ್ನು ಒಪ್ಪುವುದಿಲ್ಲ.
4. ಬ್ರಿಟಿಷ ಸರಕಾರ, ಮುಂಬಯಿ, ಮದ್ರಾಸ್, ಮೈಸೂರು, ಕರ್ನಾಟಕ ಸರಕಾರಗಳ ದಾಖಲೆಗಳಲ್ಲಿ 'ಲಿಂಗಾಯತ' ಪದವೇ ಹೆಚ್ಚಾಗಿ ಬಳಸಲ್ಪಟ್ಟಿವೆ.
5. ಲಿಂಗಾಯತ ಧರ್ಮಕ್ಕೆ ಸಾಕಾರವಾಗಿ ಇಷ್ಟಲಿಂಗವೇ ಮೂಲವಾಗಿದೆ, ಪರಶಿವನು-ನಿರಾಕಾರದಲ್ಲೆ ಮಹಾಲಿಂಗವಾಗಿ, ಭಾವಲಿಂಗವಾಗಿ, ಪ್ರಾಣಲಿಂಗವಾಗಿ ಹಾಗೂ ಸಾಕಾರದಲ್ಲಿ ಇಷ್ಟಲಿಂಗವಾಗಿ ವಿಕಾಸಗೊಂಡಿದ್ದಾನೆ. 12 ನೆಯ ಶತಮಾನದಲ್ಲಿ ಶ್ರೀ 'ಬಸವಣ್ಣನವರು ಪರಶಿವನನ್ನು ಮೊಟ್ಟ ಮೊದಲು ಇಷ್ಟಲಿಂಗ ರೂಪದಲ್ಲಿ ಸಾಕಾರಗೊಳಿಸಿ ಹೊರಗೆ ತಂದಿದ್ದಾರೆ. ಆದ್ದರಿಂದ ಬಸವಣ್ಣನವರೇ ಪ್ರಪ್ರಥಮ ಇಷ್ಟಲಿಂಗ ಜನಕರು. ಇಂತಹ ಲಿಂಗವನ್ನು ಧರಿಸಿದವನೇ (ಆಯತಗೊಂಡವನೇ) ಲಿಂಗಾಯತನು. ಆದ್ದರಿಂದ 'ಲಿಂಗಾಯತ' ಎಂಬುದು ಈ ಧರ್ಮಕ್ಕೆ ತಾತ್ವಿಕವಾದ ಹಾಗೂ ಯೋಗ್ಯವಾದ ಹೆಸರು.

6. ಲಿಂಗಾಯತರಲ್ಲಿ ನೂರಕ್ಕೆ ತೊಂಭತ್ತರಷ್ಟು ಜನರಿಗೆ ಲಿಂಗಾಯತ ಶಬ್ದವೇ ಪರಿಚಯವಿದೆ. ವೀರಶೈವ ಶಬ್ದದ ಪರಿಚಯವೇ ಇಲ್ಲ; ಆದ್ದರಿಂದ ಈ ಹೆಸರು ಹೆಚ್ಚು ಸೂಕ್ತವಾದುದು.

7. ಹಾನಗಲ್ ಶ್ರೀಗಳು ಒಂದು ಕಡೆ ವೀರಶೈವ ಲಿಂಗಾಯತ ಪರ್ಯಾಯವೆನ್ನು-ತ್ತಾರೆ; ಇನ್ನೊಂದು ಕಡೆ ಲಿಂಗಾಯತ ಸಾಧುವಲ್ಲವೆನ್ನುತ್ತಾರೆ; ಇದು ದ್ವಂದ್ವ ವಿಚಾರವನ್ನು ವ್ಯಕ್ತಪಡಿಸುತ್ತದೆ.

ಬಸವ ಪೂರ್ವ ಯುಗದ "ವೀರಶೈವ" ವಾದವನ್ನು ನನಗೆ ಚರ್ಚೆಯ ಮೂಲಕ ಮನವರಿಕೆ ಮಾಡಿಕೊಡಲು; ಮೂರುಸಾವಿರಮಠದ ಶ್ರೀಗಳನ್ನು, ಮುಂಡರಗಿ ಶ್ರೀಗಳನ್ನು ಹಾಗೂ ಅನೇಕ ವಿದ್ವಾಂಸರನ್ನು, ವೈಯಕ್ತಿಕವಾಗಿ, ಬಹಿರಂಗ ವೇದಿಕೆಯ ಮೇಲೆ ಹಾಗೂ ಬರಹದ ಮೂಲಕ ಅನೇಕ ಬಾರಿ ವಿನಂತಿಸಿಕೊಂಡಿದ್ದೇನೆ. ಆದರೆ ಇವರು ಚಾಣಾಕ್ಷತನದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಈಗಲಾದರೂ ಈ ವಾದದವರು ಹಾಗೂ ಶ್ರೀ ಮಾತಾಜಿಗೆ ಪ್ರತಿಕ್ರಿಯಿಸಿದವರು ನನಗೆ ಚರ್ಚೆಯ ಮೂಲಕ ತಮ್ಮ ವಾದವನ್ನು ಮನವರಿಕೆ ಮಾಡಿಕೊಡಬೇಕಾಗಿ ವಿನಂತಿ. ಹಾಗೆ ಚರ್ಚೆಗೆ ಬಂದರೆ ನನಗೆ ಮನವರಿಕೆಯಾದ ಬಸವ ಪೂರ್ವ ಯುಗದ ಕೃತ್ರಿಮ ವೀರಶೈವ ಪರಂಪರೆಗೆ ಆಧಾರ-ವಾದ ಎಲ್ಲ ದಾಖಲೆಗಳನ್ನು ಪ್ರಸ್ತಾಪಿಸುತ್ತೇನೆ. ಇವರು ಚರ್ಚೆಗೆ ಬರದೇ ಹೋದರೆ ಇವರ ವಾದವನ್ನು ಒಪ್ಪುವುದಿಲ್ಲವೆಂಬುದನ್ನು ಬಹಿರಂಗವಾಗಿ ದಾಖಲಿಸುತ್ತಿದ್ದೇನೆ. ಇದನ್ನು ನಾಡಿನ ಜನತೆ ಅರಿಯಬೇಕಾಗಿ ಭಿನ್ನಹ,

ರಾಣಿಬೆನ್ನೂರ
ದಿ. 7-2-1996

ಲೇಖಕರು :
ಪ್ರೊ. ವಿ. ವೀ. ಸಂಗಮದ
ಆದಿಶಕ್ತಿ ಕಾಲನಿ, ರಾಣಿಬೆನ್ನೂರ-581115

ವೇದ, ಶಾಸ್ತ್ರ, ಆಗಮಂಗಳನೋದಿದವರು ಹಿರಿಯರೆ ?
ಕವಿ, ಗಮಕಿ, ವಾದಿ ವಾಗ್ಮಿಗಳು ಹಿರಿಯರೇ ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ ?
ಹಿರಿಯತನವಾವುದೆಂದಡೆ ; ಗುಣ ಜ್ಞಾನ ಆಚಾರ ಧರ್ಮ,
ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯೆ ಹಿರಿಯತನ

—ವಿಶ್ವಗುರು ಬಸವಣ್ಣನವರು

ಪೀಠಾರೋಹಣ-ಚಾರಿತ್ರಿಕ ಘಟನೆ

-ವಿಜಯಾನಂದ

[ಪೀಠಾರೋಹಣದ ಬಳಿಕ ನುಡಿಕಾಣಿಕೆಯ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಡಾ|| ಮ್ಯಾಗಿ ಬರ್ಜಿತ್ ಹೆಲ್ಲರ್ ಅವರ ಭಾಷಣದ ಅನುವಾದ.]

ಈ ಹಿಂದೆ ಒಮ್ಮೆ ಡಾ|| ಮ್ಯಾಗಿ ಬರ್ಜಿತ್ ಹೆಲ್ಲರ್ ಅವರು ಭಾರತೀಯ ಧರ್ಮ ಸಂಸ್ಕೃತಿಗಳನ್ನು ಅಧ್ಯಯನ ಮಾಡುತ್ತ ಬಂದು, ಪೂಜ್ಯ ಶ್ರೀಜಗದ್ಗುರು ಮಾತೆ ಮಹಾದೇವಿಯವರನ್ನು ಆಕಸ್ಮಿಕವಾಗಿ ಭೇಟಿಯಾದರು. ಆಗ ಪೂಜ್ಯ ಮಾತಾಜಿಯವರು ಬಸವ ಧರ್ಮದ ವಿಶೇಷ ಪರಿಚಯ ಮಾಡಿಕೊಟ್ಟರಲ್ಲದೆ, ಈಗಾಗಲೇ ಭಾರತೀಯ ಇನ್ನಿತರ ಧರ್ಮಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದಿದೆ. ಲಿಂಗಾಯತ ಧರ್ಮ ಜಾಗತಿಕ ಧರ್ಮಗಳ ಸಾಲಿನಲ್ಲಿ ವಿಶೇಷವಾಗಿ ಕಂಗೊಳಿಸಬಹುದಾದ ಸಾಮರ್ಥ್ಯ ಹೊಂದಿದ್ದರೂ ಅದರ ಬಗ್ಗೆ ವಿಶೇಷ ಅಧ್ಯಯನ ನಡೆದಿಲ್ಲ. ಈ ಬಗ್ಗೆ ನೀವೂ ಅಧ್ಯಯನ ಮಾಡಿರಿ ಎಂದು ಸೂಚಿಸಿದ್ದರು. ನಂತರ ಡಾ|| ಮ್ಯಾಗಿ ಅವರು ಆಸಕ್ತರಾಗಿ ಅಧ್ಯಯನ ಮಾಡತೊಡಗಿದ್ದಾರಲ್ಲದೆ ಸ್ವಯಂ ಪ್ರೇರಣೆಯಿಂದ ಪೀಠಾರೋಹಣ ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಗಮಿಸಿದರು.

ಅಪಾರ ಅಧ್ಯಯನ ಶೀಲರು, ಕುಶಾಗ್ರ ಮತಿಯೂ, ಚಿಂತನಶೀಲರೂ ಆದ ಡಾ|| ಮ್ಯಾಗಿ ಅವರ ಸಹನೆ, ಏಕಾಗ್ರತೆ ಗಮನಾರ್ಹವಾಗಿವೆ. ಕನ್ನಡ ಬರದೆ ಇದ್ದರೂ ಪೂಜ್ಯ ಮಾತಾಜಿ ಹಿಂದಿನ ಸಲ ಬಂದಾಗ ಕೊಟ್ಟ ಕೆಲವು ಪುಸ್ತಕಗಳನ್ನು ಓದಿ, ಪ್ರಕ್ರಿಯಾತ್ಮಕ ಪದಗಳನ್ನು ಅರ್ಥಮಾಡಿಕೊಂಡಿದ್ದರಿಂದ ತುಂಬಾ ಏಕಾಗ್ರತೆಯಿಂದ ಎಲ್ಲರ ಉಪನ್ಯಾಸಗಳನ್ನೂ ಆಲಿಸುತ್ತಿದ್ದರು. ಕನ್ನಡವನ್ನೇ ಮಾತೃಭಾಷೆಯಾಗಿ ಉಳ್ಳ ಕೆಲವರು ವೇದಿಕೆಯ ಮೇಲೆ ಕುಳಿತು ಇತರರ ಉಪನ್ಯಾಸ ಆಲಿಸದೆ ಅಕ್ಕಪಕ್ಕ ಇದ್ದವರ ಜೊತೆ ಒಂದೇ ಸಮ ಮಾತನಾಡುತ್ತಿದ್ದರೆ [ಈ ವರ್ತನೆ ಬಹಳ ಜನ ಶ್ರೋತೃಗಳು, ಸಭಿಕರಿಗೆ ಬೇಸರ ತರಿಸಿದೆ ಎಂಬ ಬಗ್ಗೆ ಜನರಿಂದ ಸಾಕಷ್ಟು ಪತ್ರಗಳು ಬಂದಿವೆ. ಶರಣ ಮೇಳದ ಸಭೆ ಭಾಷಣಕಾರರ ಮಾತುಗಳನ್ನು ಲಕ್ಷಗೊಟ್ಟು ಆಲಿಸುವುದರಲ್ಲಿ ಕೀರ್ತಿಶಾಲಿಯಾಗಿದೆ. ಶ್ರೋತೃಗಳ ಆ ಆಸಕ್ತಿ, ತಾಳ್ಮೆ ನೋಡಿ ಮಾತನಾಡುವವರು ಸ್ಫೂರ್ತಿ ಪಡೆಯುತ್ತಾರೆ] ಡಾ|| ಮ್ಯಾಗಿ ಹೆಲ್ಲರ್ ಸಹನೆ ಏಕಾಗ್ರತೆಯಿಂದ ಎಲ್ಲರ ಭಾಷಣ ಆಲಿಸುತ್ತಿದ್ದರು.

ದಿ. 16.1.96 ರಂದು ಪೂಜ್ಯ ಮಾತಾಜಿಯವರನ್ನು ಬಿಡುವು ಮಾಡಿ ಕೊಳ್ಳಲು ವಿನಂತಿಸಿಕೊಂಡು ಅನೇಕ ಪ್ರಶ್ನೆ ಕೇಳಿ ಉತ್ತರ ಪಡೆದರು. ಆಗ ನಮ್ಮನ್ನೂ ಈ ಸಂವಾದ ಗೋಷ್ಠಿಗೆ ಪೂಜ್ಯ ಮಾತಾಜಿ ಕರೆಸಿಕೊಂಡರು. ನಮಗೆ ಕರ್ಣರಸಾಯನ ಸಿಕ್ಕಂತೆ ಆಯಿತು. ಅವರು ಗ್ರಹಿಸಿದ್ದ ವಿಷಯಗಳ ವೈವಿಧ್ಯತೆ, ವ್ಯಾಪ್ತಿ ಕಂಡು ನಾವೆಲ್ಲ ಬೆರಗಾದೆವು. "ಹಿಂದಿನ ಬಾರಿ ಬಂದಾಗ ನೀವು ಕೆಲವು ಪುಸ್ತಕ ಕೊಟ್ಟಿರಿ. ನಾನು ಈ ಧರ್ಮಕ್ಕೆ ಸಂಬಂಧಿಸಿದ ಕೆಲವು ಸಾಹಿತ್ಯ ಸಂಗ್ರಹಿಸಿಕೊಂಡು ಹೋದೆ. ಇದರಿಂದ ಇಷ್ಟಲಿಂಗ, ಜಂಗಮ, ಮುಂತಾದ ಪದಗಳ ಪರಿಚಯವಾಯಿತು. ಆ ಪರಿಚಯದಿಂದ ಈ ಸಭೆಯಲ್ಲಿ ಭಾಗವಹಿಸಿ ಎಷ್ಟೋ ವಿಷಯ

ಗ್ರಹಿಸಲು ಸಾಧ್ಯವಾಯಿತು.'' ಎಂದರು. ನಮ್ಮವರು ಮಾತನಾಡಿದ ಉಪನ್ಯಾಸಗಳಲ್ಲಿ ಬರುವ ಇಂಥ ಬಿಡಿಬಿಡಿಯಾದ ಪದಗಳನ್ನು ಗ್ರಹಿಸಿಯೇ ಅವರು ಕೆಲವೊಂದು ತತ್ತ್ವಗಳನ್ನು ಗ್ರಹಿಸಿದ್ದರು. ಅವರು ಚಿತ್ತವಿಟ್ಟು ಆಲಿಸುವ ಕೆಲವು ಭಾವಚಿತ್ರಗಳು ಆಕೆ ಎಂತಹ ಚಿಂತನಶೀಲ, ಪ್ರೌಢಮಹಿಳೆ ಎಂಬುದನ್ನು ದೃಢಪಡಿಸುತ್ತವೆ. ಪಾಶ್ಚಿಮಾತ್ಯರ ಸ್ವಭಾವದ ಪರಿಚಯವನ್ನೂ ಮಾಡಿಕೊಡುತ್ತವೆಂದರೆ ಸುಳ್ಳಲ್ಲ. ಸಂಶೋಧಕ ಪ್ರಾಧ್ಯಾಪಕಿಯಾದ ಡಾ|| ಮ್ಯಾಗಿ ಬರ್ಜಿತ್ ಹೆಲ್ಲರ್ ಅಂಗಸೌಂದರ್ಯ, ಅಲಂಕಾರಿಕ ವೇಷ ಭೂಷಣ, ಕೃತಕ ಸೌಂದರ್ಯ ಸಾಧನ ಏನೊಂದೂ ಬಳಸದೆ ಅತ್ಯಂತ ಸರಳವಾಗಿದ್ದು, ಗಮನವನ್ನೆಲ್ಲ ಅಧ್ಯಯನ, ಚಿಂತನೆಯ ಕಡೆಗೆ ಕೊಡುತ್ತಿದ್ದುದು, ಬ್ಯೂಟಿ ಪಾರ್ಲರ್‌ಗಳಲ್ಲಿ ಸಮಯಹರಣ ಮಾಡುವ ಭಾರತೀಯ ನಾರಿಯರಿಗೆ ಬುದ್ಧಿ ಕಲಿಸುವಂತಿದೆ, ಮಾತ್ರವಲ್ಲ ಭಾರತೀಯರಿಗೆ ಪಾಶ್ಚಿಮಾತ್ಯರ ಬಗ್ಗೆ, ಅವರ ಮಹಿಳೆಯರ ಬಗ್ಗೆ ಇರುವ ತಪ್ಪು ಕಲ್ಪನೆಯನ್ನೂ ದೂರಮಾಡುವಂತಿದೆ. ಎಲ್ಲ ಪಾಶ್ಚಿಮಾತ್ಯ ಮಹಿಳೆಯರೂ ಬಣ್ಣದ ಚಿಟ್ಟೆಗಳಲ್ಲ, ಎಲ್ಲ ಭಾರತೀಯ ನಾರಿಯರೂ ಗೌರಮ್ಮಗಳಲ್ಲ ಎಂಬ ಭಾವ ಬೆಳೆಸುತ್ತದೆ ಮತ್ತು ಶ್ರೀಮತಿ ಹೆಲ್ಲರ್ ಒಂದು ವರ್ಷ (ದಿ. 14-1-96) ತುಂಬಿದ ಕಂದನನ್ನು ಗಂಡನ ಆರೈಕೆಗೆ ಒಪ್ಪಿಸಿ, ಆಸ್ಟ್ರಿಯಾದಿಂದ ಈ ವಿನೂತನ ಪೀಠಾರೋಹಣಕ್ಕೆ ಆಗಮಿಸಿದ ವಿಷಯ ತಿಳಿದಾಗ ಅವರ ಬಗ್ಗೆ ಗೌರವ ಭಾವ ಎಲ್ಲರಲ್ಲೂ ಮೂಡಿತು. ತಮ್ಮ ಸ್ವಂತ ಖರ್ಚಿನಿಂದ ಅವರು ಈ ಕಾರ್ಯಕ್ರಮಕ್ಕೆ ಬಂದುದಲ್ಲದೆ ಗೌರವ ಧನ ಕೊಡಹೋದರೂ ತೆಗೆದುಕೊಳ್ಳದೆ, ಸ್ವಯಂ ಇಚ್ಛೆಯಿಂದ ನಾನು ಬಂದಿದ್ದೇನೆ'' ಎಂದು ಹೇಳಿ, ಈ ಹಣವನ್ನು ನನ್ನ ದೇಣಿಗೆ ಎಂದು ತೆಗೆದುಕೊಳ್ಳಿ, ಎಂದರು. ಅವರಿಗೆ ಕೆಲವು ಪುಸ್ತಕ ಬೇಕಾಗಿತ್ತು. ಅವನ್ನು ನಾವೆಲ್ಲ ಕಳಿಸಿಕೊಡುತ್ತೇವೆ, ನೀವು ಹೋಗಿರಿ, ಎಂದು ಪೂಜ್ಯ ಮಾತಾಜಿ ಹೇಳಿ ಹುಬ್ಬಳ್ಳಿಯ ಶರಣ ಲಿಂಗರಾಜ ಇಂಗಳಳ್ಳಿಯವರಿಗೆ ಜವಾಬ್ದಾರಿ ವಹಿಸಿದರು. ಕೈಯಲ್ಲಿ ಕೊಡಹೋದರೆ ತೆಗೆದುಕೊಳ್ಳಲಿಕ್ಕಿಲ್ಲ ಎಂದು, ಒಂದು ಕವರಿನಲ್ಲಿ ಹಣ ಇಟ್ಟು, ಗೋವಾಕ್ಕೆ ವಿಮಾನ ಹತ್ತಿಸಲು ಹೋದವರಿಗೆ ಕಾರಿನಲ್ಲಿ ಒಂದು ಕವರ್ ಇದೆ. ಮರೆಯದೆ ತೆಗೆದುಕೊಳ್ಳಿ ಎಂದು ಹೇಳಿ ಹೋದರಂತೆ. ಶರಣ ಲಿಂಗರಾಜ ಅವರು ಏನಾದರೂ ವಿಳಾಸ ಇಟ್ಟಿರಬಹುದು ಎಂದು ಭಾವಿಸಿದರಂತೆ, ಅದರಲ್ಲಿ ಕಳಿಸಬೇಕಾದ ಪುಸ್ತಕಗಳ ಹಣ, ಅಂಚೆ ವೆಚ್ಚ ಇತ್ತಂತೆ. ಇಂಥ ಕೆಲವು ಸದ್ಗುಣ, ಕಾಯಕ ನಿಷ್ಠೆ, ಏಕಾಗ್ರತೆ, ದೃಢತೆ ಇರುವುದರಿಂದಲೇ ಪಾಶ್ಚಿಮಾತ್ಯರು ಎಲ್ಲ ಕ್ಷೇತ್ರಗಳಲ್ಲೂ ದಾಪುಗಾಲಿಡುತ್ತ ಜಾಗತಿಕವಾಗಿ ಮುಂದುವರಿಯುತ್ತಿದ್ದಾರೆ ಎನಿಸುತ್ತಿದೆ. ಇಂಥ ಡಾ|| ಮ್ಯಾಗಿ ಬರ್ಜಿತ್ ಹೆಲ್ಲರ್ ಅವರ ಉದ್ಘಾಟನಾ ಭಾಷಣದ ಸಾರಾಂಶದ ಅನುವಾದ ಇಲ್ಲಿದೆ. "ಇವತ್ತಿನ ದಿನ ನಿಮಗೆಲ್ಲ ಅತ್ಯಂತ ಮಹತ್ವದ ಸ್ಮರಣಾರ್ಹ ದಿನವಾಗಿದೆ. ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ, ಲಿಂಗಾಯತ ಮಹಿಳೆಯರು, ಧರ್ಮ-ಸಮಾಜಗಳಿಗೆ ಮಾತ್ರವಲ್ಲ, ಸಮಸ್ತ ಹಿಂದೂ ಮಹಿಳೆಯರಿಗೆ, ಮಾತ್ರವಲ್ಲ ಜಗತ್ತಿನ ಎಲ್ಲ ಧರ್ಮಗಳ ಮಹಿಳಾ ಕೋಟಿಗೆ ಇದು ಮಹತ್ವಪೂರ್ಣ ದಿನವಾಗಿದೆ. ಬಸವಣ್ಣನವರ ಸಮಾನತೆಯ ದಿವ್ಯ ಕನಸನ್ನು, ಅಂದರೆ ಪುರುಷ-ಮಹಿಳೆಯರಿಗೆ ಸಮಾನ ಹಕ್ಕು ನೀಡುವ ಅವರ ಆಶಯವನ್ನು ಪೂರ್ತಿ ಮಾಡಲು ಎಂಟುನೂರು ವರ್ಷ ತೆಗೆದುಕೊಂಡಿದೆ. ಪೂಜ್ಯ ಮಾತೆ ಮಹಾದೇವಿಯವರು ತಮ್ಮ ಕೃತಿ 'ಲಿಂಗಾಯತಿಸಮ್' ದಲ್ಲಿ ಬರೆದಿದ್ದಾರೆ. ಬಸವಣ್ಣನವರು ತುಳಿತಕ್ಕೊಳಗಾದ ದಲಿತರ ಉದ್ಧಾರಕ (ರಕ್ಷಕ)ರು ಮತ್ತು ಮಹಿಳಾ ಕುಲ ವಿಮೋಚಕರು'.

ಇಂದು (ಪೀಠಾರೋಹಣದಿಂದ) ಮಹಿಳೆಯ ಜೀವನವು ಸಾಧನೆಯ ಉತ್ತುಂಗ ಶಿಖರಕ್ಕೆ ಏರಿದೆ ಎಂಬುದಕ್ಕೆ ಇಂದಿನ ಪ್ರಸಂಗವೇ ಸಾಕ್ಷಿ. (ಮಾತೆ ಮಹಾದೇವಿಯವರು) ತಮ್ಮ ಆಧ್ಯಾತ್ಮಿಕ ಮಾದರಿಯಾದ ಅಕ್ಕಮಹಾದೇವಿಯಂತೆಯೇ ಒಂದು ವಿಶಿಷ್ಟ ಪಥವನ್ನು, ಅತ್ಯಂತ ಕಷ್ಟಮಯ ಸಾಮಾಜಿಕ ಸನ್ನಿವೇಶಗಳ ಮಧ್ಯೆಯೇ ಕಂಡುಕೊಂಡಿದ್ದಾರೆ. ಆದರೆ, ಮಾತೆ ಮಹಾದೇವಿಯವರು ಕೇವಲ ಓರ್ವ ಸನ್ಯಾಸಿನಿ ಮಾತ್ರವಲ್ಲ, ಆಧ್ಯಾತ್ಮಿಕವಾಗಿ ಅತ್ಯುನ್ನತ ಪ್ರಗತಿ ಸಾಧಿಸಿದ ಮಹಿಳೆ.

ಮಹಾಜಗದ್ಗುರುವಾಗಿ ಅವರು ಈಗ ಬಹುದೊಡ್ಡ ಜವಾಬ್ದಾರಿಯನ್ನು ಬಸವಧರ್ಮದ ಕ್ಷೇತ್ರದಲ್ಲಿ ಹೊಂದಿರುವುದು ಮಾತ್ರವಲ್ಲ, ಸಾಮಾಜಿಕವಾಗಿಯೂ ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗಿದೆ. ವೀರಶೈವ ಮಠಾಧೀಶರೊಬ್ಬರು (ಡಾ|| ಮ್ಯಾಗ್ಗಿಯವರು ಅವರ ಹೆಸರನ್ನು ಸ್ಪಷ್ಟವಾಗಿ ಕಾಣಿಸಿದ್ದಾರೆ. ನಾವೇ ಕೈಬಿಟ್ಟಿದ್ದೇವೆ. -ವಿ) ನಾನು ಸಂದರ್ಶಿಸಿದಾಗ ಹೇಳಿದರು, ನಮ್ಮ ಮಠಕ್ಕೆ ಮಹಿಳೆಯು ಉತ್ತರಾಧಿಕಾರಿಯಾಗಲು ಸಾಧ್ಯವಿಲ್ಲ. ಏಕೆಂದರೆ ಅದು ಹಲವಾರು ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. '' ಎಂದು.

ಇದೀಗ ಓರ್ವ ಮಹಿಳೆಯು ಮಹಾಜಗದ್ಗುರುವು ಆಗುತ್ತಲಿದ್ದಾಗ ಎಂಬುದು ಸಾಮಾಜಿಕ ವಲಯದೊಳಗೆ ಆಧ್ಯಾತ್ಮಿಕ ಸಮಾನತೆಯನ್ನು ಕಸಿಮಾಡಿದಂತೆ ಆಯಿತು. ಬಸವಣ್ಣನವರಿಂದ (ಅಲ್ಲಿಯವರೆಗೆ ಬೇರೆಬೇರೆಯೇ ಇದ್ದ) ಆಧ್ಯಾತ್ಮಿಕತೆ ಮತ್ತು ಸಾಮಾಜಿಕ ಜೀವನ ಒಟ್ಟುಗೂಡಿದಂತೆ ಆಯಿತು ಮತ್ತು ಪರಸ್ಪರ ಅವಲಂಬಿತವಾದಂತೆ ಆಯಿತು.

ಮರ್ತಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲ ಸಂಗಮದೇವಯ್ಯಾ।

ಮಾತೆ ಮಹಾದೇವಿಯವರ ಈ ಪೀಠಾರೋಹಣವು ಧರ್ಮಗಳ ಇತಿಹಾಸಲ್ಲೇ ಮಹತ್ವಪೂರ್ಣ ಘಟನೆ ಮತ್ತು ವಿಶ್ವ ಸಹೋದರತ್ವದ ಮಾತ್ರವಲ್ಲ ವಿಶ್ವ ಸಹೋದರಿತ್ವದ ಕುರುಹು.

Dr. Maggi Berjit Heller's Speech.

This is a great day for all of you, but especially for women, for Lingayat women, for Hindu women and further more for all religious women in the world. !t has taken more than 800 years to turn Basava's dream ɔf equality between men and women.

In her book about Lingayatism Mate Mahadevi wrote that Basava is the saviour of the down trrodden and emancipalor of women. Her

life which has reached a culmination point, today is a proof to this. Like her spiritual model Akkamahadevi, she has found her own way amidst of difficult social condition. But Mate Mahadevi is not only a sanyasini also is a highly developed spiritual woman.

As Mahajagadguru she inherits the highest religious function of Basavaism as well as an important social role. Swami.........said in an interview that a woman cannot be his successor because that would involve a lot of sociological problems. A woman becoming Mahajagadguru means the transplantation of spiritual equality into the equality of social roles. For Basava spirituality and social life belong together and depend on each other.

This world is but the maker's mint
Those who succeed here also succeed there
And those who do not succeed here
do not succeed there also.

This installation of Mate Mahadevi is a great event in the history of religions and a symbol not only for universal brother hood but for universal sisterhood.

ಧಾರವಾಡದಲ್ಲಿ ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ 51ನೇ ವರ್ಧಂತಿ—ಅಭಿವಂದನೆ

ದಿನಾಂಕ 13-3-1996ರ ಬುಧವಾರದಂದು ಪ್ರಪ್ರಥಮ ಮಹಿಳಾ ಮಹಾಜಗದ್ಗುರು, ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ 51ನೇ ವರ್ಧಂತಿ ಕಾರ್ಯಕ್ರಮವು ಧಾರವಾಡದ ಜಗನ್ಮಾತ ಅಕ್ಕಮಹಾದೇವಿ ಆಶ್ರಮ (ಉಳವಿ ರಸ್ತೆ, ರೈಲ್ವೆ ಗೇಟ್ ಹತ್ತಿರ)ದಲ್ಲಿ ಬೆಳಿಗ್ಗೆ 9.30ಕ್ಕೆ ನಡೆಯಲಿದೆ. ಈ ಶುಭ ಸಂದರ್ಭದಲ್ಲಿ 'ಕಲ್ಯಾಣ ಕಿರಣ' ಪತ್ರಿಕೆಯ ಓದುಗರ ಪರವಾಗಿ ಅವರಿಗೆ ಹೆಚ್ಚಿನ ಆರೋಗ್ಯ-ಆಯುಷ್ಯವನ್ನು ಸೃಷ್ಟಿಕರ್ತ ಪರಮಾತ್ಮ, ಧರ್ಮಗುರು ಬಸವಣ್ಣನವರು ನೀಡಲಿ ಎಂದು ಪ್ರಾರ್ಥಿಸುವೆವು ಹಾಗೂ ಅವರ 51ನೇ ವರ್ಧಂತಿಗೆ ಹೃತ್ಪೂರ್ವಕ ಅಭಿವಂದನೆಗಳನ್ನು ಸಲ್ಲಿಸುವೆವು.

—ಸಂಪಾದಕರು.

[ಮುಂಡರಗಿ ಶ್ರೀಗಳು ಬರೆದ ವೀರಶೈವರ ಧರ್ಮ ಸಂವಿಧಾನ ಎಂಬ ಬರಹವು ಜನವರಿ 1996ರ ಪರಂಜ್ಯೋತಿ ಮಾಸಪತ್ರಿಕೆಯಲ್ಲಿ ಪ್ರಕಟಗೊಂಡಿದ್ದು ಅದನ್ನು ಯಥಾವತ್ತಾಗಿ ಮುದ್ರಿಸಲಾಗಿದೆ.]

ವೀರಶೈವರ ಧರ್ಮ ಸಂವಿಧಾನ

ಧರ್ಮದ ಉತ್ಪಾದಕ	:	ಪರಶಿವ (ಉಳಿದವರೆಲ್ಲ ಧರ್ಮೋದ್ಧಾರಕರು)
ಧರ್ಮಗುರು	:	ಮಾಂಸಪಿಂಡವನ್ನು ಮಂತ್ರಪಿಂಡವಾಗಿಸಿದ ದೀಕ್ಷಾಗುರು. ಪ್ರತ್ಯಕ್ಷವಾಗಿ ಪ್ರತಿವ್ಯಕ್ತಿಯನ್ನು ಉದ್ಧರಿಸುವವನೇ ಧರ್ಮಗುರು.
ಧರ್ಮದೇವರು	:	ತನ್ನ ಚೈತನ್ಯದ ಚುಳುಕಾದ ಇಷ್ಟಲಿಂಗ, ಇದು ಅರುಹಿನ ಕುರುಹು. ಇಷ್ಟಲಿಂಗವನ್ನು ಕರುಣಿಸಿದ ಧರ್ಮಗುರು ಮೊದಲನೇ ದೈವಗುರು. ಲಿಂಗ ಮೋಕ್ಷಮೂರ್ತಿ, ಮಹಾಜ್ಞಾನಿ ಜಂಗಮಲಿಂಗ ಮೂರನೇ ದೇವರು.
ಧರ್ಮಕ್ಷೇತ್ರ	:	ನಿಜದರಿವನ್ನು ಮೂಡಿಸುವ, ಗುರು ಲಿಂಗ ಜಂಗಮ ಲಿಂಗ ನೆಲಸಿದ ಪ್ರತಿಯೊಂದು ಊರಿನ ಮಠಗಳು.
ಧರ್ಮಧ್ವಜ	:	ಅಷ್ಟಾವರಣವೇ ಅಂಗ. ಪಂಚಾಚಾರಗಳೇ ಪ್ರಾಣ. ಷಟ್‌ಸ್ಥಲವೇ ಆತ್ಮವಾಗಿರುವ ಪಂಚಕೋನವುಳ್ಳ ಷಟ್‌ಸ್ಥಲ ಧ್ವಜ.
ಧರ್ಮಗ್ರಂಥ	:	ವೀರಶೈವ ತತ್ವವನ್ನು ಪ್ರತಿಪಾದಿಸಿದ ಶಿವಾಗಮಗಳು. ಜನಭಾಷೆಯಲ್ಲಿ ವೀರಶೈವವನ್ನು ತಿಳಿಸಿದ ಬಸವಾದಿ ಪ್ರಮಥರು ಬೋಧಿಸಿದ ವಚನಸಾಹಿತ್ಯ.
ಧರ್ಮದಭಾಷೆ	:	ಕನ್ನಡ.
ಧರ್ಮದ ಧ್ಯೇಯ	:	ಸಕಲ ಜೀವಾತ್ಮರಿಗೆ ಲೇಸ ಬಯಸುವಿಕೆ.
ಧರ್ಮದ ಸಿದ್ಧಾಂತ	:	ಶಕ್ತಿ ವಿಶಿಷ್ಟಾದ್ವೈತ, (ಶಿವಾದ್ವೈತ, ದ್ವೈತಾದ್ವೈತ ಪರ್ಯಾಯಪದಗಳು)
ಧರ್ಮದ ಗುರಿ	:	ತತ್ವಸ್ವರೂಪವೇ ತಾನಾಗುವುದು. (ವೀರಶೈವರು ವ್ಯಕ್ತಿನಿಷ್ಠರಲ್ಲ)

—ಶ್ರೀ ಮನ್ನಿರಂಜನ ಜಗದ್ಗುರು ಅನ್ನದಾನ ಸ್ವಾಮಿಗಳು ಮುಂಡರಗಿ.
ಪರಂಜ್ಯೋತಿ ಮಾಸಪತ್ರಿಕೆ, ಜನವರಿ 1996

ಲಿಂಗಾಯತ ಧರ್ಮಸಾರ

೧. **ಧರ್ಮ ಸಂಸ್ಥಾಪಕರು** : ಹನ್ನೆರಡನೆಯ ಶತಮಾನದ ಮಾದರಸ-ಮಾದಲಾಂಬಿಕಾ ಸುತ ಸಮತಾವಾದಿ ಬಸವಣ್ಣನವರು. ಅವರೇ ಆದಿ ಪ್ರಮಥರು, ಪ್ರಥಮ ಗಣಾಧೀಶರು, ಮೋಕ್ಷದಾಯಕರು.

೨. **ಧರ್ಮಗುರು** : ಬಸವಣ್ಣನವರೇ ಧರ್ಮಗುರು. ದೀಕ್ಷೆಯನ್ನು ಮಾಡುವವರು ದೀಕ್ಷಾಗುರು, ಜ್ಞಾನವನ್ನು ನೀಡುವವರು ಶಿಕ್ಷಾಗುರು. ದೀಕ್ಷಾಗುರು, ಶಿಕ್ಷಾಗುರುಗಳು ಒಂದು ಧರ್ಮದಲ್ಲಿ ಅನೇಕರು ಇರಬಹುದು. ಧರ್ಮಗುರು ಮಾತ್ರ ಒಬ್ಬನೆ.

೩. **ಧರ್ಮಲಾಂಛನ** : ವಿಶ್ವಚೈತನ್ಯ ದೇವರ ಕುರುಹಾದ ಇಷ್ಟಲಿಂಗ, ಇದು ಗಣಲಾಂಛನವೂ ಆಹುದು. ತನ್ನನ್ನು ಧರಿಸಿದ ಎಲ್ಲರನ್ನೂ ಧಾರ್ಮಿಕ ಭ್ರಾತೃತ್ವಕ್ಕೆ ಕರೆತರುತ್ತದೆ.

೪. **ಧರ್ಮಕ್ಷೇತ್ರ** : ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯ, ನಿಮ್ಮ ಶರಣರಿದ್ದುದೇ, ಅವಿಮುಕ್ತ ಕ್ಷೇತ್ರವಯ್ಯ ಎಂಬ ವಚನ ವಾಕ್ಯದಂತೆ ಶರಣರು, ಶಿವಯೋಗಿಗಳು ನೆಲೆಸಿದ ಕ್ಷೇತ್ರಗಳು ಧರ್ಮದ ಕ್ಷೇತ್ರಗಳು, ಧರ್ಮಗುರುವು ಐಕ್ಯರಾದುದು ಧರ್ಮಕ್ಷೇತ್ರ.

೫. **ಧರ್ಮಧ್ವಜ** : ಷಟಸ್ಥಲ, ಷಡಕ್ಷರಿ ಮಂತ್ರ, ಷಡ್ಲಿಂಗ ಮುಂತಾದುವನ್ನು ಒಳಗೊಳ್ಳುವ ಷಟ್‌ಕೋನಗಳುಳ್ಳ ಬಸವ ಧ್ವಜ

೬. **ಧರ್ಮಗ್ರಂಥ** : ಸಮಾನತೆ ಸಾರುವ ವಚನ ಸಾಹಿತ್ಯ

೭. **ಧರ್ಮಭಾಷೆ** : ಕನ್ನಡ

೮. **ಧರ್ಮದ ಧ್ಯೇಯ** : [ಧ್ಯೇಯ-ಗುರಿ ಎರಡೂ ಸಮಾನಾರ್ಥಕ ಪದಗಳು] ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣರಾಜ್ಯ ನಿರ್ಮಾಣ

೯. **ಧರ್ಮದ ಸಿದ್ಧಾಂತ** : ಶೂನ್ಯ ಸಿದ್ಧಾಂತ

ಈ ಸೂತ್ರಗಳು ಸುಸಂಬದ್ಧವಾಗಿ ಹೆಣೆಯಲ್ಪಟ್ಟಿಲ್ಲವಾದರೂ ಮುಂಡರಗಿ ಸ್ವಾಮಿಗಳು ಬರೆದ ವಿವರಗಳೊಡನೆ ತೌಲನಿಕವಾಗಿ ಬರೆಯಬೇಕಾದುದರಿಂದ ಅದೇ ಕ್ರಮದಲ್ಲಿ ಪಟ್ಟಿ ಮಾಡಲಾಗಿದೆ.

-ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ, ಬಸವ ಧರ್ಮ ಪೀಠ
ಕೂಡಲ ಸಂಗಮ

ವೀರಶೈವ ಮತ್ತು ಲಿಂಗಾಯತ

ಅಂತೂ ಮೂಜಗಂ ಮತ್ತು ಮುಂಡರಗಿ ಶ್ರೀಗಳ ವಿಚಾರದ ಕೋಣೆಯಲ್ಲಿ ಸೇರಿಕೊಂಡು ಒಳಗೊಳಗೇ ಕಟಕಟ ಸದ್ದು ಮಾಡುತ್ತಿದ್ದ "ವೀರಶೈವದ ಇಲಿ" ಹೊರಬಿದ್ದಿತು. ಮುಂಡರಗಿ ಶ್ರೀಗಳ ವಿವರಣೆಗಿಂತಲೂ ಚೆನ್ನಾಗಿ ವೀರಶೈವದ ವಿವರಣೆ ನಾನು ಕೊಡಬಲ್ಲೆ. ಆದರೆ ನಾನಾಗಿಯೇ ಏಕೆ ಗುಟ್ಟು ಬಿಟ್ಟುಕೊಡಲಿ? ಅವರುಗಳ ಬಾಯಿಂದಲೇ (ಅಂದರೆ ಲೇಖನಿಯಿಂದಲೇ) ಹೊರಬರಲಿ ಎಂದು ನಾನು ಹೆಚ್ಚಿನ ವಿವರ ನೀಡಬಯಸುವುದಿಲ್ಲ!

ನಮ್ಮ ಕಣ್ಣೆದುರಿಗೆ ಇಬ್ಬರು ವ್ಯಕ್ತಿಗಳಿದ್ದಾರೆ. ಓರ್ವನು ಬಿಳಿಯ ಚರ್ಮದ ವ್ಯಕ್ತಿ, ಮತ್ತೋರ್ವ ದಟ್ಟ ಕಪ್ಪು ಬಣ್ಣದವನು. ಒಬ್ಬನ ಮೂಗು ಚೂಪಿದೆ. ಕಪ್ಪನೆಯವನದು ಮೊಂಡು ಮೂಗು. ಬಿಳಿಯನದು ಮೃದುವಾದ ನೀಳಕೂದಲು, ಕಪ್ಪನೆಯವನದು ಗುಂಗುರು ಗುಂಗುರಾದ ಮೊಂಡು ಕೂದಲು. ಇಬ್ಬರ ಭಿನ್ನಭಿನ್ನ ಲಕ್ಷಣ ನೋಡಿ ಒಬ್ಬನು ಯೂರೋಪಿನವ, ಇನ್ನೊಬ್ಬ ಆಫ್ರಿಕನ್ ನೀಗ್ರೋ ಎಂದು ಊಹಿಸುತ್ತೇವೆ. ಮುಂಡರಗಿ ಸ್ವಾಮಿಗಳು ಕೊಟ್ಟ ವೀರಶೈವದ ವಿವರಣೆ ನಾನು ಕೊಟ್ಟ ಲಿಂಗಾಯತ ಧರ್ಮದ ವಿವರಣೆ ಸಂಪೂರ್ಣ ಬೇರೆಬೇರೆಯೇ ಇರುವುದನ್ನು ಯಾರೂ ಗುರುತಿಸಬಹುದಾಗಿದೆ. ಈ ಲಕ್ಷಣಗಳು ಲಿಂಗಾಯತ ಧರ್ಮದವು ಅಲ್ಲದ್ದರಿಂದ ಮುಂಡರಗಿ ಶ್ರೀಗಳು ಪ್ರತಿಪಾದಿಸುವ ವೀರಶೈವದಿಂದ ಬಸವ ಪ್ರಣೀತ ಲಿಂಗಾಯತ ಧರ್ಮ ಬೇರೆಯೇ ಆಗಿದೆ ಎಂಬ ಸ್ಪಷ್ಟ ನಿರ್ಧಾರಕ್ಕೆ ಬರಲು ಅನುಕೂಲವಾಯಿತು. ಅದಕ್ಕಾಗಿ ಶ್ರೀಗಳಿಗೆ ಧನ್ಯವಾದ.

ಮುಂಡರಗಿ ಶ್ರೀಗಳ ಅತಾರ್ಕಿಕತೆ, ಅಸಂಬದ್ಧತೆ

೧. ಉತ್ಪಾದಕ ಎಂಬ ಪದ ಬಳಸಿದ್ದಾರೆ. ಉತ್ಪಾದನೆ ಎಂಬ ಪದ production ಎಂಬ ಅರ್ಥ ನೀಡುತ್ತದೆ. ಸ್ಥೂಲವಾದ ಭೌತಿಕ ವಸ್ತುಗಳಿಗೆ ಉತ್ಪಾದನೆ ಪದ ಅನ್ವಯವಾಗುವುದೇ ವಿನಾ ಧರ್ಮದಂತಹ ನಿರಾಕಾರ ಪರಿಕಲ್ಪನೆಗಲ್ಲ. ಧರ್ಮದ ಉತ್ಪಾದನೆ ಎಂಬ ಪ್ರಯೋಗವು ಅಸಂಬದ್ಧ. ಧರ್ಮವು ಸಂಸ್ಥಾಪಿಸಲ್ಪಡುವುದೇ ವಿನಾ ಉತ್ಪಾದಿಸಲ್ಪಡುವುದಿಲ್ಲ.

೨. ಪರಶಿವ ಎಂದರೆ ಆತ್ಯಂತಿಕ ಶಕ್ತಿಯಾದ ಪರಮಾತ್ಮ. ಅಂಥ ಪರಶಿವನಿಗೆ ಅವಯವಗಳಿಲ್ಲ. ಅವನು ಯಾವುದೇ ಬಾಯಿ ಹೊಂದಿ ಹೇಳಲಾರ, ಕೈಯಿಂದ ಬರೆಯಲಾರ. ಪರಮಾತ್ಮನು ತನ್ನ ಅನುಗ್ರಹವನ್ನು ಯಾರ ಮೇಲಾದರೂ ಅವತೀರ್ಣಗೊಳಿಸಿ ಅವರ ಮೂಲಕ ಸಂದೇಶ ನೀಡುವನು. ವೈದಿಕ ಋಷಿಗಳು ಸಹ ಅಂತಹ ದೈವೀಸಂದೇಶ ಗ್ರಹಿಸಿ ಬರೆದವರು. ಮೋಸೆಸ್, ಏಸು, ಮೊಹಮ್ಮದ್, ಬಸವಣ್ಣ ಮುಂತಾದವರೆಲ್ಲ ಆ ರೀತಿ ಪರಮಾತ್ಮನ ಕೃಪೆಯನ್ನು ಅವತೀರ್ಣಗೊಳಿಸಿಕೊಂಡು, ದೇವನ ಸಂದೇಶ, ಆದೇಶ ಸಾರಲು ಮಾಧ್ಯಮವಾದರು. ಹರಿಹರ ಮಹಾಕವಿ ಬಳಸುವ ಪದಪುಂಜ ಅರ್ಥಗರ್ಭಿತವಾಗಿದೆ. "ಕಾರುಣ್ಯಮಂ (grace) ನೀಡಿ, ಸಾಮರ್ಥ್ಯಮಂ (Power) ಹೇರಿ" ಎಂದು ಆತ ಈ ಅವತೀರ್ಣ ಕ್ರಿಯೆಯನ್ನು ಸಂಬೋಧಿಸುತ್ತಾನೆ. ನಿರಾಕಾರ ದೇವರು ತಾನೇ ನೇರವಾಗಿ ಯಾವ

ಧರ್ಮವನ್ನೂ ಸ್ಥಾಪಿಸಿಲ್ಲ. ತನ್ನ ಅನುಗ್ರಹ ನೀಡಿ ಅವರ ಮೂಲಕ ಧರ್ಮಗಳನ್ನು ಸ್ಥಾಪಿಸಿದ್ದಾನೆ.

ಶಿವನಿಂದ ಸ್ಥಾಪಿಸಲ್ಪಟ್ಟುದು ಶೈವ
ಏಸುವಿನಿಂದ ಕ್ರೈಸ್ತಧರ್ಮ
ಮೊಹಮ್ಮದರಿಂದ ಇಸ್ಲಾಂ
ಬುದ್ಧನಿಂದ ಬೌದ್ಧ ಧರ್ಮ
ಬಸವಣ್ಣನವರಿಂದ ಲಿಂಗಾಯತ ಧರ್ಮ
ಗುರುನಾನಕರಿಂದ ಸಿಖ್ ಧರ್ಮ

ಹೀಗೆ ರೂಪುಗೊಂಡು ಬಂದಿವೆ. ನೈಸರ್ಗಿಕ ಧರ್ಮಗಳಾದ ಯಹೂದಿ ಮತ್ತು ವೈದಿಕ ಧರ್ಮಗಳಿಗೆ ಓರ್ವ ಸ್ಥಾಪಕರಿಲ್ಲ. ಈ ನೈಸರ್ಗಿಕ ಧರ್ಮಗಳಲ್ಲಿ ಹಲವಾರು ಜನರ ವಿಚಾರಧಾರೆ ಒಟ್ಟುಗೂಡಿ ಸಾಗಿ ಬಂದಿರುತ್ತವೆ. ಆದ್ದರಿಂದ ಮುಂಡರಗಿ ಸ್ವಾಮಿಗಳವರ ವೀರಶೈವಕ್ಕೆ ಬಸವಣ್ಣನವರಿಗೆ ಏನೂ ಸಂಬಂಧವಿರಲಿಕ್ಕಿಲ್ಲ. ಲಿಂಗಾಯತ ಧರ್ಮಕ್ಕೆ ಮಾತ್ರ ಬಸವಣ್ಣನವರೇ ಧರ್ಮಗುರು ಸ್ಥಾಪಕ ಎಂಬುದು ನಿಸ್ಸಂದೇಹಪೂರ್ವಕ ಸತ್ಯ. ಆದ್ದರಿಂದ ಶ್ರೀ ಮೂಜಗಂ ಮತ್ತು ಮುಂಡರಗಿ ಸ್ವಾಮಿಗಳಿಗೆ ತಮ್ಮ ವೀರಶೈವಕ್ಕೆ ಸ್ಥಾಪಕರಿಲ್ಲ ಎನ್ನುವುದಕ್ಕೆ ಹಕ್ಕಿದೆಯೇ ವಿನಾ ನಮ್ಮ ಲಿಂಗಾಯತ ಧರ್ಮಕ್ಕೆ ಸ್ಥಾಪಕರಿಲ್ಲ ಎನ್ನುವುದಕ್ಕೆ ಹಕ್ಕಿಲ್ಲ.

ಧರ್ಮಗುರು-ಧರ್ಮದ ಗುರುಗಳು

ವ್ಯಕ್ತಿಗಳ ದೀಕ್ಷಾಗುರುವು ಧರ್ಮದ ಗುರುವೇ ವಿನಾ ಧರ್ಮ ಗುರುವಲ್ಲ. ದೀಕ್ಷಾಗುರು ಕೋಣೆಯನ್ನು ಬೆಳಗುವ ಟ್ಯೂಬ್‌ಲೈಟಿನಂತೆ, ಧರ್ಮಗುರು ಬ್ರಹ್ಮಾಂಡವನ್ನು ಬೆಳಗುವ ಭಾಸ್ಕರನಂತೆ. ಇಂದು ಬಹುಸಂಖ್ಯಾತ ಲಿಂಗಾಯತರು ದೀಕ್ಷಾವಂತರಾಗಿರುವುದೇ ಇಲ್ಲ. ಅವರಿಗೆ ದೀಕ್ಷಾಗುರು ಇರುವುದೇ ಇಲ್ಲ. ಆದರೆ ದೀಕ್ಷೆ ಆಗಿರಲಿ ಬಿಡಲಿ ಎಲ್ಲ ಲಿಂಗವಂತರಿಗೂ ಬಸವಣ್ಣ ಧರ್ಮಗುರುವು. ಮಾರ್ಕೋನಿಯು ರೇಡಿಯೋ ಕಂಡು ಹಿಡಿದ. ಇಂದು ಎಷ್ಟೋ ಜನ ರೇಡಿಯೋವನ್ನು ಜೋಡಿಸುತ್ತಾರೆ, ರಿಪೇರಿ ಮಾಡುತ್ತಾರೆ. ಆದರೆ ಮೂಲಸೂತ್ರ ಕಂಡು ಹಿಡಿದ ಮಾರ್ಕೋನಿಯನ್ನೇ ರೇಡಿಯೋ ಕಂಡು ಹಿಡಿದ ಜನಕ ಎನ್ನಲಾಗುವುದು.

ಹೀಗೆ ದೀಕ್ಷಾಗುರುವು ರೇಡಿಯೋ ರಿಪೇರಿ ಮಾಡುವವರಂತೆ ಅಥವಾ ರೇಡಿಯೋವನ್ನು ಅಸೆಂಬಲ್ ಮಾಡುವವನಂತೆ. ಧರ್ಮಗುರು ಬಸವಣ್ಣ ಇಷ್ಟಲಿಂಗ ಜನಕರಾಗಿ ರೇಡಿಯೋ ಕಂಡು ಹಿಡಿದ ವಿಜ್ಞಾನಿ ಮಾರ್ಕೋನಿಯಂತೆ. ರೇಡಿಯೋ ರಿಪೇರಿ ಮಾಡುವ ವ್ಯಕ್ತಿಯನ್ನು ಮಾರ್ಕೋನಿಗೆ ಹೋಲಿಸಬಾರದು, ದೀಕ್ಷಾಗುರುವನ್ನು ಧರ್ಮಗುರು ಎನ್ನಲು ಬಾರದು.

ಮಠಗಳು ಧರ್ಮ ಕ್ಷೇತ್ರಗಳೆ?

ಮಠಗಳು ಜ್ಞಾನಕೇಂದ್ರಗಳಾಗಬಹುದೇ ವಿನಾ ಧರ್ಮಕ್ಷೇತ್ರಗಳಾಗಲಾರವು. ಶರಣರು, ಶಿವಯೋಗಿಗಳ ಐಕ್ಯಸ್ಥಾನಗಳು ಪವಿತ್ರ ಕ್ಷೇತ್ರಗಳು ಎನಿಸಿಕೊಳ್ಳುವವು. ಹೀಗಾಗಿಯೇ

ಕೂಡಲಸಂಗಮ, ಉಳಿವೆ, ಎಡೆಯೂರು, ಸೊನ್ನಾಲಾಪುರ, ಗುಡ್ಡಾಪುರ ಮುಂತಾದವು ಸುಕ್ಷೇತ್ರವಾಗಿ ಅಭಿವೃದ್ಧಿ ಪಡೆದಿವೆ. ಧರ್ಮದ ಅನೇಕ ಮಹಾಪುರುಷರು ಐಕ್ಯರಾದ ಸ್ಥಾನಗಳು ಧರ್ಮದ ಕ್ಷೇತ್ರಗಳಾದರೆ, ಧರ್ಮಗುರು ಐಕ್ಯವಾದ ಕೂಡಲ ಸಂಗಮವು ಧರ್ಮಕ್ಷೇತ್ರವಾಗಬಲ್ಲುದು. ಅದರಲ್ಲೂ ಇಂದಿನ ಮಠಗಳು ಧರ್ಮಕ್ಷೇತ್ರಗಳು ಎಂದರೆ ಜನತೆ ಪಕ್ಕೆ ಹಿಡಿದುಕೊಂಡು ನಗದೆ ಇರಲಾರರು. ಮುಂಡರಗಿ ಶ್ರೀಗಳ ಸೂತ್ರಗಳನ್ನು ಓದಿ ಕೆಲವು ಮಠಗಳಿಗೆ ಹೋದರೆ ಮೆಡಿಕಲ್, ಇಂಜಿನಿಯರಿಂಗ್ ಸೀಟುಗಳಿಗೆ ಸೂಟುಕೇಸಿನಲ್ಲಿ ಹಣ ತಂದಿರುವರೆ ಎಂಬುದನ್ನು ಪರಿಶೀಲಿಸಿ ಧರ್ಮಕ್ಷೇತ್ರದೊಳಕ್ಕೆ ಪ್ರವೇಶ ನೀಡುವರು ಮತ್ತೆ ಕೆಲವು ಧರ್ಮ ಕ್ಷೇತ್ರಗಳೊಳಗೆ (ಅರ್ಥಾತ್ ಮಠಗಳೊಳಕ್ಕೆ) ಮಠಾಧಿಪತಿಗಳ ಪೂರ್ವಾಶ್ರಮದ ತಂದೆ, ಅಣ್ಣ, ತಮ್ಮ ಹತ್ತಿರದ ಬಂಧು ಬಳಗಕ್ಕೆ ಮಾತ್ರ ಪ್ರವೇಶ. ಒಂದೊಂದು ಮಠದ ವಿಶೇಷ ಒಂದು ಬಗೆಯದು. ಯಾವ ಧರ್ಮಾನುಯಾಯಿಯೂ ಧರ್ಮಕ್ಷೇತ್ರದ ವ್ಯಾಖ್ಯಾನವನ್ನು ಇಷ್ಟು ಅದ್ಭುತವಾಗಿ, ಮುಂಡರಗಿ ಶ್ರೀಗಳು ಕೊಟ್ಟಂತೆ ಕೊಡಲಾರರು.

ಅವರ ವೀರಶೈವದ ಧಾರ್ಮಿಕ ಸಂವಿಧಾನ ಆಗಮಗಳು. ಆಗಮಗಳನ್ನು ಧರ್ಮ ಸಂವಿಧಾನ ಎಂದ ಮೇಲೆ ಧರ್ಮಭಾಷೆ ಸಂಸ್ಕೃತ ಆಗಬೇಕು. ಧರ್ಮಭಾಷೆಯ ವಿಷಯಕ್ಕೆ ಬರುತ್ತಲೇ ಅದು ಕನ್ನಡ ಆಗಿಬಿಟ್ಟಿದೆ. ಇದೆಂತು ಸಾಧ್ಯ? ಅಲ್ಲದೆ ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಕೊಟ್ಟ ವಚನ ಸಾಹಿತ್ಯ ವೇದಾಗಮ ಅವಲಂಬಿತವಲ್ಲ. ಆಗಮಗಳಲ್ಲಿ ಹೇಳಲ್ಪಟ್ಟುದೇ ಸರಳವಾಗಿ ಕನ್ನಡದಲ್ಲಿ ವಚನಗಳ ರೂಪದಲ್ಲಿ ಹೇಳಲ್ಪಟ್ಟಿವೆ ಎಂಬುದು ಸಂಪೂರ್ಣ ಸುಳ್ಳು. ಆಗಮದ ಮೂಗ ಕೊಯ್ಯೆ ಎಂದು ಅವನ್ನು ಪರೀಕ್ಷೆಗೆ ಒಳಪಡಿಸಿದ ಬಸವಾದಿ ಪ್ರಮಥರಿಗೆ, ಅವರ ಸಾಹಿತ್ಯಕ್ಕೆ ಇಂಥ ಅಪಚಾರ ಮಾಡಬಾರದು. ನಮ್ಮ ಆದಿ ಶರಣರು ವೇದಾಗಮಗಳು ನಮ್ಮ ಪ್ರಮಾಣಗ್ರಂಥಗಳಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ವೇದಂಗಳ ಹಿಂದೆ ಹರಿಯದಿರು, ಹರಿಯದಿರು
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು
ಪುರಾಣಂಗಳ ಹಿಂದೆ ಬಳಲದಿರು, ಬಳಲದಿರು
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈಡಿದು
ಶಬ್ದ ಜಾಲಂಗಳಿಗೆ ಬಳಲದಿರು, ಬಳಲದಿರು

ಪಾತಾಳದಗ್ಘವಣಿಯ ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ
ತೆಗೆಯಬಹುದೇ? ಶಬ್ದ ಸೋಪಾನವ ಕಟ್ಟಿ ನಡೆಸಿದವರು ನಮ್ಮ
ಪುರಾತರು. ದೇವಲೋಕಕ್ಕೆ ಬಟ್ಟೆ ಕಾಣಿರೋ.
ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು
ಗೀತ ಮಾತೆಂಬ ಜ್ಯೋತಿಯ
ಬೆಳಗಕೊಟ್ಟರು ಕೂಡಲ ಚನ್ನಸಂಗನ ಶರಣರು.

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ನೂರೆಂಟರ ಅಧ್ಯಯನಕ್ಕೆ
ಶತರುದ್ರೀಯ (ಯಾಗ) ಸಮಬಾರದಯ್ಯ
ಎಮ್ಮ ವಚನದ ಸಾಸಿರಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನಾ.

ಹಾಲತೊರೆಗೆ ಬೆಲ್ಲದ ಕೆಸರು; ಸಕ್ಕರೆಯಂತಹ
ಮಳಲು, ತವರಾಜದಂತಹ ನೊರೆತೆರೆಗಳು, ಇಂತಪ್ಪ
ಆದ್ಯರ ವಚನವಿರಲು ಬೇರೆ ಭಾವಿಯ ತೋಡಿ
ಉಪ್ಪ ನೀರ ಸವಿದಂತಾಯಿತ್ತಯ್ಯ ಎನ್ನ ಯುಕ್ತಿ,
ನಿಮ್ಮ ವಚನಂಗಳ ಕೇಳದೆ ಅನ್ಯ ಪುರಾಣಂಗಳ ಕೇಳಿ
ಕೆಟ್ಟೆನಯ್ಯ ಕೂಡಲಸಂಗಮದೇವ.

ಆದ್ಯರ ವಚನ ಪರುಷ ಕಂಡಯ್ಯ! ಸದಾಶಿವನೆಂಬ ಲಿಂಗವ
ನಂಬುವುದು. ನಂಬಲೊಡನೆ ನೀ ವಿಜಯಿ ಕಂಡಯ್ಯ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ.

"ಆದ್ಯರ ವಚನ" ಎಂಬುದನ್ನು ಧೂರ್ತರು ಬಸವಾದಿ ಪ್ರಮಥರಿಗೆ ಮೊದಲು ಇದ್ದವರು ಎಂದು ಬಿಂಬಿಸಲು ಯತ್ನಿಸುತ್ತಾರೆ. ಆದ್ಯರು ಎಂದರೆ ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಎಂದರ್ಥ. ಇದು ನನ್ನ ವ್ಯಾಖ್ಯಾನವಷ್ಟೇ ಅಲ್ಲ. ಬಸವಣ್ಣನವರ ವಚನಗಳಿಗೆ ಅರ್ಥ ಬರೆದ ಟೀಕಿನ ವಚನಗಳಲ್ಲೂ ಇದನ್ನು ಸ್ಪಷ್ಟೀಕರಿಸಲಾಗಿದೆ.

ಶರಣರು ವಚನಗಳೇ ನಮ್ಮ ಪ್ರಮಾಣ ಶಾಸ್ತ್ರ ಎಂದಿದ್ದಾರೆ. ಮುಂಡರಗಿ ಶ್ರೀಗಳು ಮತ್ತು ಮಠಾಧಿಪತಿಗಳ ಒಕ್ಕೂಟ ಕಟ್ಟ ಬಯಸಿರುವ ಅನೇಕ ಮಠಾಧೀಶರು ಆಗಮಗಳೇ ತಮ್ಮ ಪ್ರಮಾಣ ಗ್ರಂಥ ಎನ್ನುತ್ತಾರೆ. ಅಂದಾಗ ನಮ್ಮ ವಚನ ಶಾಸ್ತ್ರ ಆಧಾರಿತ ಮಾರ್ಗ ಅವರ ಮಾರ್ಗ ಬೇರೆ ಬೇರೆ ಎಂಬುದು ಸ್ಪಷ್ಟವಾಗುತ್ತದೆ.

ಈ ಇಷ್ಟಲಿಂಗಧಾರಿ ಮಠಾಧೀಶರು ಅನುಸರಿಸುವ ಧರ್ಮ ಬಸವ ಪೂರ್ವದ್ದು ಎಂದು ಸಾಧಿಸುವ ಛಲವಿದ್ದರೆ, ಇವರಿಗೆ ಏನಾದರೂ ಸ್ವಾಭಿಮಾನ, ಪ್ರಾಮಾಣಿಕತೆ ಇದ್ದರೆ ವಚನ ಸಾಹಿತ್ಯವನ್ನು ಬಿಟ್ಟು ಅದನ್ನು ಉಲ್ಲೇಖಿಸದೆ ಆಗಮಗಳನ್ನು ಉಲ್ಲೇಖಿಸಿ ತಮ್ಮ ಧಾರ್ಮಿಕ ವಿಚಾರಗಳನ್ನು ಮಂಡಿಸಬೇಕು. ಇಸ್ಲಾಮನ್ನು ಪ್ರತಿಪಾದಿಸುವವರು ಕುರ್-ಆನ್ ಅನ್ನು, ಕ್ರೈಸ್ತ ಧರ್ಮವನ್ನು ಪ್ರತಿಪಾದಿಸುವವರು ಬೈಬಲ್ಲನ್ನು ಉಲ್ಲೇಖಿಸಿ ಮಾತನಾಡುತ್ತಾರೆ. ವೀರಶೈವ ಮಠಾಧಿಪತಿಗಳು ವಚನಗಳನ್ನು ಉಲ್ಲೇಖಿಸಿ ತಮ್ಮ ಧರ್ಮವನ್ನು ಪ್ರತಿಪಾದಿಸುವುದು

ಅತಾರ್ಕಿಕತೆ ಮತ್ತು ಅಪ್ರಾಮಾಣಿಕತೆಯಾಗುತ್ತದೆ. ತಮ್ಮ ಧರ್ಮವು ಆಗಮಗಳಲ್ಲಿ ಇದ್ದರೆ, ವೇದಗಳಲ್ಲಿ ಇದ್ದರೆ ಅದನ್ನೇ ಉಲ್ಲೇಖಿಸಲಿ. ವೀರಶೈವಕ್ಕೆ ಹೊರತಾದ ಲಿಂಗಾಯತ ಧರ್ಮವನ್ನು ಹಿಗ್ಗಾಮುಗ್ಗಾ ಎಳೆದಾಡಿ ಬಣ್ಣಗೆಡಿಸುವ ಅಪ್ರಾಮಾಣಿಕ ವರ್ತನೆ ಬಿಟ್ಟುಕೊಡಲಿ.

ಇನ್ನು ನಾವಾರೂ ಈ ಮಹಾವಿದ್ವಾಂಸರುಗಳ ಜೊತೆಗೆ ವಾದಕ್ಕೆ ಇಳಿಯುವ ಅಗತ್ಯವಿಲ್ಲ. ಏಕೆಂದರೆ ಅವರಾರಿಗೂ ನಿದ್ರೆ ಬಂದಿಲ್ಲ. ನಿದ್ರೆ ಬಂದಂತೆ ನಟಿಸುತ್ತಿದ್ದಾರೆ. ಅವರೀಗ ಒಂದೇ ಒಂದು ಪಂಥಾಹ್ವಾನ (Challenge) ನೀಡಬೇಕಾಗಿದೆ. ಯಾವುದೇ ಒಂದು ಧರ್ಮ ತನ್ನ ಅಸ್ತಿತ್ವವನ್ನು ಸಾಬೀತು ಪಡಿಸಬೇಕಾದರೆ ಅದಕ್ಕೆ ಬೇಕಾಗುವ ಮುಖ್ಯ ಅಂಶ ತನ್ನದೇ ಆದ ಸಾಹಿತ್ಯ. ಈ ವೀರಶೈವರಿಗೆ ಇರುವ ಸಾಹಿತ್ಯ ಯಾವುದು? ಅದು ವೇದವೇ ಇರಲಿ, ಆಗಮವೇ ಇರಲಿ ಅವುಗಳನ್ನೂ ಉಲ್ಲೇಖಿಸಿ ತಮ್ಮ ಧರ್ಮವನ್ನು ಪ್ರತಿಪಾದಿಸಲಿ. ಆಗಮ-ವೇದಗಳೊಡನೆ ಭಿನ್ನ ವಿಚಾರ ಹೊಂದಿರುವ ವಚನಗಳನ್ನು ಕುಲಗೆಡಿಸುವ ಅಥವಾ ತಪ್ಪು ತಪ್ಪಾಗಿ ಉಲ್ಲೇಖಿಸುವ ಹವ್ಯಾಸ ಬಿಡಲಿ.

ಕೆಲವು ಮಠಾಧಿಪತಿಗಳಲ್ಲಿರುವ ಅಪ್ರಾಮಾಣಿಕತನ ನೋಡಿದರೆ ಎಂಥವರೂ ನಿಬ್ಬೆರಗಾಗಬೇಕು. ಜಗತ್ತಿನಲ್ಲಿ ಯಾವ ಪಾದ್ರಿಯೂ ತನ್ನ ಧರ್ಮಗುರು ಏಸುವಿಗೆ ದ್ರೋಹ ಬಗೆಯುವುದನ್ನು ಕಾಣೆವು. ಯಾವ ಮುಸ್ಲಿಮ್ ಇಮಾಮ್, ಮೌಲ್ವಿಯು ತನ್ನ ಅಲ್ಲಾಹನಿಗಾಗಲಿ, ಪ್ರವಾದಿ ಮೊಹಮ್ಮದರಿಗಾಗಲಿ ದ್ರೋಹ ಬಗೆಯುವುದನ್ನು ಕಾಣೆವು. ವೀರಶೈವ ಮಠಾಧೀಶರು ಇಷ್ಟಲಿಂಗ ನಿಷ್ಠೆ-ಏಕದೇವೋಪಾಸನೆ ಹೊಂದಿರದೆ ದೇವರಿಗೂ ಎರಡು ಬಗೆಯುತ್ತಾರೆ. ಧರ್ಮಗುರು ಬಸವಣ್ಣನವರನ್ನು ಧರ್ಮಗುರು ಎಂದೊಪ್ಪಿ ಮನ್ನಿಸದೆ ಧರ್ಮಗುರುವಿಗೂ ದ್ರೋಹ ಬಗೆಯುತ್ತಾರೆ. ಗೇವರು ಧರ್ಮಗುರುವಿಗೇ ಎರಡು ಬಗೆಯುವವರು ಅವರ ದೃಷ್ಟಿಯಲ್ಲಿ ಯಕಃಶ್ಚಿತ್ ಆದ ಸಮಾಜವನ್ನುಅದಷ್ಟು ಕಳಕಳಿಯಿಂದ ನೋಡಿಕೊಂಡಾರು? ರಹಸ್ಯ ಸಭೆ ಕರೆದುಕೊಂಡು (ಮಠಾಧಿಪತಿಗಳ ಒಕ್ಕೂಟರಚಿಸಲು) ಇವರು ಮಾಡುವುದಾದರೂ ಏನು? ಧರ್ಮಪಿತ ಬಸವಣ್ಣನವರನ್ನು ಧರ್ಮಗುರು, ಲಿಂಗಾಯತ ಧರ್ಮ ಸಂಸ್ಥಾಪಕ ಎಂದು ಒಪ್ಪಬಾರದು, ವಚನ ಸಾಹಿತ್ಯವನ್ನು ಧರ್ಮಸಂಹಿತೆ ಎಂದು ಮನ್ನಿಸದೆ, ಆಗಮಗಳನ್ನು ಧರ್ಮಶಾಸ್ತ್ರ ಎನ್ನಬೇಕು ಎಂಬುದು ತಾನೆ? ಈ ವಿಷಯದಲ್ಲಾದರೂ ಅವರು ಪ್ರಾಮಾಣಿಕರಾಗಿದ್ದರೆ, ಎಷ್ಟೋ ಉಪಕಾರವಾಗುವುದು. ಇವರು ಕೆಲವರು ತಮ್ಮತಮ್ಮಮಠಗಳು ಧರ್ಮ ಪಿತ ಬಸವಣ್ಣನವರಿಗೂ ಪೂರ್ವದಲ್ಲಿ ಇದ್ದವು ಎಂದು ಹೇಳುವುದರಲ್ಲಿ, ಕೃತ್ರಿಮ ಸಾಹಿತ್ಯ ಸೃಷ್ಟಿಸುವುದರಲ್ಲಿ ಪೈಪೋಟಿ ನಡೆಸಿದ್ದಾರೆ. ವಿದ್ಯಾವಂತರಾದ ಅಧಿಕಾರಿಗಳು ಮಠಗಳ ಗದ್ದುಗೆಗೆ ಬಂದರೆ ಪ್ರಗತಿಪರ ಚಿಂತನೆ ನೆಲೆಗೊಳ್ಳುವುದು ಎಂದು ಭಾವಿಸಿದ್ದವರಿಗೆ ಭ್ರಮನಿರಸನ ಆಗುತ್ತಲಿದೆ. ಹಿಂದಿನ ಅನೇಕ ಮಠಾಧೀಶರುಗಳಲ್ಲಿ ಕಾಣಬರುತ್ತಿದ್ದ ಬಸವ ಭಕ್ತಿ, ಪ್ರಾಮಾಣಿಕತೆ ಸಹ ಈಗಿನ ಅನೇಕರಿಗೆ ಇಲ್ಲವಾಗಿದೆ. ಧರ್ಮಗುರು ಬಸವಣ್ಣನವರ ನೇತೃತ್ವದಲ್ಲಿ ಲಿಂಗಾಯತ ಧರ್ಮದ ನೂತನ ಪ್ರವಾಹ ಹರಿಯಲು ಹೊರಟಾಗ ಅನೇಕ ಪಾಶುಪತ, ಲಾಕುಲೀಶ, ಕಾಳಾಮುಖ, ಸಿದ್ಧ, ನಾಥ ಪಂಥಗಳವರು, ಮಠಗಳವರು ವೈದಿಕರು ಸಹ ಈ ಧರ್ಮವನ್ನು ಸ್ವೀಕರಿಸಿದರು. ಜಗತ್ತಿನಲ್ಲಿ ಯಾವುದೇ ಮಿಶನರಿ ಧರ್ಮ ಅಂದರೆ ಯಾರಿಗೆ ಬೇಕಾದರೂ ದೀಕ್ಷೆ ಕೊಡಬಲ್ಲ ಧರ್ಮಗಳಿಗೆ

ಹಿಂದಿನ ಮತ ಪಂಥ ಬಣಗಳವರು ಬಂದು ಸೇರುವುದು ಸಹಜ. (ಈ ಅಂಶವನ್ನು ಶ್ರೀ ಹೆಚ್. ಎಸ್. ಶಿವಪ್ರಕಾಶ್‌ರವರು ಮಹಾಚೈತ್ರದಲ್ಲಿ ಚಿತ್ರಿಸಿರುವುದನ್ನು ಗಮನಿಸಬಹುದು. ಇದೊಂದು ಅಂಶಸತ್ಯವೇ ಇದ್ದರೂ ಬಳಸಿರುವ ಭಾಷೆ, ಚಿತ್ರಿಸಿರುವ ರೀತಿ ಸರಿಯಿಲ್ಲ ಮತ್ತು ಉಳಿದೆಲ್ಲ ಸುಳ್ಳು ಸಂಗತಿಗಳು ಸೇರಿರುವ ಕಾರಣ ಮಹಾಚೈತ್ರವನ್ನು ಬಹಿಷ್ಕರಿಸಬೇಕಾಗಿದೆ.) ಶ್ರೀ ಡಾ| ಎಂ.ಎಂ. ಕಲಬುರ್ಗಿಯವರು 'ಕೆಟ್ಟಿತ್ತು ಕಲ್ಯಾಣ' ಎಂಬ ಇತ್ತೀಚಿನ ನಾಟಕ ಕೃತಿಯಲ್ಲಿ ಈ ಅಂಶವನ್ನು ಒತ್ತಿ ಒತ್ತಿ ಹೇಳಿದ್ದಾರೆ. ಅಗ್ರಹಾರದ (ವೈದಿಕ) ಪುರೋಹಿತಶಾಹಿ, ಶೈವ ಮಠಗಳು, ರಾಜಶಾಹಿ, ಕ್ರಾಂತಿಪುರುಷ ಬಸವಣ್ಣನವರನ್ನು ಹಿಂದೆ, ಇಂದು ತೆಗಳಿದರೆ ನಮಗೆ ಈಗ ಯಾವ ವಿಷಾದವೂ ಎನ್ನಿಸದು. ಇದವರ ಸಹಜ ನಡೆ, ಜಾತಿವಾದದ ಚೌಕಟ್ಟಿನಿಂದ ಹೊರಬರದವರಿಗೆ, ಬಹುದೇವತೋಪಾಸಕರಿಗೆ, ಅಹಂಭಾವಿಗಳಿಗೆ, ಒಡೆದು ಆಳುವ ನೀತಿ ಉಳ್ಳವರಿಗೆ ಧರ್ಮಗುರು ಬಸವಣ್ಣನವರು ದುಃಸ್ವಪ್ನವಾಗಿ ಕಾಡಿದರೆ ಆಶ್ಚರ್ಯವೇನಲ್ಲ. ಕರ್ನಾಟಕದಲ್ಲಿ ಕಾಳಾಮುಖ ಪರಂಪರೆಯ ಪ್ರಮುಖ ಮಠವಾಗಿದ್ದ ಸುತ್ತೂರು ಮಠ ಲಿಂಗವಂತ ಧರ್ಮವನ್ನು ಸ್ವೀಕರಿಸಿದ ನಂತರ ಲಿಂಗಾಯತ ಮಠವಾಗಿರುವುದು ದಾಖಲೆಗಳಲ್ಲಿ ನಿಚ್ಚಳವಾಗಿರುವಾಗ ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಳ್ಳುವ ಸಾಹಸವೇಕೆ? ಕೃತ್ರಿಮ ಸಾಹಿತ್ಯ ಸೃಷ್ಟಿಸುವವರ ತಲೆಯ ಮೇಲೆ ಅಪ್ಪಳಿಸುವಂತೆ ಶ್ರೀ ಘನಲಿಂಗದೇವರ ವಚನಗಳು ಸಾಕ್ಷಿ ನುಡಿಯುತ್ತವೆ. ಒಂದು ಹುಡುಗಿಗೆ ವಿಶಿಷ್ಟದಿನ ಮದುವೆಯಾಗುತ್ತದೆ. "ಆ ಹುಡುಗಿಗೆ ಇಂಥ ದಿನ ಲಗ್ನವಾಯಿತು; ಇಂಥವನ ಹೆಂಡತಿಯಾದಳು. ಆದರೆ ಆ ಹುಡುಗಿಗೆ ಮೊದಲೇ ಅಸ್ತಿತ್ವವಿತ್ತು" ಎಂದು ವಾದಿಸಿದರೆ ಎಷ್ಟು ಹಾಸ್ಯಾಸ್ಪದವೊ ಅಷ್ಟು ಹಾಸ್ಯಾಸ್ಪದವಾಗಿದೆ ಇವರುಗಳ ವಾದ. ಅನೇಕ ಶೈವ ಮಠಗಳವರು ಇಷ್ಟಲಿಂಗ ಸ್ವೀಕರಿಸಿ, ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದಾರೆ. ಆ ಧರ್ಮ ಸ್ವೀಕಾರಕ್ಕೆ ಮೊದಲು ಅಸ್ತಿತ್ವ ಇದ್ದಿರಬಹುದು. ಅದರಲ್ಲೇನು ವಿಶೇಷ?!.

ಧರ್ಮಪಿತ ಬಸವಣ್ಣನವರನ್ನು ಲಿಂಗಾಯತ ಧರ್ಮ ಸಂಸ್ಥಾಪಕರೆಂದು, ವಚನ ಸಾಹಿತ್ಯವನ್ನು ಧಾರ್ಮಿಕ ಸಂವಿಧಾನವೆಂದು, ಲಿಂಗಾಯತವು ಒಂದು ಸ್ವತಂತ್ರ ಧರ್ಮ ಎಂದು ದೃಢವಾಗಿ ನಂಬುವ ಸಮಾನ ವಿಚಾರಧಾರೆಯವರು ಒಂದುಗೂಡಬೇಕಾಗಿದೆ: ಧ್ರುವೀಕರಣಗೊಳ್ಳಬೇಕಾಗಿದೆ. ಫಿಶನ್ (ಒಡೆಯುವಿಕೆ) ಮತ್ತು ಫ್ಯೂಶನ್ (ಒಂದುಗೂಡುವಿಕೆ) ಜೀವ ವಿಜ್ಞಾನದ ಸಹಜಕ್ರಿಯೆ. ಭಿನ್ನಭಿನ್ನ ವಿಚಾರದವರು ಬೇರೆ ಬೇರೆಯಾಗಿ, ಸಮಾನ ವಿಚಾರದವರು ಒಂದುಗೂಡಬೇಕಾಗಿದೆ. ಧರ್ಮಗುರುವನ್ನಾಗಿ ಬಸವಣ್ಣನವರನ್ನು ಒಪ್ಪಿಕೊಳ್ಳದವರು (ಆದರೆ ಅವರು ಕೊಟ್ಟ ವಚನ ಸಾಹಿತ್ಯ ಬೇಕು ಎಂದು ಬಡಬಡಿಸುವವರು) ಹೇಗೆ ಒಂದು ಗೂಡಿ ರಹಸ್ಯ ಸಭೆ ಸೇರಿ ಒಕ್ಕೂಟವನ್ನು ಮಾಡುವ ತರಾತುರಿಯಲ್ಲಿರುವರೋ ಹಾಗೆ ಧರ್ಮಗುರು ಬಸವಣ್ಣನವರನ್ನು ಮೇಟಿಗೂಟವನ್ನಾಗಿ, ಶ್ರದ್ಧಾಕೇಂದ್ರವನ್ನಾಗಿ ಹೊಂದಿದವರು (ಅವರಂತೆ ರಹಸ್ಯ ಸಭೆ ಸೇರುವ ಅಗತ್ಯವೇನಿಲ್ಲ) ದೃಢ ನಿರ್ಧಾರವನ್ನು ಘೋಷಿಸುವುದು ಅಗತ್ಯವಿದೆ. ಮುಸುಕಿನೊಳಗಣ ಗುದ್ದಾಟ ನಿಲ್ಲಲಿ. ಧರ್ಮಾಧಿಕಾರಿಗಳನ್ನು ನಂಬಿದ ಜನತೆ ನೆಮ್ಮದಿಯಿಂದ ಧರ್ಮಮಾರ್ಗದಲ್ಲಿ ಸಾಗಲು ಅವಕಾಶ ಮಾಡಿಕೊಡುವುದು ಅವಶ್ಯವಿದೆ. ಸ್ಪಷ್ಟವಾಗಿ ಉಭಯ ವಿಚಾರದವರು ಬೇರೆ ಬೇರೆಯಾಗಿ ತಮ್ಮ ದಾರಿಯನ್ನು ನಿಚ್ಚಳ ಪಡಿಸಿಕೊಳ್ಳುವುದಕ್ಕೆ ಈಗ ಕಾಲವು ಮಾಗಿದೆ.

ಅತ್ಯಂತ ನಮ್ರವಾಗಿ ಲಿಂಗಾಯತ ಮಠಾಧೀಶರ ಮುಂದೆ ಈ ಮಾತುಗಳನ್ನು ಇಡುತ್ತೇನೆ. "ಮನೆಯ ತೊತ್ತಲಸಿದರೆ ಮನೆಯೊಡತಿ ಮಾಡಿಕೊಂಬಂತೆ," ಶರಣ ಚೇತನಗಳೇ ಇಂದು ಪುಟಿದೆದ್ದು ನಿಲ್ಲುತ್ತಿವೆ. ಬಸವ ತತ್ತ್ವದ ತೇರು ಹೊರಟಿದೆ. ಯಾರೂ ಯಾವ ಮಠಾಧೀಶರು, ಅವರ ಒಕ್ಕೂಟವು ಇದನ್ನು ನಿಲ್ಲಿಸಲಾರದು. ನಿಜ ಶರಣರ ಪ್ರಯತ್ನದಲ್ಲಿ ಶ್ರದ್ಧೆಯಿದೆ, ಕಳಕಳಿ ಇದೆ. ಸಮರ್ಪಣೆಯಿದೆ. ಆದಿ ಶರಣರು ಮಾಡಿದ ತ್ಯಾಗಬಲಿದಾನಗಳ ಪ್ರೇರಣೆ ಇದೆ. ಸಾಗಿರುವ ತತ್ತ್ವದ ತೇರಿಗೆ ಕೈ ಹಚ್ಚಿದವರು ಸಾರ್ಥಕ್ಯತೆ ಸಾಧಿಸುವರು, ವಿರೋಧಿಸಿದವರು ಸೃಷ್ಟಿಕರ್ತನ ಸಂಕಲ್ಪಕ್ಕೆ ವಿರುದ್ಧ ನಿಂತು ಆ ಸರ್ವಶಕ್ತನ ಅವಕೃಪೆಗೆ ಪಾತ್ರರಾಗುವರು. ನೀವು ಯಾರೇ ಕೈ ಹಚ್ಚಿರಿ ಬಿಡಿರಿ, ಸತ್ಯದ ತತ್ತ್ವದ ತೇರು ಸಾಗುವುದು. ನೀವು ಭಾಗಿಗಳಾಗದಿದ್ದರೆ ಒಂದು ಭಾಗ್ಯವನ್ನು ಕಳೆದುಕೊಂಡವರಾಗುವಿರಿ.

ಇದು ಹೃತ್ಪೂರ್ವಕವಾಗಿ ಮಾಡಿಕೊಂಡ ಮನವಿ.

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಕೂಡಲಸಂಗಮ.

ಬಸವ ಬಾನಿನ ತಾರೆ ಗಂಗಾ ಮಾತಾಜಿ

ಬಸವ ಬಾನಿನ ತಾರೆ ಜಯ ಗಂಗಾ ಮಾತಾಜಿ |ಪ|
ಬಸವ ತತ್ತ್ವದ ಜ್ಞಾನ ವಾಹಿನಿಯು ನೀವಾಗಿ

ಪೂಜ್ಯ ಲಿಂಗಾನಂದರ ಆಧ್ಯಾತ್ಮ ಸುತೆಯಾಗಿ
ಅಡಿಇಟ್ಟ ನೆಲದಲ್ಲಿ ದೀವಿಗೆಯ ಹಚ್ಚುತಾ
ಪ್ರವಚನದ ನಿಮ್ಮ ನುಡಿ ಮನಕಾಗಿ ಚೆನ್ನುಡಿಯು |೧|
ಬಸವಾ ಬಸವಾ ಎನುತ ಬಸವ ತತ್ತ್ವ ಸಾರಿ

ಪೂಜ್ಯ ಮಾತಾಜಿಯ ಕರಕಮಲ ಸಂಜಾತೆ
ಮಾತೆಯಂತೆಯೆ ಶ್ರೇಷ್ಠ ವಾಗ್ಮಿಯು ನೀವಾಗಿ
ಪೂಜ್ಯರೀರ್ವರ ಮನದ ಹೊಂಗಿರಣದ ಬೆಳಕೆ |೨|
ಅಕ್ಕ ಮಹಾದೇವಿಯ ಪೀಠವೇರುತಲಿಂದು

ಒಮ್ಮನದಿ ಮುನ್ನಡೆದು ಜಗದ್ಗುರುವು ಆಗಿಹಿರಿ
ಗುರುವರ್ಯರಾಣತಿಯ ಶಿರದಿ ಮೆರೆಸುತಲಿ
ಬೇಡುವೆವು ನಾವಿಂದು ಶ್ರೀಗುರು ಬಸವನಾ |೩|
ಹಾರಿಸಲಿ ನೀವೆಂದು ಎಲ್ಲೆಡೆಯು ಬಸವಧ್ವಜ

[ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಎರಡನೆಯ ಜಗದ್ಗುರುವಾಗಿ ಪೀಠಾರೋಹಣ ಮಾಡಲಿರುವ ಪೂಜ್ಯ ಗಂಗಾ ಮಾತಾಜಿಯವರನ್ನು ಕುರಿತು.]

—ಶರಣೆ ಭಾರತಿ ಕೆಂಪಯ್ಯ
ಬೆಂಗಳೂರು

8ನೇ ಪುಟದಿಂದ ಮುಂದುವರೆದ ಭಾಗ

ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆನಬೇಡ ಮುಂದಣ ಫಲದೊಳಗರಸಿಕೋ।
ಕಾಸಿ ಕರಗಿಸಿದ ಬಂಗಾರ ಕೆಟ್ಟಿತ್ತೆನಬೇಡ ಮುಂದಣ ಬಣ್ಣದೊಳಗರಿಸಿಕೋ।
ಹೊತ್ತಿಸಿದ ದೀಪ್ತಿ ಕೆಟ್ಟಿತ್ತೆನಬೇಡ ಮುಂದಣ ಅಗ್ನಿಯೊಳಗರಿಸಿಕೋ।

ಎಂದು ತಮ್ಮ ನಂಬಿಕೆ, ಮೌಲ್ಯ, ಸಾಧನೆ ಕುರಿತು ಭರವಸೆ ಇಟ್ಟುಕೊಂಡು ಹೋದ ಆದಿ ಶರಣರ ಮಾತುಗಳು ನಮಗೆ ದಿವ್ಯ ಆದೇಶಗಳು, ಅವನ್ನು ಭಯ ಭಕ್ತಿ ಶ್ರದ್ಧೆಯಿಂದ ಪಾರಾಯಣ-ಪಠಣ-ಅನುಷ್ಠಾನ ಮಾಡಬೇಕು. ವಚನಗಳು ಶರಣರಾಡಿದ ಕೇವಲ ಮಾತುಗಳಲ್ಲ, ಮಂತ್ರಗಳು.

ಸಮಾರೋಪದ ನುಡಿ

ಧಾರ್ಮಿಕ ಶಿಸ್ತು ಸದಭ್ಯಾಸ ಇಲ್ಲದಿರುವ ಈ ಸಮಾಜಕ್ಕೆ ಒಂದು ಶಿಸ್ತು ಅಳವಡಿಸಬೇಕಾಗಿರುವಾಗ ಕೆಲವು ಜನರು, ಚಿಕ್ಕ ಮಕ್ಕಳು ಶಾಲೆಗೆ ಹೋಗುವಾಗ ಹಠ ಮಾಡುವಂತೆ ನಾನಾ ಕಾರಣ ಹೇಳಿ ವಚನ ಪಠಣ ತಪ್ಪಿಸಿಕೊಳ್ಳಬೇಕು ಎನ್ನವರುಂಟು. ಇಂಥ ಒಂದು ಕಾರಣ, "ವಚನ ಪಠಣ ನಡೆಯುವಾಗ (ಸಭಾ ಮಂಟಪದಲ್ಲಿ ಕುಳಿತು ಪಠಿಸುವವರು ಬಿಟ್ಟರೆ) ಅನೇಕರು ಹೊರಗೆ ಓಡಾಡುತ್ತಲೇ ಇರುವರು. ಇದೇ ತೋರಿಸುತ್ತದೆ ವಚನ ಪಠಣದಲ್ಲಿ ಆಸಕ್ತಿ ಕಮ್ಮಿ ಎಂದು."

ಶರಣ ಮೇಳದ ಪ್ರಕ್ರಿಯೆ ಹೀಗಿದೆ. ಜನ ಸಮುದಾಯ ಎಂದರೆ ಹರಿಯುವ ನದಿಯಂತೆ, ಇಂಥ ನೀರನ್ನು ಶರಣ ಮೇಳವು ಶುದ್ಧೀಕರಿಸಬೇಕು. ಕೊಳವೆಗಳ ಮೂಲಕ ಫಿಲ್ಟರಿಂಗ್ ಕೇಂದ್ರಕ್ಕೆ ಬರುವ ನೀರಿನಂತೆ ಶರಣ ಮೇಳದ ಸಭಾಮಂಟಪದ ಒಳಗೆ ಕುಳಿತವರು. ಉಳಿದವರು ಹರಿವ ನದಿಯಂತೆ. ಅಂಥ ಜನ ಸಮೂಹದಿಂದಲೇ ತತ್ತ್ವನಿಷ್ಠರಾದ ಜನರನ್ನು ಎಬ್ಬಿಸಿ ಸಂಘಟಿಸಬೇಕಾಗುತ್ತದೆ, ನಂತರ ಸಂಸ್ಕರಿಸಬೇಕಾಗುತ್ತದೆ. ಶರಣ ಮೇಳವು ಒಂದು ರೀತಿಯಲ್ಲಿ ರಾಶಿ ಕೆಲಸವಿದ್ದಂತೆ. ಕಣದಲ್ಲಿ ಕೇರಿ ತೂರಿ ಕಾಳನ್ನು ರಾಶಿ ಮಾಡಿ, ಚೀಲಕ್ಕೆ ಇಡುವಂತೆ ಒಂದೊಂದು ಶರಣ ಮೇಳಕ್ಕೆ 50 ಸಾವಿರ ಜನರು ಜಾಸ್ತಿಯಾದರೆ, ಅದರ ಮಧ್ಯದಿಂದ ಒಂದು ಸಾವಿರ ಜನ ಸಜ್ಜನ-ಸದ್ಭಕ್ತರು, 10 ಜನ ನಿಜ ಶರಣರು ಸಿಕ್ಕರೆ ಶರಣ ಮೇಳವು ಸಾರ್ಥಕವಾದಂತೆ. ಬಿತ್ತಿದ ಬೀಜವೆಲ್ಲ ಮೊಳೆಯವು, ಮೊಳೆತವೆಲ್ಲ ಫಲಕೊಡವು. ಆದ್ದರಿಂದ ನಾವು ಗುರಿಯ ಕಡೆಗೆ ಗಮನಕೊಡಬೇಕು. ಸದಭ್ಯಾಸವಿಲ್ಲದ ಜನರಿಗೆ ಸದಭ್ಯಾಸ ಕಲಿಸಬೇಕು. ಹೊಸ ಹೋರಿಗಳು ಹೇಗೆ ನೊಗ ಹೊರಲಾರದೆ ಚಟಪಟಿಸುತ್ತವೋ ಹಾಗೆ ಮನುಷ್ಯನ ಪ್ರವೃತ್ತಿ. ಮುಸಲೀಮರು ಕುರಾನ್ ಪಠಣ, ಸಿಖ್ಖರು ಗ್ರಂಥ ಸಾಹೇಬ, ಇತ್ಯಾದಿ ಗ್ರಂಥಗಳನ್ನು ತಾಳ್ಮೆ, ಶ್ರದ್ಧಾಭಕ್ತಿಗಳಿಂದ ಓದುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಲಿಂಗಾಯತರ ಅಭಿರುಚಿ ಕೆಟ್ಟು ಪುರಾಣ, ಕೀರ್ತನ, ಕೆಳಮಟ್ಟದ ಹಾಸ್ಯ, ಅವೈಜ್ಞಾನಿಕ ಕಥೆ ಇಂಥವನ್ನು ಕೇಳುವ ಅಭ್ಯಾಸ ಬೆಳೆಸಿಕೊಂಡುದರಿಂದ ವಚನ ಪಠಣ, ಅಧ್ಯಯನಕ್ಕೆ ಹೊಂದಿಕೊಳ್ಳಲು ಕೊಂಚ ಕಾಲ ಹಿಡಿಯುತ್ತದೆ. ಹಾಗೆಂದು ನಾವು ತಾಳ್ಮೆ ಕೆಟ್ಟು ಅವರು ಬಯಸಿದಂತೆ ಕೊಡುತ್ತಾ ಹೋದರೆ ಇನ್ನಷ್ಟು ಅಭಿರುಚಿ ಕೆಡುತ್ತದೆ.

ಓಂ ಶ್ರೀಗುರುಬಸವಲಿಂಗಾಯನಮಃ

ಧಾರವಾಡ ನಗರದ, ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ 1996ರ ಏಪ್ರಿಲ್ 13, 14 ಮತ್ತು 15 ರಂದು ನಾಲ್ಕನೆಯ ಬಸವ ಧರ್ಮ ಸಮ್ಮೇಳನ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಸ್ಮರಣಾರ್ಥ ಪ್ರತಿವರ್ಷದ ಜನವರಿ 12 ರಿಂದ 15ರವರೆಗೆ ಶರಣ ಮೇಳವು ನಡೆದು ಬರುತ್ತಿದೆಯಷ್ಟೆ. ಮುಸಲೀಮರಿಗೆ ಮೆಕ್ಕಾ ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಗಯೆ, ಪವಿತ್ರ ಧರ್ಮಕ್ಷೇತ್ರಗಳಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಅರ್ಥಾತ್ ಲಿಂಗಾಯತ ಧರ್ಮಿಯರಿಗೆ ಧರ್ಮಕರ್ತ ಬಸವಣ್ಣನವರ ಐಕ್ಯಸ್ಥಾನವಾದ ಕೂಡಲ ಸಂಗಮವೇ ಧರ್ಮಕ್ಷೇತ್ರವಾದ ಕಾರಣ ಲಿಂಗಾಯತರು ವರ್ಷಕ್ಕೊಮ್ಮೆಯಾದರೂ ಒಂದು ಕಡೆ ಸೇರಿ ತಮ್ಮ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕು ಎಂಬುದೇ ಶರಣ ಮೇಳದ ಉದ್ದೇಶ. ಅಂತಹ ಶರಣ ಮೇಳವು 1993ರ ಜನವರಿಯಲ್ಲಿ ನಡೆದಾಗ, ಆ ಮಹಾಗಣಸಭೆಯಲ್ಲಿ ಒಂದು ನಿರ್ಣಯವನ್ನು ಕೈಗೊಳ್ಳಲಾಯಿತು. ಎಲ್ಲೆಡೆಯಲ್ಲಿ ಚದುರಿ ಹೋಗಿರುವ ಲಿಂಗವಂತ ಧರ್ಮೀಯರನ್ನು ಸಂಘಟಿಸಲು ಸಂಸ್ಕಾರ ನೀಡಲು ಮತ್ತು ಏಕರೂಪದ ಆಚಾರ ವಿಚಾರಗಳನ್ನು ಸಮಾಜದಲ್ಲಿ ತರಲೋಸುಗ ವರ್ಷಕ್ಕೊಮ್ಮೆ ಇನ್ನಿತರ ಸ್ಥಳಗಳಲ್ಲೂ ವಾರ್ಷಿಕವಾಗಿ ಒಂದು ಸಮ್ಮೇಳನ ನಡೆಸಬೇಕೆಂದು ಲಿಂ|| ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ನಿರ್ಧರಿಸಲಾಯಿತು.

ಪ್ರಥಮ ಬಸವ ಧರ್ಮ ಸಮ್ಮೇಳನವನ್ನು ತಮಿಳುನಾಡಿನ ಊಟಿಯ ಪರಿಸರದಲ್ಲಿರುವ ಕಾಟೇರಿ, ಸಕಲಟ್ಟಿಯಲ್ಲಿ, ಎರಡನೆಯ ಸಮ್ಮೇಳನವನ್ನು ಆಂಧ್ರದ ರಾಜಧಾನಿ-ಹೈದರಾಬಾದಿನಲ್ಲೂ, ಮೂರನೆಯ ಸಮ್ಮೇಳನವನ್ನು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲೂ ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು. ನಾಲ್ಕನೆಯ ಸಮ್ಮೇಳನವನ್ನು ಧಾರವಾಡ ನಗರದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ ಏಪ್ರಿಲ್ 13, 14 ಮತ್ತು 15 ರಂದು ನಡೆಸಲು ಯೋಜಿಸಲಾಗಿದೆ.

ಶನಿವಾರ ದಿ. 13-4-1996ರಂದು ಬೆಳಿಗ್ಗೆ 10 ಗಂಟೆಗೆ ಧ್ವಜಾರೋಹಣ ಮತ್ತು ಉದ್ಘಾಟನೆ, ಸಂಜೆ 5-30ಕ್ಕೆ ಧರ್ಮಚಿಂತನೆಗೋಷ್ಠಿ.

ಭಾನುವಾರ ದಿ. 14-4-1996 ರಂದು ಬೆಳಿಗ್ಗೆ ೧೦ ಗಂಟೆಗೆ ಧ್ವಜಾರೋಹಣ ಮತ್ತು ಸಮುದಾಯ ಪ್ರಾರ್ಥನಾ ಸಭೆ, ಸಂಜೆ 5-30 ಕ್ಕೆ ಧರ್ಮ ಚಿಂತನಗೋಷ್ಠಿ.

ಸೋಮವಾರ ದಿ 15-4-1996ರಂದು ಬೆಳಿಗ್ಗೆ 9-30ಕ್ಕೆ ಪಥ ಸಂಚಲನ, ಮೆರವಣಿಗೆ, ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ

ವಿಶೇಷ ಸೂಚನೆ : ಬೆಳಗಿನ ಕಾರ್ಯಕ್ರಮಗಳು ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ ನಡೆಯುತ್ತವೆ. ಸಂಜೆಯ ಕಾರ್ಯಕ್ರಮವು ಧಾರವಾಡ ನಗರದ ಕಡಪಾ ಮೈದಾನದಲ್ಲಿ ರೂಪುಗೊಂಡ ಪ್ರವಚನ ಮಂಟಪದಲ್ಲಿ ನಡೆಯುತ್ತವೆ.

ಇಂಥ ಸಮ್ಮೇಳನವನ್ನು ನಡೆಸುವುದರಿಂದ ಶರಣ ಬಂಧುಗಳೆಲ್ಲ ಒಟ್ಟಾಗಿ ಸೇರಲು, ಸಂಸ್ಕಾರ ಹೊಂದಲು, ಸಂಘಟನೆಯಾಗಲು, ಸಮಾನತಾ ಮನೋಭಾವ ಪಡೆಯಲು, ಧಾರ್ಮಿಕ

ಸೋದರರೆಂಬ ಆತ್ಮೀಯತೆ ಹೊಂದಲು ವಾತಾವರಣ ನಿರ್ಮಾಣವಾಗುವುದು. ಬಸವಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷೆಯಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ಮಾರ್ಗದರ್ಶನದಲ್ಲಿ ನಡೆಯಲಿದೆ. ಈ ಸಮ್ಮೇಳನದಲ್ಲಿ ಹಲವಾರು ಪೂಜ್ಯರು, ಗಣ್ಯರು, ರಾಜಕೀಯ ನೇತಾರರು ಭಾಗವಹಿಸಿ ಉಪನ್ಯಾಸ ಮಾಡಲಿದ್ದಾರೆ. ಸಮ್ಮೇಳನದ ನಿರ್ವಹಣೆಗಾಗಿ ಬೃಹತ್ ಪ್ರಮಾಣದ ಖರ್ಚು ಬರಲಿದ್ದು, ತಮ್ಮೆಲ್ಲರ ಸಹಾಯ, ಸಹಕಾರ ಅತ್ಯಗತ್ಯ. ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ವಿವರಗಳನ್ನು ನೀಡಲಾಗಿದೆ.

ಮಹಾಪೋಷಕರು	:	10,000 ರೂಗಳಿಗೆ ಮೇಲೆ ಕೊಟ್ಟವರು
ಪೋಷಕರು	:	5,000 ರೂ
ದಾನಿಗಳು	:	1,000 ರೂ
ಹಿತೈಷಿಗಳು	:	500 ರೂ
ಪ್ರತಿನಿಧಿಶುಲ್ಕ	:	100 ರೂ

ಬಂದಂತಹ ಪ್ರತಿನಿಧಿಗಳಿಗೆ ಸೂಕ್ತವಾದ ಊಟ-ವಸತಿಯ ವ್ಯವಸ್ಥೆ ಮಾಡುವ ಹೊಣೆಗಾರಿಕೆ ನಮ್ಮ-ನಿಮ್ಮ ಮೇಲಿದೆ. ಆದ್ದರಿಂದ ತಾವೆಲ್ಲರೂ ಉದಾರವಾಗಿ ದೇಣಿಗೆ ನೀಡಬೇಕೆಂದು ಕೋರುತ್ತೇವೆ. ಸಮ್ಮೇಳನದ ಖರ್ಚುಪೂರೈಸಿ, ಹಣವು ಉಳಿದರೆ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಆವರಣದಲ್ಲಿ, ಬಸವಾಲಯ, ಶ್ರೀ ಅಕ್ಕಮಹಾದೇವಿ ಯೋಗಮಂಟಪ, ಬಸವೇಶ್ವರ ಕಲ್ಯಾಣ ಮಂಟಪ ಶರಣ ಮಂಟಪಗಳನ್ನು ಕಟ್ಟಲು ಯೋಜಿಸಲಾಗಿದೆ.

ಶರಣರ ಬರವೆಮಗೆ ಪ್ರಾಣಜೀವಾಳ

ಶರಣ. ಎನ್. ಪುಟ್ಟರುದ್ರಪ್ಪ
ಕಾರ್ಯಾಧ್ಯಕ್ಷರು, ಪೀಠಾರೋಹಣ
ಸಮಿತಿ ಮತ್ತು ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀಮಾತೆ ಅಕ್ಕಮಹಾದೇವಿ
ಪ್ರಧಾನ ಸಂಚಾಲಕಿ

ಸಮ್ಮೇಳನ ವ್ಯವಸ್ಥಾಪಕರು

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾರೋಹಣ ಸಮಿತಿ ಮತ್ತು ಲಿಂಗಾಯತ ಧರ್ಮ ಮಹಾಸಭಾ (ರಿ), ಬೆಂಗಳೂರು

ಸಂಪರ್ಕಿಸುವ ವಿಳಾಸಗಳು :

ಲಿಂಗಾಯತ ಧರ್ಮ ಮಹಾಸಭಾ (ರಿ)
ಬಸವ ಮಂಟಪ, 2035
20ನೇ ಮೇನ್, 2ನೇ ವಿಭಾಗ
ರಾಜಾಜಿನಗರ,
ಬೆಂಗಳೂರು - 560 010
ದೂರವಾಣಿ : 080/3325335

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ
ಪೀಠಾರೋಹಣ ಸಮಿತಿ
ಜಗನ್ಮಾತಾ ಅಕ್ಕಾಮಹಾದೇವಿ ಆಶ್ರಮ
ಉಳವಿ ರಸ್ತೆ, ರೇಲ್ವೆಗೇಟ್ ಬಳಿ
ಧಾರವಾಡ - 580 003
ದೂರವಾಣಿ : 083641005



ಗುಲಬುರ್ಗಾ ವಿಶ್ವವಿದ್ಯಾಲಯಕ್ಕೆ "ಬಸವೇಶ್ವರ ವಿಶ್ವವಿದ್ಯಾಲಯ" ಎಂದು ಹೆಸರಿಡಲು ಆಗ್ರಹಿಸಿ ಜಯದೇವಿ ತಾಯಿಯವರ-
ಜೊತೆಗೆ ಬೆಂಗಳೂರು ರಾಷ್ಟ್ರೀಯ ಬಸವ ದಳದವರು ಮುಖ್ಯಮಂತ್ರಿ ನಿವಾಸದ ಮುಂದೆ ಧರಣಿ ನಡೆಸುತ್ತಿರುವ ಭಾವಚಿತ್ರ



ಶರಣ ಮೇಳ ಉತ್ಸವ ಸಮಿತಿ
ಮಹಾಮನೆ ಮಹಾಮಠ
ಕೂಡಲ ಸಂಗಮ -587 115
ತಾ-ಹುನಗುಂದ, ಜಿ-ಬಿಜಾಪುರ

Sharana Mela Utsava Samithi
Mahamane Mahamatha
Kudala Sangama - 587 115
Tq-Hungunda, Dt-Bijapura